A.—Sri H. M. CHANNABASAPPA (Minister for Industries).—

(*a*) Four tanks in the year 1955.

(*b*) Restoration of one tank is in progress and arrangements have been made to start the work of another tank.

(*c*) The estimate in respect of the third tank is under scrutiny and tenders have been called for in respect of the remaining one.

(*d*) Yes.

Message from the Rajpramukh.

Mr. SPEAKER.—I have received the following message from the Rajpramukh in reply to the Condolence of the House sent to His Highness the Rajpramukh in connection with the demise of Her Highness the Dowager Maharani of Mysore :

" To

The Members of the Legislative Assembly.

I have received from the Speaker the expression of your sympathy in the sad demise of Her Highness the Dowager Maharani of Mysore, and am most grateful to you for the same".

PAPERS LAID ON THE TABLE.

Sri T. CHANNIAH (Minister for Public health and Local Self-Government).—As promised by the Law Minister in connection with the adjournment motion tabled by Sri S. Gopala Gowda, I beg to lay on the table of the House the Memorandum of Settlement arrived at in the industrial dispute between the workers and Management of the Mysore Sugar Co.,Ltd., Mandya.

Sri T. MARIAPPA.—What is the total amount involved in the matter of giving concessions to the labour ?

Sri T. CHANNIAH.—I will be able to furnish the information later on, Sir.

Notifications.

Sri T. CHANNIAH (Minister for Public Health and Local Self-Government).—Sir, I beg to lay on the table copies of the following Notifications :

1 T. 9298/R.T. 118-52-10, dated 12th March 1956.

2 T. 9302/R.T. 35-55-16, dated 12th March 1956.

3 9333/R.T. 35-55-17, dated 13th March 1956.

4 9346/R.T. 213-55-3, dated 13th March 1956.

issued under the Mysore Motor Vehicles Act, 1939.

List of Promises.

Sri T. CHANNIAH (Minister for Public Health and Local Self-Government).—Sir, I beg to lay on the table of the House the list of promises made by Government during Budget sessions of 1953-54, October Session, 1954 and Budget Session, 1955 and the action taken thereon.

Mr. SPEAKER.—Demands for grants.

BUDGET FOR 1956-57—DEMANDS FOR GRANTS.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ಖೋತಾ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಡಿಮ್ಯಾಂಡ್ಸ್‌ಗೆ ಕಾಲ ನಿಗದಿಮಾಡಿ ಹಿಂದಿನಂತೆ ಅವುಗಳ ಮೇಲೆ ಮಾತನಾಡಲು ಅವಕಾಶವೀಯುವುದು ಸೂಕ್ತ. ಕಾಲ ನಿಗದಿ ಮಾಡುವಾಗ ಈ ದಿವಸ 3 ಡಿಮ್ಯಾಂಡುಗಳು ಇರುವುದಕ್ಕೆ ಸುಮಾರು $2\frac{1}{2}$ ಗಂಟೆ ಕಾಲವಿದೆ. ಆದ್ದರಿಂದ ಲ್ಯಾಂಡ್ ರೆವೆನ್ಯೂಗೆ ಒಂದು ಘಂಟೆ, ಜನರಲ್ ಅಡ್ಮಿನಿಸ್ಟ್ರೇಷನ್ನಿಗೆ $1\frac{1}{4}$ ಗಂಟೆ, ಫ್ಯಾಮಿನ್ನಿಗೆ 15 ನಿಮಿಷ ಎಂದು ಗೊತ್ತುಮಾಡಬಹುದು. ಮಾನ್ಯ ಸಭೆಯವರು ಇದಕ್ಕೆ ಒಪ್ಪುತ್ತಾರೆಂದು ನಂಬಿದ್ದೇನೆ.

Members' Representations.

Sri Mulka GOVINDA REDDY (Chitaldrug).—Sir, I have got some remarks to make regarding the suggestion made just now by my friend and also regarding some other important matter. Sir, I am sorry to observe that the questions tabled by the

members in the opposition are not coming up before this House. It is really regretable that at a time when general elections are approaching fast most of the questions tabled by most of the Congress members are being answered. It is unfortunate that in spite of the long time that has been allowed to Government to furnish answers to questions, questions tabled by Opposition members are not at all being answered. I request that the Chair will take sufficient interest to see that questions tabled by the members of the Opposition are answered.

Secondly, though it is embarrassing to the Speaker, I am constrained to state, during the discussion on the Budget though members of the Opposition Party rose many a time in their seats to offer remarks on the Budget, they were not given sufficient opportunity whereas members of the Congress Party were given ample and over Opportunity. It is very unfortunate that such a thing is continued.

Regarding the cut motions, we agree with the suggestion made by Sri Huchmasthy Gowda on the understanding that it is the right of the members of the Opposition to table cut motions and if cut motions are not taken up, if general discussion on the Demands take splace, it should be the prerogative right of the members of the Opposition to take part in this debate. I would urge upon the Hon'ble Speaker to allow no time to the members of the Congress Party to offer remarks on these Demands.

Sri A. V. NARASIMHA REDDY (Bangalore South).—My friend Sri Mulka Govinda Reddy just now said that in providing answers to questions there has been some partiality shown in this House. It is very unfair on the part of the member, Sir, to have made such an allegation without knowing the number of questions answered so far and out of them the number of questions that belong of the Treasury Benches. Such a remark in a general fashion would not bring any credit to anybody.

Sri Mulka GOVINDA REDDY.—I have placed a personal charge and it is for the Government to reply and not my friend.

*Sri T. MARIAPPA (Mysore-North).—Sir, it would be perfectly legitimate for my Honb'le friend Sri Mulka Govinda Reddy to plead that more facilities, more opportunities in participating in the Budget discussion must be given to them. It would have been much better if he had not made further remarks that the Chair was unduly partial. In fact we know that Sri K. Puttaswamy and several other members on this side urged on you repeatedly and they stood for hours together to get an opportunity to speak on the Budget. My friends Sri Nagiah Reddy and Sri Venkatappa had to sit down without getting an opportunity. All of us agree that the Opposition should be given more opportunity; there is no difference of opinion on this whatsoever. But, at the same time, he should not throw any aspersions on the Chair with regard to the discretion vested in it while calling upon the speakers.

Sri Mulka GOVINDA REDDY.—I am sorry; I have not cast any aspersions on the Chair but I have said the fact which you cannot deny.

*Sri V. M. MASCARENHAS (St. John's Hill).—I would like to add a few words. Sri Mulka Govinda Reddy should not forget that his Party consists of 8 members and three of them have been given the opportunity to participate in the debate; whereas there are 80 members belonging to the Congress Party and only 8 members were given the chance. Therefore, before the Hon'ble Member makes any remarks, he should analyse the facts and come to conclusions.

*Sri A. G. RAMACHANDRA RAO (Minister for Law and Education).—The allegations made by the Hon'ble Member is rather serious in stating that there has been invidious distinction in the selection of questions to furnish answers. Probably the member forgets that it is not the Government that arranges the business, but it is the Hon'ble Speaker. Questions are selected by ballot and answers are given. With regard to the questions that are referred to the departments for answers, I may assure

(SRI A. G. RAMACHANDRA RAO.)

the Hon'ble Members that in spite of very heavy work, no paper is pending with me. Similarly, all the Ministers are inclined to see that the maximum work is done. So, there is no foundation for the allegation made with regard to the selection of questions.

Regarding the discussion on the Budget, Hon'ble Member knows that the Chair acted very impartially and the allegation is baseless.

*SRI K. S. VASAN (Kolar Gold Fields).—Sir, firstly, questions are not selected by ballot. Secondly, as far as I have understood Sri Mulka Govinda Reddy, he said that the Government is slow in sending up answers for the questions tabled by the members of the Opposition.

MR. SPEAKER.—With regard to the selection of questions Hon'ble Member Sri Mulka Govinda Reddy knows the well-known practice that is adopted even in previous years. We print the questions and answers according to the date of receipt of answers. Therefore, we have printed so far the questions for which answers have been received by the office earlier. Other questions will come up during the course of the session. I will see that every question is answered during this session. The Government will also bear in mind to send answers as early as possible if they have not sent them already. Therefore, there is no necessity to urge on behalf of the Opposition that answers are not being furnished.

Another remark made by Sri Mulka Govinda Reddy was that members of the Opposition are not given sufficient opportunity. Even if I have erred, I am prepared to rectify it. I would like to impress on the Hon'ble Members that no partiality will be shown either to the Opposition or the Ruling Party. To my knowledge, I think I have acted fairly. Of course, it is not possible to satisfy every member of the House. That difficulty is there. Still, I would try to give as much opportunity as possible to members of the Opposition That is all I could say in this behalf.

Regarding cut motions, I hope Hon'ble Members are agreeable to the procedure suggested by Sri Huchmasthy Gowda.

SEVERAL HON'BLE MEMBERS.—Yes.

MR. SPEAKER.—So, one hour and fifteen minutes for the Demand regarding 'Land Revenue', one hour and fifteen minutes for 'General Administration' and fifteen minutes for 'Famine'.

SRI H. M. CHANNABASAPPA (Minister for Industries).—I would like to submit that on Saturdays different timings should be fixed for question hour in the two Houses, or questions pertaining to the Ministers present may be taken up in this House and questions pertaining to the other Ministers may be suggested to be taken up later. Otherwise, it so happens that simultaneously Ministers will have to answer questions here as well as in the other House and therefore, the privileges of the members will be curtailed and also it will be difficult for us to adjust ourselves.

SRI A. V. NARASIMHA REDDY.—They could as well arrange the Upper House to meet an hour later. That would solve the entire problem.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ನನ್ನ ಒಂದು ಫಿರ್ಯಾದು ತಮ್ಮಲ್ಲಿ ನಿನ್ನೆಯ ದಿವಸ ಅರಿಕೆ ಮಾಡಿಕೊಂಡದ್ದು—"ಮುಖ್ಯ ಮಂತ್ರಿಗಳು ನನಗೆ ಅವಮಾನ ಮಾಡಿದರು" ಎಂಬ ವಿಚಾರ ತಮ್ಮ ಮುಂದೆ ಇಟ್ಟಿದ್ದೆನು. ಆ ವಿಚಾರದಲ್ಲಿ ಇನ್ನೂ ಏನೂ ತೀರ್ಮಾನವನ್ನು ತಾವು ಕೊಟ್ಟಿಲ್ಲ.

MR. SPEAKER.—I have said I will consider that point and make a statement on Monday.

SRI MULKA GOVINDA REDDY.—I have got some other submission to make. Yesterday you were pleased to state that a certain word used by Sri Nagiah Reddy should be expunged. I would like to know the reasons for expunging that word. As far as I know, that word 'stupidity' or 'stupid' is not unparliamentary.

MR. SPEAKER.—I have already said I will give a statement.

*SRI M. PALANIYAPPAN.—The Chair was kind enough to give a ruling. I do not know why Sri Mulka Govinda Reddy has again raked up the matter.

MR. SPEAKER.—I will consider that point and make a statement. I have

it is not unparliamentary, but it not proper. I will examine that give a statement.

Sri M. PALANIYAPPAN.—If I am rect, you were pleased to say that would expunge the word from the ceedings. You have given a ruling after a definite ruling has been en, I do not see any reason why Mulka Govinda Reddy . . .

Mr. SPEAKER.—I do not know y the Hon'ble Members are anxious complicate matters. Is it in the erests of the House? I have noted at you have said and I will give a tement. It pains me to bring it to notice of the House that unless all members co-operate it is not possible carry on the proceedings, but if the n'ble Members carry prejudices even the debate and raise objection at ery point, you know the dignity of House will be brought down and will not be possible to carry on the oceedings. Therefore, I would quest all the members to co-operate ith me in carrying on the proceedgs.

DEMAND No. 1--LAND REVENUE

7. LAND REVENUE.

Mr. SPEAKER.—Motion moved:

"That a sum not exceeding Rs. 61,88,000 be granted to the Government to defray the charges which will come in course of payment during the year ending 31st day of March, 1957, in respect of 'Land Revenue'."

(SRI K. PUTTASWAMY rose.)

Mr. SPEAKER.—The time limit will be fixed for each member to speak. Three minutes.

Sri K. PUTTASWAMY.—Five minutes?

Mr. SPEAKER.—Yes.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—ಸ್ವಾಮಿ, ಈ ಬಾಬಿನ ಮೇಲೆ ಮಾತನಾಡುತ್ತ ಒಂದು ವಿಷಯವನ್ನು ಈ ಮಾನ್ಯ ಸಭೆಯ ಮೂಲಕ ಸರ್ಕಾರದವರ ಗಮನಕ್ಕೆ ಬರಬೇಕೆಂದು ನಾನು ಇಚ್ಛೆಪಟ್ಟಿದ್ದೇನೆ.

ಅದು ಈ ಜಿಲ್ಲಾ ಕಛೇರಿಗಳ ಆಡಳಿತಕ್ಕೆ ಸಂಬಂಧಪಟ್ಟ ವಿಚಾರ. ಈ ದಿವಸ ಈ ಕಛೇರಿಗಳ ಆಡಳಿತ ಒಂದು ಸರಿಯಾದ ವ್ಯವಸ್ಥೆಯಲ್ಲಿ, ಜನರಿಗೆ ಸಂಪರ್ಕವಾಗಿರತಕ್ಕಂಥ ರೀತಿಯಲ್ಲಿ, ನಡೆಯುತ್ತಿಲ್ಲ ಎಂಬ ಅಂಶವನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಈ ಡಿಸ್ಟ್ರಿಕ್ಟ್ ಚಾರ್ಜಿನಲ್ಲಿರುವ ಅಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಗೊಳಪಟ್ಟಿರುವ ಕೆಲಸ ಕಾರ್ಯ ನಡೆಸತಕ್ಕ ಸಂದರ್ಭಗಳಲ್ಲಿ ಸಂಚಾರ ನಡೆಸಬೇಕಾದದ್ದು ಅಗತ್ಯವಾಗೇನೋ ಇರುತ್ತದೆ . . . .

Mr. SPEAKER.—Your point for discussion can be raised under Demand No. 11.

ಶ್ರೀ ಕೆ. ಪುಟ್ಟಸ್ವಾಮಿ.—ಲ್ಯಾಂಡ್ ರೆವಿನ್ಯೂ ಎನ್ನುವ ಹೆಡ್ಡಿನಲ್ಲಿಯೂ ಈ ಡೆಪ್ಯುಟಿ ಕಮಿಷನರ್‌ಗಳ ವಿಚಾರ ಬರುತ್ತದೆ. ಆದರೂ ಆ ಡಿಮ್ಯಾಂಡ್ ಚರ್ಚೆಗೆ ಬಂದಾಗಲೇ ನಾನು ಮಾತನಾಡುತ್ತೇನೆ.

*ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ ತಾಲ್ಲೂಕು).—ಸ್ವಾಮಿ, ನಾನೀಗ ಸರ್ಕಾರದವರು ಈ "ಡಿಮ್ಯಾಂಡ್ ನಂಬರ್ 7— ಜಮೀನು ಕಂದಾಯ" ಎಂಬ ಬಾಬಿನಲ್ಲಿ ಕೇಳಿರತಕ್ಕ ರೂ. 61,88,000 ಗಳ ಮನವಿಯ ಬಗ್ಗೆ 100 ರೂಪಾಯಿಗಳ ಖೋತಾ ಸೂಚಿಸಿ ಕಳುಹಿಸಿರತಕ್ಕ ನನ್ನ ನಿರ್ಣಯದ ಬಗ್ಗೆ ಪ್ರಸ್ತಾಪ ಮಾಡುತ್ತ ಸರ್ಕಾರದವರ ಗಮನಕ್ಕೆ ಈ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಒಂದೆರಡು ವಿಷಯಗಳನ್ನು ತರಲು ಇಚ್ಛೆಪಟ್ಟಿದ್ದೇನೆ.

ಸ್ವಾಮಿ, ಈ ರೈತರುಗಳು ತಮ್ಮ ಜಮೀನುಗಳನ್ನು ಮತ್ತೊಬ್ಬರಿಗೆ ಖರೀದಿ ಮೂಲಕ ಮಾರಾಟ ಮಾಡತಕ್ಕ ಸಮಯದಲ್ಲಿ, ಆ ಖರೀದಿ ಪತ್ರಗಳು ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ರಿಜಿಸ್ಟರ್ ಆಗತಕ್ಕ ಕಾಲದಲ್ಲೇ ಈ ಜಮೀನುಗಳನ್ನು ಪೋಡಿ ಮಾಡತಕ್ಕ ಎಂದರೆ ಆ ಜಮೀನುಗಳನ್ನು ಸರ್ವೆ ಮಾಡಲು ಮತ್ತು ಆ ಜಮೀನು ದಾಖಲೆಗಳನ್ನು ಕ್ರಯದಾರರ ಹೆಸರಿಗೆ ಬದಲಾವಣೆ ಇತ್ಯಾದಿಗಳನ್ನು ಮಾಡಲು ಆ ಜಮೀನ್ದಾರರು ತೆರಬೇಕಾದ ಮೊಬಲಗನ್ನೆಲ್ಲಾ ಸರ್ಕಾರದವರು ವಸೂಲ್ಮಾಡಿಕೊಳ್ಳುತ್ತಿದ್ದಾರೆ. ಹಾಗೆ ಮುಂಗಡವಾಗಿ ಸರ್ಕಾರದವರು ಈ ಫೀಜುಗಳನ್ನೆಲ್ಲಾ ವಸೂಲ್ಮಾಡಿಕೊಂಡಿದ್ದಾಗ್ಯೂ ಈ ಜಮೀನುಗಳ ಸರ್ವೆ ಕೆಲಸ, ಅಳತೆ, ಖಾತೆ ವರ್ಗಾವಣೆ ಇತ್ಯಾದಿ ಕೆಲಸಗಳನ್ನು ಅನೇಕ ವರ್ಷಗಳಾದಾಗ್ಯೂ ಕಾರ್ಯಗತ ಮಾಡದೆ ಹಾಗೇ ಬಿಟ್ಟುಕೊಂಡು ಬಂದಿರುತ್ತಾರೆ. ಹೀಗೆ ಇವರು ಈ ಕಾರ್ಯಗಳನ್ನು ವಿಳಂಬ ಮಾಡುತ್ತಿರುವುದರಿಂದಲೆ ಸಂಸ್ಥಾನಾದ್ಯಂತ ಒಂದು ದೊಡ್ಡ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟ ಹಾಗಾಗಿದೆ. ತಾವು ಈ ದಿವಸ ಈ ಸರ್ಕಾರದವರು ಇಟ್ಟುಕೊಂಡಿರುವ ಈ ಜಮೀನು ಕಂದಾಯದ ತಃಖ್ತೆಯನ್ನು ನೋಡುವುದಾದರೆ ಯಾರದೋ ಜಮೀನು ಯಾರ ಹೆಸರಿನಲ್ಲೋ ಇದ್ದು ಅದನ್ನು ಯಾರೋ ಅನುಭವಿಸುತ್ತಿರುತ್ತಾರೆ ಎಂದರೆ ಈ ತಃಖ್ತೆ ಇದು ಅಪ್-ಟು-ಡೇಟ್ ಆಗಿರುವುದಿಲ್ಲ ಎನ್ನುವುದು ಕಾಣುತ್ತದೆ. ಇದರಿಂದ ಈ ದಿವಸ ರೈತರುಗಳಿಗೆ ವಿಶೇಷ ತೊಂದರೆಗಳಾಗುತ್ತಿವೆ. ಇದನ್ನು ಸರ್ಕಾರದವರು ಆದಷ್ಟು ಬೇಗ ಸರಿಪಡಿಸಬೇಕೆಂಬ ವಿಚಾರದಲ್ಲಿ ಕಳೆದ ಈ ಶಾಸನ ಸಭೆಯ ಎರಡು ಮೂರು ಅಧಿವೇಶನಗಳಲ್ಲೂ ಸರ್ಕಾರದವರ ಗಮನಕ್ಕೆ ತರಲಾಗಿದೆ. ಆದರೆ ಸರ್ಕಾರದವರು ಈವರೆಗೆ ಗಮನ ಕೊಟ್ಟಿರುವಂತೆ ಕಂಡು ಬರುತ್ತಿಲ್ಲ. ಇದರಿಂದ ಅನೇಕ ಸಂದರ್ಭಗಳಲ್ಲಿ ಈ ಕಂದಾಯ ಕೊಡುವ ವಿಚಾರದಲ್ಲಿ ತುಂಬ ತೊಂದರೆಗಳುಂಟಾಗಿರುತ್ತವೆ. ಯಾರು ಜಮೀನನ್ನು ಮಾರಾಟ ಮಾಡಿರುತ್ತಾರೋ ಅಂಥವರ ಹೆಸರಿನಲ್ಲೇ ಆ ಮಾರಾಟ ಮಾಡಲ್ಪಟ್ಟಿರುವ ಭೂಮಿಯ ಖಾತೆಯನ್ನಿಟ್ಟಿರುವುದರಿಂದ ಕ್ರಯದಾರರ

(ಶ್ರೀ ಎ. ವಿ. ನರಸಿಂಹರೆಡ್ಡಿ)

ಹೆಸರಿಗೆ ಆ ಜಮೀನಿನ ಖಾತೆ ವರ್ಗಾವಣೆಯನ್ನು ಮಾಡದೆ ಇರುವುದರಿಂದ ಈ 2—3 ಜನಗಳೂ ಒಟ್ಟಿಗೆ ಕಂದಾಯ ತೆರಬೇಕಾಗಿ ಬಂದು ಇವರೆಲ್ಲರೂ ಈಗ ಕೋರ್ಟುಗಳ ವ್ಯವಹಾರಕ್ಕೆ ಪ್ರಾರಂಭಿಸಿದ್ದಾರೆ. ಹೀಗೆ ಈ ಬಡಪಾಯಿಗಳು ಕೋರ್ಟು ಹತ್ತಲು ಅವಕಾಶವಾದದ್ದಕ್ಕೆ ಈ ಪೋಡಿ ದಾಖಲೆಗಳು ಸಕಾಲದಲ್ಲಿ ನಡೆಸಲ್ಪಡದಿರುವುದೇ ಮುಖ್ಯ ಕಾರಣ. ಆದ್ದರಿಂದ ಸರ್ಕಾರದವರು ಈಗಲಾದರೂ ಈ ಬಡ ರೈತರು ಈ ವಿಚಾರಗಳ ಬಗ್ಗೆ ಸರ್ವೆ ಆಫೀಸು, ತಾಲ್ಲೂಕು ಕಛೇರಿ ಇತ್ಯಾದಿಗಳಿಗೆ ದಿನವಹಿ ತಿರುಗಾಡುತ್ತಿರುವುದನ್ನು ತಪ್ಪಿಸಲು ಕೂಡಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಎರಡನೆಯದಾಗಿ ಈ ಗ್ರಾಮಾಂತರ ಪ್ರದೇಶಗಳಲ್ಲಿ ಪಟೇಲ್, ಶ್ಯಾನುಭೋಗರುಗಳು ತಮಗೆಲ್ಲರಿಗೂ ಗೊತ್ತಿರುವ ಹಾಗೆ ಜಮೀನು ಕಂದಾಯವನ್ನೂ ಮತ್ತು ಮನೆಗಂದಾಯವನ್ನೂ ವಸೂಲ್ಮಾಡುತ್ತಿದ್ದಾರೆ. ಆದರೆ ಅವರು ಈ ಜಮೀನ್ ಕಂದಾಯದ ವಸೂಲಿ ಬಗ್ಗೆ ಯಾರಾದರೂ ಕಾಲಕ್ಕೆ ಸರಿಯಾಗಿ ಕಂದಾಯ ಪಾವತಿ ಮಾಡದೆ ತಪ್ಪಿತಸ್ಥರಾದರೆ ಅಂಥವರ ಮೇಲೆ ನೋಟೀಸ್ ಜಾರಿಮಾಡಿ, ಅವರ ಜಮೀನು ಇಲ್ಲವೇ ಚರಸ್ವತ್ತುಗಳ ಜಫ್ತಿ ಇತ್ಯಾದಿ ಕಾರ್ಯಾಚರಣೆಗಳನ್ನು ನಡೆಸುವುದರ ಮೂಲಕ ಆ ಜಮೀನ್ ಕಂದಾಯವನ್ನು ಕಡ್ಡಾಯವಾಗಿ ವಸೂಲ್ಮಾಡುತ್ತಿದ್ದಾರೆ. ಆದರೆ ಅವರು ಅದೇ ರೀತಿಯಲ್ಲಿ ಈ ಮನೆಗಂದಾಯವನ್ನು ಮಾತ್ರ ವಸೂಲ್ಮಾಡುತ್ತಿಲ್ಲ. ಮೊನ್ನೆ ತಾನೆ ಯಾವುದೋ ಒಂದು ಪ್ರಶ್ನೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳೂ ಸಹ ಈ ಮನೆಗಂದಾಯವನ್ನು ಪ್ರಸ್ತಾಪಿಸಿ ಸಾವಿರಾರು ರೂಪಾಯಿಗಳ ಕಂದಾಯ ಬಾಕಿ ನಿಂತಿರುವುದಾಗಿ ತಿಳಿಸಿದರು. ತಾವು ಈಗಲಾದರೂ ಆ ಪಟೇಲ್ ಶ್ಯಾನುಭೋಗರುಗಳಿಗೆ ಕಡ್ಡಾಯವಾಗಿ ಈ ಮನೆಗಂದಾಯದ ವಸೂಲಿ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿದರೆ ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಸರ್ಕಾರದವರು ಹೀಗೆ ಒಂದು ಕಾರ್ಯಕ್ರಮವನ್ನು ಕೈಗೊಳ್ಳದೆ ಹೋದರೆ ಇವರಿಗೆ ಈ ಪಾಂಚ ವಾರ್ಷಿಕ ಯೋಜನೆಗೆ ಹಣವನ್ನೊದಗಿಸಲು ಹೇಗೆ ಸಾಧ್ಯವಾಗುತ್ತದೋ ಅದು ನನಗೆ ಅರ್ಥವಾಗುತ್ತಿಲ್ಲ. ಹೀಗಾಗಿ ಸರ್ಕಾರದವರು ಈ ದಿವಸ ಈ ಸ್ಥಳೀಯ ಸಂಸ್ಥೆಗಳಿಗೆ ಏನೊಂದು ತಮ್ಮ ಕೋಟಾವನ್ನು ಕೊಡಬೇಕಾಗಿತ್ತೋ ಅದನ್ನು ಅವರಿಗೆ ಕೊಡಲು ಸಾಧ್ಯವಾಗಿಲ್ಲವಾದ್ದರಿಂದ ಈ ದಿವಸ ಆ ಸಂಸ್ಥೆಗಳಲ್ಲಿ ಹಣವಿಲ್ಲದೆ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯದೆ ಹಾಗೆಯೇ ನಿಂತು ಬರುತ್ತಿವೆ.

ಇನ್ನು ನಾನೀಗ ಸರ್ಕಾರದವರು ಈ ಗ್ರಾಮ ಪಂಚಾಯಿತಿಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಕೊಡಬೇಕಾದ ಕಂಟ್ರಿಬ್ಯೂಷನ್ ಮೊಬಲಗಿನ ಬಗ್ಗೆ ಎರಡು ಮಾತುಗಳನ್ನು ಹೇಳಬೇಕೆಂದು ಇದ್ದೇನೆ. ಈ ದಿವಸ ಸರ್ಕಾರದವರು ತಮಗೆ ತೋಚಿದ ಹಾಗೆ, ತಮಗೆ ಯಾವುದಕ್ಕೆ ಕೊಡಬೇಕೆಂದು ಇಷ್ಟ ಬರುತ್ತದೆಯೋ ಅಂಥ ಗ್ರಾಮ ಪಂಚಾಯ್ತಿಗಳಿಗೂ ಜಿಲ್ಲಾ ಬೋರ್ಡುಗಳಿಗೂ ಮಾತ್ರ ಈ ಕಾಂಟ್ರಿಬ್ಯೂಷನ್ ಮೊಬಲಗನ್ನು ಕೊಡುತ್ತಿದ್ದಾರೆ. ಆಕ್ಟಿನಲ್ಲೇನೋ ಸರ್ಕಾರ ಪ್ರತಿಯೊಂದು ಸಂಸ್ಥೆಗೂ ಶೇಕಡಾ ಇಷ್ಟನ್ನು ಕೊಟ್ಟೇ ತೀರಬೇಕೆಂದು ವಿಧಾಯಕ ಮಾಡಲಾಗಿದೆ. ಆದರೆ ಈ ದಿವಸ ಆಕ್ಟಿನಲ್ಲಿ ಹೇಳಿರುವಂತೆ ಕಾರ್ಯತಃ ನಡೆಯುತ್ತಿಲ್ಲ. ಇಂಥ ಪರಿಸ್ಥಿತಿ ಅನೇಕ ಜಿಲ್ಲೆಗಳಿಗೆ ಒದಗಿದೆ. ಆದರೆ ಈ ವಿಚಾರದಲ್ಲಿ ನಾವೆಲ್ಲರೂ ಯಾವ ಸದುದ್ದೇಶದಿಂದ ಆ ಆಕ್ಟನ್ನು ಜಾರಿಗೆ ತಂದೆವೋ ಆ ಉದ್ದೇಶ ಸಫಲವಾಗುತ್ತಿಲ್ಲ. ಹೀಗೆಲ್ಲಾ ಆಗಬಾರದೆಂಬ ಉದ್ದೇಶದಿಂದಲೇ ಇದನ್ನೆಲ್ಲಾ ಸರ್ಕಾರದವರು ಸರಿಪಡಿಸಬೇಕಾಗಿರುವುದರಿಂದ ನಾನೀಗ ಈ ನನ್ನ ಚೋಟಾ ಸೂಚನೆಯನ್ನು ಸಭೆಯ ಮುಂದೆ ಇಡುತ್ತೇನೆ.

*Sri M. PALANIYAPPAN (Ulsoor).—With regard to the administration of the Deputy Commissioner's office at Bangalore in particular and other taluk offices in general, I would like to bring to the notice of this House the inordinate delay we experience in those offices and consequently the people are made to suffer a lot. If a petition is presented to the office, for the petitioner to get a reply it takes several months and in the case of any petition that goes to this office, unless it is pursued and followed at every stage and at every step, one is not sure of getting any reply or getting the work done. I can quote several instances where some of the political sufferers from the Civil Station who have applied for the grant of a few acres of land, are yet to get a reply even though they have applied to these offices 2, 3 or 4 years back. Government may say that, if available, so many acres of land may be granted to the petitioner. The petition goes to the Deputy Commissioner's office and finds a cool place and shelter and it is left there uncared for or unasked for, for several years so much so that the man who has applied for that has already been broken in life, is poverty stricken, is left with nothing and has to earn his daily bread and when such is the condition and state of affair of that political sufferer, he has to go up and down to the Deputy Commissioner's office every time and the net result is he has to come disappointed. I would like to quote a particular instance where a political sufferer has applied for land in Dodballapur taluk—the village I forget or else I would have given the particulars also. He applied for land 5 years back and every time he has to go to Dodballapur and come to Bangalore and for nearly four years he is made to go up and down and what little he had he has to spend it on travelling and the net result is, he has

been sanctioned 3 or 4 acres of land. Because he and his wife have suffered and sacrificed during the political movement, they have lost everything, and with what little they had, they went and settled themselves in Dodballapur and they applied for 10 acres of land to the Amildar there. The Amildar has recommended 10 acres. The Sub-Division Officer has reduced it to 5 acres. The Deputy Commissioner has reduced it to 3 acres and then it came to the Revenue Commissioner and he has recommended that both of them may be sanctioned 6 acres and when it came to the Government, they sanctioned 5 acres.

10 A.M.

Sir, these five years he is going up and down from Dodballapur to Bangalore and Bangalore to Dodballapur. If he had only that money with him, which he has spent, he would have got double the extent of land that is granted to him. That is the state of affairs at present. That is one instance wherein one individual has applied for the grant of land. But there have been scores of people who have already applied for land and many are yet to apply. Because there is fear that they have no money to spend in going to these offices, they are keeping quiet. There are several instances where political sufferers are forced to go to these offices. Because there is no other place where land is available. If they come to Government and tell them, they say: show me the place where there is the land and I will grant. They get to know where a survey number is available with great difficulty, going to the Shanbhogues and making all requests to them and if the number is brought to the notice of the Government, they pass an order empowering the Sub-Division Officer to grant them the land in question. But immediately when application is given to the authority for grant of land, he says: 'For want of gomal, land cannot be granted' and an endorsement to that effect is given to the person. There are several instances like that. If the Government are very earnest about granting lands to political sufferers, if they are earnest about redressing their grievances, if they are interested and if they still think that their foundation is built on the sufferings of these people, I appeal to them to see that such applications which are pending before them are disposed of properly without any red tapism and lands sanctioned.

MR. SPEAKER.—The House will now rise and meet at 10-30 A.M.

The House adjourned for Lunch at Five Minutes past Ten of the Clock and reassembled at Thirty-two Minutes past Ten of the Clock.

(MR. SPEAKER in the Chair.)

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಸ್ವಾಮಿ ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಗಮನಕ್ಕೆ ಕೆಲವು ಅಂಶಗಳನ್ನು ತರಬೇಕೆಂದು, ನಾನು ಉದ್ದೇಶಪಟ್ಟಿದ್ದೇನೆ. ಈ ಲ್ಯಾಂಡ್ ರೆವೆನ್ಯೂ ಬಾಬಿಗೆ ಸಂಬಂಧಪಟ್ಟಂತೆ ದರಖಾಸ್ತುಗಳ ವಿಚಾರವಾಗಿ ಮಾತನಾಡುವುದಾದರೆ ನಾನು ಅನೇಕ ಸಾರಿ ಇದೇ ಸಭೆಯಲ್ಲಿ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಈ ದರಖಾಸ್ತುಗಳ ವಿಲೇವಾರಿ ಯಾವ ಮಟ್ಟದಲ್ಲಿದೆ ಎಂದರೆ ದರಖಾಸ್ತು ಜಮೀನು ಕೊಡಿ ಎಂದು ನಾವು ಕೇಳುತ್ತಲೇ ಇದ್ದೇವೆ, ನಿರ್ದಿಷ್ಟವಾದ ನೀತಿಯನ್ನು ಹಾಕಿ ಕೊಡುತ್ತೇವೆ ಎಂದು ಹೇಳುತ್ತಲೇ ಇದ್ದೀರಿ. ಜಮೀನು ಮಂಜೂರಾತಿ ವಿಚಾರದಲ್ಲಿ ಸರ್ಕಾರದ ಯಾವ ಒಂದು ಕಾನೂನಿದೆಯೋ ಆ ಕಾನೂನನ್ನು ಸರಿಯಾದ ರೀತಿಯಲ್ಲಿ ಅನುಸರಿಸದೇ ಇರುವುದರಿಂದಲೇ ದರಖಾಸ್ತು ಮಂಜೂರಾತಿ ನಿಧಾನವಾಗಿ ಬಡ ಜನರಿಗೆ ಸಾಕಾದಷ್ಟು ಜಮೀನು ಸಿಕ್ಕುವುದು ಕಷ್ಟವಾಗುತ್ತಾ ಇದೆ. ಮುಖ್ಯವಾಗಿ ಹರಿಜನರ ವಿಚಾರದಲ್ಲಿ ಹೇಳುವುದಾದರೆ ಇವೊತ್ತಿನವರೆಗೂ ಕೂಡ ಸಾಕಾದಷ್ಟು ಜಮೀನು ದೊರೆಯುತ್ತಿಲ್ಲ ಎಂದು ಹೇಳಿದರೆ ತಪ್ಪಿಲ್ಲ. ಈ ವಿಚಾರದಲ್ಲಿ ನಾನು ಹಿಂದೆ ಕೆಲವು ಸಲಹೆಗಳನ್ನು ಮಾಡಿದ್ದೆ. ಹುಜೂರು ಜಮಾಬಂದಿ ಕಾಲದಲ್ಲಿ ಡೆಪ್ಯೂಟಿ ಕಮೀಷನರ ಮತ್ತು ರೆವೆನ್ಯೂ ಆಫೀಸರುಗಳ ಹತ್ತಿರ ಅಹವಾಲು ತಃಖ್ತೆ ಇರುತ್ತದೆ. ಒಂದು ಗ್ರಾಮದಲ್ಲಿ ಜಮಾಬಂದಿ fix up ಮಾಡುವಾಗ ಆ ಗ್ರಾಮದಲ್ಲಿ ಎಷ್ಟು ಜನ ಜಮೀನು ಇಲ್ಲದೇ ಇರುವವರು ಇದ್ದಾರೆ, ವ್ಯವಸಾಯಕ್ಕೆ ಲಾಯಕ್ಕಾದ ಜಮೀನು ಎಷ್ಟಿದೆ ಎಂಬುದು ನಿಗದಿಯಾಗಿರುತ್ತದೆ. ಅದೇನೂ ಈವೊತ್ತು ಮಾಡಿದ್ದಿಲ್ಲ. ಹಿಂದೆ ಮಾಡಿರತಕ್ಕದ್ದು, ಆಕಾರ ಕಂಡ ಜಮೀನು, ಗೋಮಾಳ, ಡೇಟ್‌ರಿಸರ್ವ್ ಎಲ್ಲೆಲ್ಲಿದೆ, ಎಲ್ಲೆಲ್ಲಿ ಜಮೀನನ್ನು ವಿಲೇವಾರಿ ಮಾಡಬಹುದು ಎಂಬುದನ್ನು ಯೋಚನೆ ಮಾಡಿ ಜಮೀನು ಇಲ್ಲದೆ ಇರುವವರಿಗೆ ಪಟೇಲ್ ಶ್ಯಾನುಭೋಗರು ಅಹವಾಲು ತಃಖ್ತೆಯನ್ನು ತೆಗೆದುಕೊಂಡು ಜಮೀನು ವಿಲೇವಾರಿ ಮಾಡಬೇಕೆಂಬ ವಿಚಾರವನ್ನು ಒತ್ತಿ ಒತ್ತಿ ಹೇಳುತ್ತಾ ಇದ್ದೇನೆ. ಆ ರೀತಿ ಮಾಡುವುದರಿಂದ ಈ ರೆಕಾರ್ಡ್ ವಿಲೇವಾರಿ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ನಿಧಾನವಾಗುತ್ತಿರುವುದು ತಪ್ಪಿ ಈಗಿರತಕ್ಕ ತೊಂದರೆ ತಪ್ಪುತ್ತದೆ. ಬಡವರಿಗೆ ನ್ಯಾಯ ದೊರೆಯುತ್ತದೆ ಎಂದು ಅನೇಕಸಾರಿ ಹೇಳಿದರೂ ಕೂಡ ಇವೊತ್ತಿನ ವರೆಗೂ ಆ ಪದ್ಧತಿಯನ್ನು ಅನುಸರಿಸುತ್ತಿಲ್ಲ. ಇದನ್ನು ಮಾಡುವುದಕ್ಕೆ ಏನೋ ತೊಂದರೆ ಇದೆ ಎಂದು ಯೋಚಿಸಬೇಕಾಗಿದೆ.

ಎರಡನೆಯದಾಗಿ ಪೊಲಿಟಿಕಲ್ ಸಫರರ್ಸ್‌ಗೆ ಜಮೀನುಗಳನ್ನು ಶೀಘ್ರವಾಗಿ ಮಂಜೂರು ಮಾಡಬೇಕೆಂದು ಒತ್ತಾಯ ಪಡಿಸುತ್ತಾ ಇದ್ದಾರೆ. ಅವರಿಗೆ ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಅವರಿಗೆ ಕೊಡುವ ವಿಷಯದಲ್ಲಿ ಯಾವ ನೀತಿಯನ್ನನುಸರಿಸಬೇಕೆಂಬುದನ್ನು ಹಿಂದೆ ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ಯಾರು ನಿಜವಾಗಿ ದೇಶಕ್ಕಾಗಿ ಹೋರಾಡಿ ಕಷ್ಟಪಟ್ಟಿದ್ದಾರೋ ಅವರಿಗೆ ಸರ್ಕಾರದವರು ಸಂಪೂರ್ಣವಾಗಿ ಸಹಾಯ ಮಾಡಬೇಕಾದದ್ದು ನ್ಯಾಯ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಏನೂ ಇಲ್ಲದೆ, ಕಾಂಗ್ರೆಸ್ಸಿಗೆ ಸೇರಿದ ಮಾತ್ರಕ್ಕೇ ಅಂಥವರಿಗೆ ಯಾವ ತೊಂದರೆಯೂ ಇಲ್ಲದೇ ಇದ್ದರೂ ಎಂಟು ಹತ್ತು ಎಕರೆ ಒಳ್ಳೆಯ ಗದ್ದೆ ಜಮೀನು ಕೊಟ್ಟಿರುವುದನ್ನು ಇವೊತ್ತಿಗೂ ನೋಡುತ್ತಾ ಇದ್ದೇವೆ. ಇವೊತ್ತು ಜಮೀನನ್ನು ಸರ್ಕಾರದವರಿಂದ ಪಡೆದುಕೊಂಡು ಮಾರನೆಯ ದಿನ ಬೇರೆಯವರಿಗೆ ಮಾರುತ್ತಿರುತ್ತಾರೆ. ಅಂತಹ ನಿದರ್ಶನಗಳನ್ನು ಸರ್ಕಾರದವರ ಗಮನಕ್ಕೆ ತಂದು ಶೀಘ್ರವಾಗಿ ಪರಿಶೀಲನೆ ಮಾಡಿ ಎಂದು ಹೇಳಿದರೂ ಕೂಡ ಅದನ್ನು ಪರಿಗಣಿಸದೇ ಒಂದು ಕಡೆ ೫೦ ಸಾವಿರ ರೂಪಾಯಿ ಬೆಲೆ ಬಾಳತಕ್ಕ ಜಮೀನನ್ನು ಮಂಜೂರು ಮಾಡಿದ್ದಾರೆ, ಇನ್ನೊಂದು ಕಡೆ ಒಬ್ಬರಿಗೆ 18 ಎಕರೆ ಜಮೀನನ್ನು ಕೊಟ್ಟಿದ್ದಾರೆ. ಈ ರೀತಿ ಕೊಡುತ್ತಾ ಹೋದರೆ, ಹೇಗೆ ನಾವು ಇಷ್ಟ ಬಂದವರಿಗೆ ಜಮೀನು ಕೊಡುತ್ತೇವೆ ಎಂಬುದಾಗಿ ಒಂದು ಆಜ್ಞೆಯನ್ನು ಹೊರಡಿಸಿ ಬಿಡಿ, ನಾವು ಖಂಡಿತವಾಗಿಯೂ ತಮ್ಮನ್ನು ಏಕೆ ಹೀಗೆ ಮಾಡಿದಿರಿ ಎಂದು ಕೇಳುವುದಿಲ್ಲ. ಒಂದು ನೀತಿಯನ್ನನುಸರಿಸಿ ಕೆಲಸಮಾಡುತ್ತೇವೆ, ಬಡವರಿಗೆ ಸಹಾಯ ಮಾಡುತ್ತೇವೆ, ಪ್ರಜಾ ಪ್ರಭುತ್ವದಲ್ಲಿ ಬಡವರಿಗೆ ಅನುಕೂಲವಾಗುವ ಕೆಲಸಗಳನ್ನೇ ಮಾಡುತ್ತೇವೆ ಎಂದು ಒಂದು ಕಡೆ ಹೇಳುತ್ತಾ ಇನ್ನೊಂದು ಕಡೆ ಅನುಕೂಲಸ್ಥರಿಗೇ ಸಹಾಯ ಮಾಡತಕ್ಕ ನೀತಿಯನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ.

ಅಧ್ಯಕ್ಷರು.—'He should have no property' ಎಂದು ಸರ್ಕಾರಿ ಆಜ್ಞೆಯಲ್ಲೇ ಇದೆಯಲ್ಲ?

ಶ್ರೀ ಎಂ. ಚಿಕ್ಕಲಿಂಗಯ್ಯ.—ಆ ಆಜ್ಞೆಯನ್ನು ಅವರು ಪಾಲಿಸುತ್ತಿಲ್ಲ ಎಂದು ಹೇಳುತ್ತೇನೆ. ಅದಕ್ಕೆ ನಿದರ್ಶನವನ್ನೂ ಕೂಡ ಹೇಳಿದ್ದೇನೆ. ಬೇಕಾದರೆ ಅದನ್ನು ಕೇಳಿ ತಿಳಿದುಕೊಳ್ಳಬಹುದು.

ತೋಟಿ ತಳವಾರರಿಗೆ ಮಿರಾಸೆ ಕೊಡುವ ವಿಚಾರದಲ್ಲಿ ಒಂದು ನೀತಿಯನ್ನು ಅನುಸರಿಸಬೇಕೆಂದು ಒತ್ತಾಯ ಪಡಿಸುತ್ತೇನೆ. ಪಟೇಲ್, ಶ್ಯಾನುಭೋಗರಿಗೆ ಸಹಾಯಕರಾದ ತೋಟಿ ತಳವಾರರಿಗೆ ಅನುಕೂಲ ಮಾಡಿಕೊಡಬೇಕೆಂದು ಪರ್ಸನಲ್ ಇನಾಂಸ್ ಮತ್ತು ರಿಲಿಜಿಯಸ್ ಇನಾಂಸ್ ಅಬಾಲಿಷನ್ ಬಿಲ್ ಬಂದಾಗಲೇ ಎಷ್ಟೋ ಒತ್ತಾಯ ಪಡಿಸಿದರೂ ಕೂಡ ಅದನ್ನು ಗಣನೆಗೆ ತೆಗೆದುಕೊಂಡಿಲ್ಲ. ಆ 21 ಸಾವಿರ ಜನರು ವಂಶ ಪಾರಂಪರ್ಯವಾಗಿ ಇನಾಂತಿ ಜಮೀನುಗಳನ್ನೇ ನಂಬಿಕೊಂಡು ಎಷ್ಟೋ ಕಷ್ಟಪಟ್ಟಿದ್ದಾರೆ ಎಂಬುದನ್ನು ಪದೇ ಪದೇ ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ. ಮಿರಾಸೆ ವಿಚಾರದಲ್ಲಿ ಸರ್ಕಾರದವರು ಸರಿಯಾದ ನೀತಿಯನ್ನು ಕೈಕೊಳ್ಳದೆ ಅವರಿಗೆ ಇರತಕ್ಕ ತೊಂದರೆ ನಿವಾರಣೆಯಾಗಿಲ್ಲ. ಪಟೇಲ್ ಶ್ಯಾನುಭೋಗರುಗಳಿಗೆ ಕಲೆಕ್ಷನ್ ಡ್ಯೂಟೀಸ್‌ಗೆ ಇಷ್ಟು ಪರ್ಸೆಂಟೇಜ್ ಎಂದು ಹೇಳಿಕೊಡುತ್ತಾ ಇದ್ದೀರಿ. ಅವರಂತೆಯೇ ಇವರೂ ಸಹ ಕಷ್ಟಪಡುತ್ತಾರೆ. ಇವರಿಗೆ ಕಡೆಯ ಪಕ್ಷ ರೂಪಾಯಿನಲ್ಲಿ ಅರ್ಧ ಆಣೆಯನ್ನಾದರೂ ಕೊಡಿ ಎಂದು ಒತ್ತಾಯ ಪಡಿಸಿದರೂ ಕೂಡ ಇದುವರೆಗೂ ಕೊಟ್ಟಿಲ್ಲ. ಕೊಡುವುದಕ್ಕೆ ಸರ್ಕಾರದವರಿಗೆ ಇಷ್ಟವಿದೆಯೋ ಇಲ್ಲವೋ, ಯೋಗ್ಯತೆ ಇದೆಯೋ ಇಲ್ಲವೋ ಎಂದು ಸಂದೇಹವಾಗುತ್ತಾ ಇದೆ. ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ. ಸಮತಾವಾದ ಸಮಾಜ ಸ್ಥಾಪನೆ ಮಾಡಬೇಕೆಂಬ ತತ್ವವನ್ನು ಒಪ್ಪಿಕೊಂಡ ಮೇಲೆ ಈ ಜನಗಳ ಕಷ್ಟ ಸುಖವನ್ನು ತಿಳಿದುಕೊಳ್ಳದಿದ್ದರೆ ಖಂಡಿತವಾಗಿಯೂ ದೇಶಕ್ಕೆ ಕಲ್ಯಾಣವಾಗುವುದಿಲ್ಲ ಎಂದು ಸಹಿತ ಹೇಳುತ್ತೇನೆ. 50 ವರ್ಷವಾದರೂ ಕೂಡ ಈ ಮಿರಾಸೆ ಪದ್ಧತಿಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. Practical difficulties ಇದ್ದೇ ಇರುತ್ತವೆ. ಸಂಬಳ ಸಾರಿಗೆಗಳನ್ನು ಅವರಿಗೆ ಕ್ರಮವಾಗಿ ಕೊಟ್ಟು ಅನುಕೂಲ ಮಾಡಿಕೊಟ್ಟರೆ ನಮಗೆ ತೃಪ್ತಿಯಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ಮುಖ್ಯವಾದ ವಿಷಯ. ಪೋಡಿನ ವಿಚಾರದಲ್ಲಿ ಕೆಲವು ಅಂಶಗಳನ್ನು ಹೇಳಬೇಕಾಗಿದೆ. ತಾಲ್ಲೂಕು ಆಫೀಸಿಗೆ ಹೋಗಿ ನೋಡಿದಲ್ಲಿ ತಕರಾರು ಹಾಕಿದ ಕೇಸುಗಳು ಎಷ್ಟೋ ಪೆಂಡಿಂಗ್ ನಲ್ಲಿರುವುದು ಕಂಡು ಬರುತ್ತದೆ. ಅವನ್ನು ಫೈಸಲು ಮಾಡಬೇಕೆಂದು ಎಷ್ಟೋ ಸಾರಿ ಹೇಳಿದ್ದೇನೆ. ಪೋಡ್ ಫೀಜನ್ನು ಕೊಟ್ಟಿರುತ್ತಾರೆ. ಪ್ರತಿಯೊಂದು ತಾಲ್ಲೂಕು ಆಫೀಸಿಗೂ ನೂರಾರು ಪೋಡ್ slips ಹೋಗುತ್ತವೆ. ಅವುಗಳನ್ನು ತಕ್ಷಣ ಫೈಸಲು ಮಾಡುವುದಕ್ಕೆ ಯಾವ ಏರ್ಪಾಡು ಇದೆಯೋ ಗೊತ್ತಿಲ್ಲ. ಹಿಂದೆ ಇದ್ದ ಏರ್ಪಾಡನ್ನೇ ಈ ಸರ್ಕಾರ ಬಂದ ಮೇಲೂ ಅನುಸರಿಸಿಕೊಂಡು ಬರುತ್ತಾ ಇದ್ದೀರಿ. ಪೋಡ್ ಫೀ ತಾಲ್ಲೂಕು ಆಫೀಸಿಗೆ ಹೋದರೆ ತಕ್ಷಣ ಆ ಖಾತೇದಾರರನ್ನು ಕರೆಯಿಸಿ, ಪೋಡ್‌ಫಿಕ್ಸ್ ಮಾಡಿ ownership rights ಕೊಡುವುದಕ್ಕೆ ಏರ್ಪಾಡು ಮಾಡಬೇಕು. ಮದರಾಸಿನಲ್ಲಿರುವ ಹಾಗೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ರಿಜಿಸ್ಟ್ರೇಷನ್ ಆಗುವುದಕ್ಕೆ ಮುಂಚೆ ವೆರಿಫೈಮಾಡಿ ಟೈಟಲ್‌ಡೀಡ್ಸ್ ಫೈಸಲು ಮಾಡಬೇಕೆಂದು ಹೇಳಿದ್ದೇನೆ. ಅದನ್ನು ಪರಿಶೀಲನೆ ಮಾಡಬೇಕೆಂದು ಸರ್ಕಾರದವರ ಗಮನಕ್ಕೆ ತಂದರೂ ಕೂಡ ಇವೊತ್ತಿನವರೆಗೂ ಪರಿಶೀಲನೆ ಮಾಡಿಲ್ಲ. ಬರಬರುತ್ತ ತಮ್ಮ ಕೆಲಸ ಕಾರ್ಯಗಳು ಹಿಂದೆ ಹಿಂದಕ್ಕೆ ಬೀಳುತ್ತ ಇವೆಯೇ ಹೊರತು ಮುಂದುವರಿಯುತ್ತ ಇಲ್ಲ. ಈ ರೀತಿ ಇರುವುದರ ದೆಸೆಯಿಂದ ಇದು ಖಂಡಿತವಾಗಿಯೂ ಆಡಳಿತ ದಕ್ಷತೆಗೆ ಒಳ್ಳೆಯದಲ್ಲ ಇದರಿಂದ ಬಡವರಿಗೆ ನ್ಯಾಯ ದೊರಕುವುದಿಲ್ಲ ತೊಂದರೆಯಾಗುತ್ತಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ನಾನು ನಿರ್ಣಯ ತಂದಿದ್ದೆ ಮತ್ತು ಬಜೆಟ್ ಮೇಲೆ ಮಾತನಾಡುವುದಕ್ಕೂ ಕೂಡ ಅಧ್ಯಕ್ಷರು ನನಗೆ ಅವಕಾಶ ಕೊಡಲಿಲ್ಲ. ಈಗಾಗಲೇ ಮಾನ್ಯಸದಸ್ಯರು ತಮ್ಮ ಗಮನಕ್ಕೆ ಅನೇಕ ವಿಷಯಗಳನ್ನು ತಂದಿದ್ದಾರೆ.

ಪ್ರತಿವರ್ಷವೂ ತಾಲ್ಲೂಕು ಜಮಾಬಂದಿ, ಹುಜೂರು ಜಮಾಬಂದಿಗಳು ಮಾಮೂಲಾಗಿ ಸಾವಿರಾರು ವರ್ಷಗಳಿಂದ ನಡೆಯುತ್ತಾ ಇರುವ ಹಾಗೆ ಈಗಲೂ ನಡೆಯುತ್ತಾ ಇವೆ. ಜಮಾಬಂದಿ ವೇಳೆಯಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಆಯಾಯಾ ಅರ್ಜಿದಾರರಿಗೆ ಅನುಕೂಲವಾಗುವ ರೀತಿಯಲ್ಲಿ ತೀರ್ಮಾನ ಮಾಡತಕ್ಕ ಪರಿಸ್ಥಿತಿ ಇನ್ನೂ ಜಾರಿಗೆ ಬಂದಿಲ್ಲ. ಈ ಪ್ರಜಾ ಸರ್ಕಾರ ಸ್ಥಾಪನೆಯಾಗಿ ಎಂಟು ವರ್ಷಗಳಾದವು. ಪ್ರಜೆಗಳಿಗೆ ಅನುಕೂಲ ಮಾಡಿಕೊಡುತ್ತೇವೆ, ಪ್ರಜೆಗಳೇ ಸರ್ಕಾರದ ಬೆನ್ನುಮೂಳೆ ಎಂದು ಹೇಳುತ್ತಾ ಇದ್ದು ಪ್ರಜೆಗಳಿಂದ ಚುನಾಯಿತರಾದ ನಾವು ಈ ದಿನ ದೇಶವನ್ನು ಆಳುತ್ತಾ ಇರುವಾಗ ಅವರ ಸ್ಥಿತಿಯನ್ನು ಉತ್ತಮ ಪಡಿಸುತ್ತೇವೆ ಎಂದು ಆ ದಿವಸ ಕೊಟ್ಟ ಭರವಸೆಯನ್ನು ಜಾಗ್ರತೆ ಕಾರ್ಯರೂಪಕ್ಕೆ ತರಲು ಪ್ರಯತ್ನಮಾಡಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ.

ಇದುವರೆಗೂ ನಾನಾ ರೀತಿಯಲ್ಲಿ ಸರ್ಕಾರದವರು ಅನುಕೂಲ ಮಾಡಿದ್ದರೂ ಅತ್ಯವಶ್ಯಕವಾಗಿ ರೈತರ ಕಣ್ಣಿಗೆ ಕಾಣತಕ್ಕ ಮತ್ತು ಪ್ರಜೆಗಳ ಕಣ್ಣಿಗೆ ಕಾಣತಕ್ಕ ಅನೇಕ ವಿಷಯಗಳಲ್ಲಿ ಇನ್ನೂ ಉತ್ತಮಪಡಿಸಿಲ್ಲ ಎಂಬ ಅಂಶವನ್ನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಒಂದನೆಯದು ಸರ್ಕಾರದವರಲ್ಲಿ ಕೊಡತಕ್ಕ ಅರ್ಜಿ, ರೆವಿನ್ಯೂ ಕಮೀಷನರವರಲ್ಲಿ ಕೊಡತಕ್ಕ ಅರ್ಜಿ, ಡೆಪ್ಯುಟಿ ಕಮೀಷನರವರಲ್ಲಿ ಕೊಡತಕ್ಕ ಅರ್ಜಿ, ತಾಲ್ಲೂಕು ಲೆವಲ್‌ನಲ್ಲಿ ಕೊಡತಕ್ಕ ಅರ್ಜಿ-ಇವುಗಳೆಲ್ಲವೂ ಹತ್ತು ವರ್ಷಗಳಾದರೂ ಕೂಡ ಫೈಸಲಾಗುವುದಿಲ್ಲ. ಅರ್ಜಿ ಕೊಟ್ಟವನಿಗೆ ನಿನ್ನ ಅರ್ಜಿ ಬಂತು, ಈ ರೀತಿ ತೀರ್ಮಾನ ಮಾಡಲಕ್ಕೆ ಮನಸ್ಸುಮಾಡಿದ್ದೇವೆ ಎಂಬ ಒಂದು ಎಂಡಾರ್ಸ್‌ಮೆಂಟ್ ಕೊಡತಕ್ಕ ವ್ಯವಸ್ಥೆ ಇನ್ನೂ ಜಾರಿಗೆ ಬಂದಿಲ್ಲ.

ಇದೆಲ್ಲ ನೋಡಿದರೆ ಹಳೆಯ ಪದ್ಧತಿ ಇನ್ನೂ ಜಾರಿಯಲ್ಲಿದೆ ಎಂದು ತಿಳಿದುಕೊಳ್ಳಬೇಕೇ ವಿನಾ ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ ಎನ್ನತಕ್ಕ ವಿಷಯವನ್ನು ಸಂತೋಷವಾಗಿ ಹೇಳುವುದಕ್ಕೇ ಆಗಲಿ, ಪ್ರಜೆಗಳಿಗೆ ಭರವಸೆಯನ್ನು ಕೊಡುವುದಕ್ಕೇ ಆಗಲಿ ಅವಕಾಶ ತಪ್ಪಿದೆ. ನಾವು ಯಾವುದನ್ನು ಉತ್ತಮಪಡಿಸುತ್ತೇವೆಂದು ಪ್ರಜೆಗಳಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇವೋ ಅದನ್ನು ಉತ್ತಮಪಡಿಸಬೇಕಾದದ್ದು ಮೊದಲನೆ ಕರ್ತವ್ಯ ಎನ್ನುವುದನ್ನು ನಾವುಗಳು ಮರೆಯಬಾರದು.

ಸರ್ಕಾರಿ ನೌಕರರು ಲಂಚರುಷುವತ್ತುಗಳನ್ನು ಪಡೆಯತಕ್ಕ ಪದ್ಧತಿಯನ್ನು ನಿರ್ಮೂಲಮಾಡಲು ಒಂದು ಕಮಿಟಿಯನ್ನು ಮಾಡಿ ಅದಕ್ಕೆ ಒಬ್ಬರು ಅಧ್ಯಕ್ಷರನ್ನು ಮಾಡಿದ್ದೀರಿ. ಆದರೆ ಒಂದು ವಿಷಯ ಹೇಳಬೇಕಾಗಿದೆ. ತಾಲ್ಲೂಕು ಅಮಲ್ದಾರರು ತಿಂಗಳಿಗೆ 20 ದಿವಸ, ಸಬ್ ಡಿವಿಷನ್ ಅಧಿಕಾರಿಗಳು ತಿಂಗಳಿಗೆ 15 ದಿವಸ ಮತ್ತು ಜಿಲ್ಲಾಧಿಕಾರಿಗಳು ತಿಂಗಳಿಗೆ 15 ದಿವಸ ಸಂಚಾರ ಮಾಡಬೇಕು. ಮತ್ತು ಅವರ ಸಂಚಾರ ಕಾಲದಲ್ಲಿ ಜನಗಳ ಕುಂದುಕೊರತೆಗಳನ್ನು ನಿವಾರಣೆಮಾಡಬೇಕು. ಅರ್ಜಿಗಳನ್ನು ಆಯಾ ಸ್ಥಳಗಳಲ್ಲಿಯೇ ಫೈಸಲ್ಮಾಡಬೇಕು. ಹೀಗೆ ಮಾಡಿದರೆ ಲಂಚರುಷುವತ್ತುಗಳ ಹಾವಳಿ ತಪ್ಪಿ ರೈತ ತಾಲ್ಲೂಕು ಆಫೀಸಿಗೆ ತಿರುಗುವ ಕೆಲಸ ತಪ್ಪಿ, ತನ್ನ ಕೆಲಸವನ್ನು ಮಾಡಿಕೊಳ್ಳಲು ಅವಕಾಶವಾಗುತ್ತದೆಂದು ಹೇಳುತ್ತೇನೆ.

ಕಂದಾಯದ ವಸೂಲಿಯ ವಿಚಾರವಾಗಿ ಶ್ರೀ ನರಸಿಂಹರೆಡ್ಡಿಯವರು ಕೆಲವು ವಿಚಾರಗಳನ್ನು ತಿಳಿಸಿದರು. ಕಂದಾಯ ವಸೂಲಾತಿಯ ಸಂಬಂಧದಲ್ಲಿ ಅಮಲ್ದಾರರ ಒತ್ತಡದ ಮೇಲೆ ಪಟೇಲ್ ಶ್ಯಾನುಭೋಗರುಗಳು ರೆವಿನ್ಯೂ ಕಂದಾಯವನ್ನು ಮಾತ್ರ ವಸೂಲ್ಮಾಡುತ್ತಿದ್ದಾರೆ ; ಇನ್ನೂ ಅನೇಕತರಹ ಕಂದಾಯಗಳನ್ನು ವಸೂಲ್ಮಾಡುವುದಕ್ಕೆ ಅವರಿಗೆ ಮನಸ್ಸು ಇರುವುದಿಲ್ಲವೆಂದು ಹೇಳಿ ಇತರ ಕಂದಾಯಗಳನ್ನೂ ಅಂದರೆ ಪಂಚಾಯಿತಿ ಕಂದಾಯಗಳನ್ನೂ ವಸೂಲ್ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಎಲ್ಲೆಲ್ಲಿ ಪಂಚಾಯಿತಿಯವರು ಕಂದಾಯವನ್ನು ವಸೂಲ್ಮಾಡಿ ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಳ್ಳುತ್ತಿದ್ದಾರೆಯೋ ಅಂಥ ಗ್ರಾಮಗಳಿಗೆ ತಾವು ಕೊಡತಕ್ಕ ಗ್ರಾಂಟುಗಳನ್ನು ಹೆಚ್ಚಿಗೆ ಕೊಟ್ಟು, ಆ ಗ್ರಾಮಗಳ ನೈರ್ಮಲ್ಯ ಮುಂತಾದ ಕೆಲಸಗಳನ್ನು ಮಾಡಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರದವರು ಇದುವರೆಗೂ ಹೆಚ್ಚು ಅನುಕೂಲಗಳನ್ನುಮಾಡಿಲ್ಲ. ಪ್ರಜಾ ಸರ್ಕಾರ ಬಂದ ಮೇಲೆ ಯಾವ ರೀತಿ ಆಡಂಬರಗಳಲ್ಲಿ ಕಾಲಕಳೆದಿದ್ದಾರೆನ್ನುವುದು ಅನಾವಶ್ಯಕ. ಕಾಲಕಳೆದಿದ್ದಾರೆ ಎನ್ನುವ ಮಾತುಗಳನ್ನು ಆಡುವುದು ನನಗೆ ಇಷ್ಟವಿಲ್ಲ. ಕಾರಣ ಅಂಥದು ನಡೆದಿಲ್ಲ. ಪ್ರಜಾ ಸರ್ಕಾರ ಬಂದಮೇಲೆ ಹಗಲಿರುಳೂ, ಹೆಚ್ಚು ಕಷ್ಟದಿಂದ ಪ್ರಜೆಗಳ ಸೇವೆಯನ್ನು ಮಾಡಿದ್ದಾರೆ. ಇನ್ನೂ ಆಗಬೇಕಾದ ಕೆಲಸಗಳಿವೆ. ಈಗ 7-8 ವರ್ಷಗಳಿಂದಲೂ ಆಗಿರುವ ಕೆಲಸವನ್ನು ಅಂಕಿಅಂಶಗಳಿಂದ ತೋರಿಸುವುದಕ್ಕೆ ಅವಕಾಶವಿದೆ. ಇದು ಮಾನ್ಯ ಸದಸ್ಯರಿಗೂ ಗೊತ್ತಿರತಕ್ಕ ವಿಚಾರ. ಸಾಧ್ಯವಾದ ಮಟ್ಟಿಗೂ ಪ್ರಜೆಗಳ ಸೇವೆಯನ್ನು ಸಲ್ಲಿಸಿದ್ದಾರೆ. ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ತಾಲ್ಲೂಕು ಅಮಲ್ದಾರರುಗಳು, ಸಬ್ ಡಿವಿಷನ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ತಮಗೆ ಇರತಕ್ಕ ಕಾಲಾವಕಾಶವನ್ನು ಸದುಪಯೋಗಪಡಿಸಿಕೊಂಡು ಆಯಾ ಗ್ರಾಮಗಳಲ್ಲಿ ಅವರು ಸಂಚಾರ ಮಾಡುವಾಗ ರೈತರುಗಳು ಸಲ್ಲಿಸತಕ್ಕ ಅರ್ಜಿಗಳನ್ನು ಸ್ಥಳದಲ್ಲಿಯೇ ಫೈಸಲ್ಮಾಡುವುದರಿಂದ ರೈತಾಪಿ ಜನರಿಗೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆ. ಇದಕ್ಕಿಂತಲೂ ಹೆಚ್ಚಿನಸೇವೆ ಮಾಡಬೇಕಾದದ್ದು ಇಲ್ಲ.

ಈ ಸಂದರ್ಭದಲ್ಲಿ ನಮ್ಮ ಕೈಗಾರಿಕಾ ಮಂತ್ರಿಗಳಿಗೆ ಸಂಬಂಧಪಟ್ಟ ವಿದ್ಯುಚ್ಛಕ್ತಿಯ ವಿಚಾರವಾಗಿ ಕೆಲವು ವಿಷಯಗಳನ್ನು ಹೇಳಬೇಕಾದ ಪ್ರಮೇಯವಿದೆ. ಅದರ ಬಗ್ಗೆ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು.—ಈಗ ಡಿಮ್ಯಾಂಡಿನಮೇಲೆ ಮಾತ್ರ ಮಾತನಾಡಿ.

ಶ್ರೀ ಎಸ್. ಸಿದ್ದಪ್ಪ.—ಊಟದ ಮಧ್ಯೆ ಉಪ್ಪಿನಕಾಯಿ ಅಂದಹಾಗೆ ಬರುತ್ತದೆ. ಇದರಲ್ಲಿ ಬೇಕಾದ್ದನ್ನು ಕಡತದಲ್ಲಿ ಸೇರಿಸಿಕೊಳ್ಳಿ, ಬೇಡವಾದದ್ದನ್ನು ಬಿಟ್ಟುಬಿಡಿ. ಅದು ಬೇರೆ ವಿಷಯ. (ನಗು) ನಮಗೆ ಬಡ್ಜೆಟ್‌ಮೇಲಿನ ಚರ್ಚೆಯಲ್ಲಿ ಹೆಚ್ಚಿಗೆ ಕಾಲಾವಕಾಶವನ್ನು ಕೊಡದೆ ಕಡಿಮೆ ಅವಕಾಶವನ್ನು ಕಲ್ಪಿಸಿ ನಮ್ಮ ಬೇಡಿಕೆಗಳನ್ನು, ಜನರ ಅನೇಕ ಕೋರಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಈ ಸನ್ನಿವೇಶವನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ.

ತಾಲ್ಲೂಕು ಮಟ್ಟದಲ್ಲಿ, ಸಬ್ ಡಿವಿಜನ್ ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಅರ್ಜಿಗಳೂ ಮತ್ತು ಮನವಿಗಳೂ ಒಂದು ತಿಂಗಳ ಒಳಗಾಗಿ ಫೈಸಲಾಗುವಂತೆ ಮಾಡಿದ ಹೊರತು ಪ್ರಜೆಗಳಿಗೆ ನಾವು ಕೊಟ್ಟ ಆಶ್ವಾಸನೆ ಖಂಡಿತವಾಗಿಯೂ ನೆರವೇರಿದಂತಾಗುವುದಿಲ್ಲ. ಅಮಲ್ದಾರರ ಮತ್ತು ಸಬ್ ಡಿವಿಜನ್ ಅಧಿಕಾರಿ

(ಶ್ರೀ ಎಸ್. ಸಿದ್ದಪ್ಪ)

ಗಳ ವಿಚಾರದಲ್ಲಿ, ಅವರ ಕರ್ತವ್ಯಗಳ ವಿಚಾರದಲ್ಲಿ ಸರ್ಕಾರ ಗಮನ ಕೊಡಬೇಕು.

ಜಮೀನು ವಿಲೇವಾರಿ ವಿಚಾರದಲ್ಲಿ ಸರ್ಕಾರದ ಅನುಮತಿ ಇಲ್ಲದೆ ಗೋಮಾಳ, ಖರಾಬು, ಅರಣ್ಯ ಇವುಗಳಲ್ಲಿ ಜಮೀನನ್ನು ಉಳುಮೆ ಮಾಡತಕ್ಕವರಿಗೆ ಕೊಟ್ಟಿದ್ದಾರೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿದರು. ಸರ್ಕಾರದವರು ಇಂಥ ಜಮೀನುಗಳನ್ನು ಪ್ರಜೆಗಳಿಗೆ ನೇರವಾಗಿ, ಅರ್ಜಿಗಳ ಮೂಲಕ, ಒಂದು ನೀತಿಯನ್ನನುಸರಿಸಿ ಬಡಜನರಿಗೂ, ಜಮೀನು ಇಲ್ಲದವರಿಗೂ ಹಂಚಿ ಅವರು ಕಷ್ಟಪಡುವುದನ್ನು ನಿವಾರಣೆಮಾಡಬೇಕೆಂದೂ, ಇದನ್ನು ಕಾರ್ಯರೂಪಕ್ಕೆ ತರುವುದರಲ್ಲಿ ನಿಧಾನಮಾಡಬಾರದೆಂದೂ ಹೇಳುತ್ತೇನೆ. ಇನಾಂ ಮತ್ತು ಜೋಡಿ ಗ್ರಾಮಗಳಿಗೆ ಸಂಬಂಧಪಟ್ಟ ಕಾನೂನನ್ನು ಕಾರ್ಯರೂಪಕ್ಕೆ ತಂದಿಲ್ಲ. ಇದು ಕೂಡಲೇ ಜಾರಿಗೆ ಬರಬೇಕು. ಈ ಸಂಬಂಧದಲ್ಲಿ ಆಗಬೇಕಾದ ಎಲ್ಲ ಅನುಕೂಲಗಳನ್ನೂ ಕಲ್ಪಿಸಲಾಗಿದೆ. ಇದನ್ನು ಜಾರಿಗೆ ತಂದು ಪ್ರಜೆಗಳಿಗೆ ಪ್ರಯೋಜನವಾಗುವ ರೀತಿಯಲ್ಲಿ ಕಷ್ಟಪಡತಕ್ಕ ಜನಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಅಧ್ಯಕ್ಷರು ಬಹಳ ಆತುರರಾಗಿದ್ದಾರೆ. ನನಗೆ ಕೊಟ್ಟಿರುವ ಕಾಲಾವಕಾಶ ಸಾಲದು. ಮತ್ತೊಮ್ಮೆ ಅವಕಾಶ ಕೊಡಬೇಕೆಂದು ಹೇಳಿ, ನನ್ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರು ಇಷ್ಟು ಮಾತ್ರ ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುವುದಕ್ಕೆ ಅಪ್ಪಣೆಬೇಡುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಸ್ವಾಮಿ, ಸಭೆಯ ಮುಂದೆ ಇಟ್ಟಿರತಕ್ಕ ಈ ಡಿಮ್ಯಾಂಡಿನ ವಿಚಾರವಾಗಿ ಒಂದೆರಡು ಅಂಶಗಳನ್ನು ಪ್ರಸ್ತಾಪಿಸಬೇಕು ಎಂದು ನಿಂತಿದ್ದೇನೆ. ಮುಖ್ಯವಾಗಿ ಪಟೇಲರ ಮತ್ತು ಶ್ಯಾನುಭೋಗರ ವಿಚಾರವಾಗಿ ಬಹಳ ದಿವಸಗಳಿಂದಲೂ ಈ ಸಭೆಯ ಮುಂದೆ ಶ್ರೀ ಬೈರೇಗೌಡರೂ ನಾನೂ ಪ್ರಸ್ತಾಪಮಾಡುತ್ತ ಬಂದಿದ್ದೇವೆ. ಪಟೇಲರು ಮತ್ತು ಶ್ಯಾನುಭೋಗರೂ ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ. ಪಟೇಲರು ಮತ್ತು ಶ್ಯಾನುಭೋಗರಿಗೆ ಕೊಡತಕ್ಕ ಪೋಟಿಗೆ ಬಹಳ ಕಡಿಮೆ ಮತ್ತು ಅವರಿಂದ ಆಗಾಗ ನಿರೀಕ್ಷಿಸತಕ್ಕ ಕೆಲಸ ಬಹಳ ಅಗಾಧವಾಗಿ ಹೆಚ್ಚಾಗುತ್ತಿದೆ. ಅನೇಕ ಪಟೇಲರು ಶ್ಯಾನುಭೋಗರುಗಳಿಗೆ ಪೋಟಿಗೆಯನ್ನು ಕೊಡುವುದಕ್ಕೆ ಕೂಡ ತೊಂದರೆ ಕೊಡುತ್ತಿದ್ದಾರೆ. ಪೋಟಿಗೆ ಕೊಡದೆ ಇದ್ದರೆ ಕಂದಾಯವನ್ನು ವಸೂಲು ಮಾಡುವ ವಿಷಯದಲ್ಲಿ ಸರಿಯಾದ ಜವಾಬ್ದಾರಿಯನ್ನು ವಹಿಸುವುದಿಲ್ಲ. ಹೀಗಾಗಿ ಇಲಾಖೆಗೆ ಬರತಕ್ಕ ಕಂದಾಯವೇನಿದೆ ಅದು ಬಹಳ ಬಾಕಿನಿಲ್ಲುತ್ತಿದೆ. ಇದು ಸರ್ಕಾರಕ್ಕೂ ಗೊತ್ತಿದೆ, ಎಲ್ಲರಿಗೂ ಗೊತ್ತಿದೆ. ಇದನ್ನು ತಪ್ಪಿಸಬೇಕಾದ ಪಕ್ಷದಲ್ಲಿ, ಅವರು ಮಾಡತಕ್ಕ ಕೆಲಸದಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಹೆಚ್ಚಿನ ನಿಗಾ ವಹಿಸಬೇಕಾದ ಪಕ್ಷದಲ್ಲಿ ಶ್ಯಾನುಭೋಗರು ಮತ್ತು ಪಟೇಲರುಗಳಿಗೆ ನಿಗದಿಯಾದ ಸಂಬಳ ಕೊಟ್ಟು ನೇಮಕ ಮಾಡತಕ್ಕದ್ದು ಸೂಕ್ತ. ಯಾಕೆಂದರೆ ಮದರಾಸು ಮುಂತಾದ ಕಡೆಗಳಲ್ಲಿ ಪಟೇಲರು ಮತ್ತು ಶ್ಯಾನುಭೋಗರುಗಳಿಗೆ, ಗ್ರಾಮ ಅಧಿಕಾರಿಗಳಿಗೆ ಸಂಬಳವಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಅಲ್ಲದೆ ದಿನೇ ದಿನೇ ಹೆಚ್ಚುತ್ತ ಇರತಕ್ಕ ವಿದ್ಯಾವಂತರ ಸಂಖ್ಯೆ ಮತ್ತು ಅವರ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಬೇಕಾದರೆ ಇದು ಬಹಳ ಜರೂರಾಗಿ ಯೋಚನೆ ಮಾಡಬೇಕಾದ ವಿಚಾರ. ವಿದ್ಯಾವಂತರಾದ ಯುವಕರನ್ನು ಈ ಕೆಲಸಗಳಿಗೆ ನೇಮಿಸುವುದರಿಂದ ಹೆಚ್ಚಿನ ಅನುಕೂಲ ಆಗುತ್ತದೆ ಸಾವಿರಾರು ವರ್ಷಗಳಿಂದ ನಡೆಸಿಕೊಂಡು ಬಂದಿರುವ ಈ ಪದ್ಧತಿಯಲ್ಲಿ ಹೊಸ ರೂಪನ್ನು ತರಬಹುದು ಆದುದರಿಂದ ಸರ್ಕಾರದವರು ಪಟೇಲರು ಮತ್ತು ಶಾನುಬೋಗರು ಇವರುಗಳಿಗೆ ಸಂಬಳವನ್ನು ಕೊಡತಕ್ಕದ್ದು ಮತ್ತು ಈ ಕೆಲಸಗಳಿಗೆ ಬರತಕ್ಕ ಉಮೇದವಾರರು ಕಡೆಯಪಕ್ಷ S. S. L. C. ಆದರೂ ತೇರ್ಗಡೆ ಹೊಂದಿರಬೇಕು. ಎಂಬ ನಿಬಂಧನೆಗಳನ್ನು ಹಾಕುವುದು ಸೂಕ್ತವೆಂದು ನಾನು ಭಾವಿಸುತ್ತೇನೆ.

ಎರಡನೆಯದಾಗಿ, ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ತಾಲ್ಲೂಕು ಆಫೀಸುಗಳಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳೇನಿವೆ ಅವು ಅಷ್ಟು ಚುರುಕಾಗಿ ಮತ್ತು ಜಾಗ್ರತೆಯಾಗಿ ಆಗುತ್ತಿಲ್ಲ. ಇದಕ್ಕೆ ಕಾರಣವೇನು ಎನ್ನುವುದು ಗೊತ್ತಾಗುತ್ತಿಲ್ಲ. ಕೆಲವು ಆಫೀಸುಗಳಲ್ಲಿ ನಾವು ಎಷ್ಟೋಬಾರಿ ಹೋಗಿ ಕೆಲಸಗಳು ಆಗಬೇಕು ಎಂದು ಒತ್ತಾಯ ಮಾಡಿದರೂ ಸಹ ಆ ರಿಕಾರ್ಡುಗಳು ಈಚೆಗೆ ಬರುವುದೇ ಇಲ್ಲ. ಅರ್ಜಿಗಳನ್ನು ಕೊಟ್ಟಿದ್ದ ಪಕ್ಷದಲ್ಲಿ ಕೆಲವು ಅರ್ಜಿಗಳು ಇರುವುದೇ ಇಲ್ಲ. ಅರ್ಜಿಗಳ ಬಗ್ಗೆ ಆಫೀಸುಗಳಲ್ಲಿ ರೈತರಿಗೆ ಯಾವ ಬಗೆಯ ದಾಖಲಾತಿಗಳೂ ಸಹ ಸಿಕ್ಕುವುದಿಲ್ಲ. ಆದುದರಿಂದ ಯಾವಾಗಲೂ ಒಬ್ಬ ರೈತನೇ ಆಗಲಿ, ಯಾರೇ ಆಗಲಿ, ಅಧಿಕಾರಿಗಳಿಗೆ ಅರ್ಜಿಕೊಟ್ಟ ತಕ್ಷಣ ಅವರಿಗೆ ಒಂದು acknowledgement ಕೊಡತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು ಸೂಕ್ತವೆಂದು ನಾನು ಭಾವಿಸಿಕೊಂಡಿದ್ದೇನೆ. ಹಾಗೆಯೇ ಡೆಪ್ಯೂಟಿಕಮೀಷನರ ಆಫೀಸನ್ನು ತೆಗೆದುಕೊಂಡರೆ ಯಾವ ಒಂದು ರೆಕಾರ್ಡ್ ಆಗಲೀ ವರ್ಷಾನುಗಟ್ಟಲೆ ಕೊಳೆಯುತ್ತ ಕುಳಿತಿರುತ್ತದೆ. ರೈತರು ಅವರು ಮಾಡಬೇಕಾದ ಕೆಲಸಗಳನ್ನು ಬಿಟ್ಟು ಬಿಟ್ಟು ಪ್ರತಿಯೊಂದು ಆಫೀಸಿನಲ್ಲೂ ಇರುವ ಗುಮಾಸ್ತರ ಮೇಜುಗಳ ಬಳಿಯಲ್ಲಿ ಬೆಳಿಗ್ಗೆ 11 ಘಂಟೆಯಿಂದ ಸಾಯಂಕಾಲ 5½—6 ಘಂಟೆಗಳ ವರೆಗೂ ಕಾಯಬೇಕು. ಈ ರೀತಿಯಾಗಿ ಕೆಲಸಗಳು ನಡೆಯುವುದರಿಂದ ರೈತರಿಗೆ ಅನಾನುಕೂಲವಾಗುವುದರ ಜೊತೆಗೆ, ಅವರು, ಮಾಡತಕ್ಕ ಪ್ರತಿದಿನದ ಕೆಲಸಕಾರ್ಯಗಳಿಗೆ ಹೆಚ್ಚಿನ ಅನಾನುಕೂಲವಾಗುತ್ತದೆ ಮತ್ತು ರೈತರಿಗೆ ಬಹಳ ತೊಂದರೆಯಾಗುತ್ತದೆ. ಇದನ್ನು ತಪ್ಪಿಸುವುದು ಬಹಳ ಅವಶ್ಯಕ. ಅದಕ್ಕೋಸ್ಕರವಾಗಿ ಯಾವ ಒಂದು ಅರ್ಜಿಯಾಗಲಿ. ಕಡೆಪಕ್ಷ ಒಂದು ತಿಂಗಳಿಗಿಂತಲೂ ಹೆಚ್ಚು ಕಾಲ ಯಾವ ಆಫೀಸಿನಲ್ಲಿಯೂ ನಿಲ್ಲಬಾರದು. ಯಾವುದಾದರೂ ಆಫೀಸನ್ನು ಬಿಟ್ಟ ತಕ್ಷಣ, ಸಂಬಂಧಪಟ್ಟ ವ್ಯಕ್ತಿಗಳಿಗೆ ಅವರ ಅರ್ಜಿಗಳ ಬಗ್ಗೆ ಯಾವ ಕಾರ್ಯಕ್ರಮವನ್ನು ಇಲಾಖೆಯವರು ತೆಗೆದುಕೊಂಡಿದ್ದಾರೆನ್ನುವುದನ್ನು ತಿಳಿಯಪಡಿಸಲು ಒಂದು ತಿಳಿವಳಿಕೆ ನೋಟೀಸನ್ನು ಕೊಡತಕ್ಕದ್ದು ಅತ್ಯಾವಶ್ಯಕವೆಂದು ನಾನು ಈ ಸಭೆಯಮುಂದೆ ಹೇಳುತ್ತೇನೆ.

Sri Mulka GOVINDA REDDY (Chitaldrug).—Mr. Speaker Sir, I oppose this Demand for Rs. 61,88,000. This tax on land is an out-moded tax. It is neither rational nor scientific. It does not vary with the prospects of the raiyat or with the famine conditions. Sir, this tax should be abolished, and a more rational and

scientific tax such as a tax on agricultural incomes should be introduced. Many a time, the owners of land will be asked to pay this tax though the profession that they are pursuing is profitless. Many a time, water cess is collected for the atchkat under a tank though that particular tank does not receive water for a number of years.

I, therefore, urge that, this should be done away with. Sir, for the progress of any underdeveloped country and an agricultural country, the policy that a Government pursues regarding the land should be the criterian to judge that. I am sorry to say that the Congress Government has not pursued any rational or radical policy. They are pursuing the same outmoded policy. The very limited measure that the Government wanted to bring in by way of Second Amendment to the Tenancy law in Mysore does not seem to have come out of the shelves of the Government. I think it must be hiding somewhere in the forests of Hunsur or Periyapatna. This Government does not seem to be serious even with a measure which is intended to give some benefits to the tenants. Sir, as I said, the policy that we pursue regarding the ceiling limit on land and distribution of land to the landless determines the progress we aim at or the targets we ought to achieve. We have been pressing for the last eight years that the Government should bring in a comprehensive legislation regarding the problem of land. The land is concentrated in the hands of a few and most of them are absentee landlords; those that own extensive land do not cultivate them nor do they evince much interest in the cultivation of those lands. So much so the land is not yielding as much as we desire it to. If we compare the yield in India with that of other countries, it is not even one third; in some places, it is not even one fourth. The agriculture labour class have no interest in the land. Their sweat is utilised for the well being and the luxurious living of the landlords. Unless the tiller of the soil is made to feel that he is producing for the good of the country, he will not evince any interest in the cultivation. What he is paid is only the wage for the labour power that he gives. This policy should undergo a radical change. I urge that Government should bring a comprehensive legislation where the tillers of the soil are made the owners of the land.

Sir, with regard to the distribution of land to the landless the policy followed by the Government is more in favour of the so called political sufferers. Sir, it is a crime to claim lands for the sacrifice they made. If they claim anything in return to the sacrifice they made, then the sacrifice they made will have no value. They should also be treated with other landless people and there should not be any discrimination in the matter of distribution of land to the landless. I earnestly urge that this policy of giving priority to the political sufferers in the matter of distributing land should be discontinued as it is inconsistent with the policy we have laid down for this country.

ಶ್ರೀ ಟಿ. ಎಣ್. ಮೂಡಲಗಿರಿಗೌಡ (ಕುಣಿಗಲು).—ಸ್ವಾಮಿ, ಈ ಸಂಸ್ಥಾನದ ಕಂದಾಯದ ಲೆಕ್ಕ ಪತ್ರಗಳನ್ನಿಡತಕ್ಕದ್ದು, ಪಂಚಾಯಿತಿ ಲೆಕ್ಕಪತ್ರಗಳನ್ನಿಡತಕ್ಕದ್ದು, ಪಂಚಾಯಿತಿ ಹಣದ ವಸೂಲಿ ಇಂಥ ಕೆಲಸಗಳನ್ನೆಲ್ಲಾ ಪಟೇಲ ಶ್ಯಾನುಭೋಗರಿಗೆ ವಹಿಸಲಾಗಿದೆ; ಇಷ್ಟೊಂದು ದೊಡ್ಡ ಜವಾಬ್ದಾರಿ ಹೊತ್ತಿರುವ ಪಟೇಲ ಶ್ಯಾನುಭೋಗರು ಲೆಕ್ಕಪತ್ರ ಇಡುವುದಕ್ಕೆ ಮತ್ತು ಜನಗಳಿಗೆ ತಿಳಿವಳಿಕೆ ಕೊಡುವುದಕ್ಕೆ ಯಾವ ಒಂದು ಟ್ರೈನಿಂಗ್ ಕ್ಲಾಸನ್ನೂ ಇಟ್ಟಿಲ್ಲ. ಪಟೇಲ ಶ್ಯಾನುಭೋಗರುಗಳಿಗಾಗಲಿ ಅಥವಾ ಪಂಚಾಯಿತಿ ಸೆಕ್ರೆಟರಿಗಳಿಗಾಗಲಿ ಯಾವ ರೀತಿಯಲ್ಲೂ ಟ್ರೈನಿಂಗನ್ನು ಕೊಡತಕ್ಕ ಒಂದು ಏರ್ಪಾಡನ್ನು ಸರ್ಕಾರದವರು ಇದುವರೆಗೂ ಮಾಡಿಲ್ಲ. ಅನೇಕ ಸಂದರ್ಭಗಳಲ್ಲಿ ಪಟೇಲರು, ಶ್ಯಾನುಭೋಗರು, ಮತ್ತು ಸೆಕ್ರೆಟರಿಗಳಿಗೆ ಲೆಕ್ಕ ಪತ್ರಗಳನ್ನಿಡತಕ್ಕ ವಿಚಾರದಲ್ಲಿ ಒಬ್ಬರಿಗೊಬ್ಬರಿಗೆ ಏನಿಮಯವಿರುವುದಿಲ್ಲ. ಯಾವ ಲೆಕ್ಕಕ್ಕೆ ರುಜು ಮಾಡಿದೆ, ಯಾವ ಲೆಕ್ಕ ಬರೆಯಬೇಕಾಗಿತ್ತು ಎಂಬುದುಕೂಡ ಗೊತ್ತಿಲ್ಲದೆ ಅನೇಕ ತಪ್ಪಿತಗಳಿಗೆ ಮತ್ತು ಕಷ್ಟಗಳಿಗೆ ಅವರು ಒಳಗಾಗಿದ್ದಾರೆ. ಇದು ಬಹಳ ಪ್ರಾಮುಖ್ಯವಾದಂಥ ವಿಷಯ. ಈಗ ಪಂಚಾಯಿತಿ ಜನರಲ್ ಎಲೆಕ್ಷನ್ ನಡೆದಿದೆ. ಪಂಚಾಯಿತಿ ಲೆಕ್ಕಪತ್ರ ಇಡುವುದು, ಪಂಚಾಯಿತಿ ಕೆಲಸ ಚೆನ್ನಾಗಿ ನಡೆಸುವುದು ಪಂಚಾಯಿತಿಗಳಿಗೆ ಸೇರಿದ್ದಾಗಿದೆ. ಲೆಕ್ಕಪತ್ರ ಹೇಗಿಡಬೇಕು ಮತ್ತು ಹೇಗೆ ಜನರಿಗೆ ತಿಳಿವಳಿಕೆ ಕೊಡಬೇಕು ಎಂಬ ವಿಷಯವೇ ಅವರಿಗೆ ಗೊತ್ತಿಲ್ಲದೆ ಹೋದರೆ 17 ಸಾವಿರ ಗ್ರಾಮಗಳ ಅಥವಾ 15 ಸಾವಿರ ಪಂಚಾಯಿತಿಗಳ ಆಡಳಿತವನ್ನು ಹೇಗೆ ನಡೆಸತಕ್ಕದ್ದು ಎಂಬುದೇ ತಿಳಿಯದಾಗಿದೆ. ಸರ್ಕಾರದವರು ಈ ವಿಷಯವನ್ನು ತೀವ್ರವಾಗಿ ಆಲೋಚಿಸಬೇಕು. **ಕಂದಾ**

(ಶ್ರೀ ಟಿ. ಎನ್. ಮೂಡಲಗಿರಿಗೌಡ)

ಯದ ಬಾಕಿ ಎಷ್ಟಿದೆ, ಜಮೀನು ಹಕ್ಕುಬಾಧ್ಯತೆ ಯಾವ ಸ್ಥಿತಿಯಲ್ಲಿದೆ ಎಂದು ಕೇಳಿದರೆ ಹೇಳುವುದಕ್ಕೇ ಅವರಿಗೆ ಶಕ್ತಿಯಿಲ್ಲ. ಪಟೇಲರಿಗೆ ಗೊತ್ತಿರುವ ಲೆಕ್ಕ ಶ್ಯಾನುಭೋಗರಿಗೆ ಗೊತ್ತಿರುವುದಿಲ್ಲ, ಶ್ಯಾನುಭೋಗರಿಗೆ ಗೊತ್ತಿರುವುದು ಪಟೇಲರಿಗೆ ಗೊತ್ತಿರುವುದಿಲ್ಲ. ಶ್ಯಾನುಭೋಗರು ಬರೆದ ಲೆಕ್ಕಕ್ಕೆ ಪಟೇಲರು ರುಜುಮಾಡಿ ತಾಲ್ಲೂಕು ಆಫೀಸುಗಳಲ್ಲಿ ಸಿಕ್ಕಿಕೊಂಡಿರುವ ಸನ್ನಿವೇಶಗಳು ಬೇಕಾದಷ್ಟಿವೆ. ಜಮೀನುಗಳನ್ನು ಹೇಗೆ ಹಂಚಿಕೊಳ್ಳಬೇಕು, ವಿಸ್ತೀರ್ಣ ನಿರ್ಣಯ ಮಾಡುವುದು ಎಂಬುದು ಕೂಡ ಪಟೇಲ ಶ್ಯಾನುಭೋಗರುಗಳಿಗೆ ಗೊತ್ತಿಲ್ಲ. ಮದರಾಸು, ಬೊಂಬಾಯಿ ಮತ್ತು ಇತರ ಪ್ರಾಂತಗಳಲ್ಲಿ ಈ ವಿಲೇಜ್ ಅಕೌಂಟ್ಸ್ ಮತ್ತು ರೈತರಿಗೆ ಸಂಬಂಧಪಟ್ಟ ಎಲ್ಲ ವಿಷಯಗಳಲ್ಲಿಯೂ ಕೂಡ ವಿಲೇಜ್ ಆಫೀಸರು ತಿಳಿವಳಿಕೆ ಕೊಡುವ ಟ್ರೈನಿಂಗ್ ಕೊಟ್ಟು ನೌಕರರು ಯಾವ ವಿಧದಲ್ಲೂ ಬೇರೆ ಆಫೀಸರುಗಳನ್ನು ಅಪ್ರೋಚ್ ಮಾಡದಿರುವ ಸನ್ನಿವೇಶವನ್ನು ಕಲ್ಪಿಸಿದ್ದಾರೆ. ಪಟೇಲ ಶ್ಯಾನುಭೋಗರುಗಳಿಗೆ ಕ್ವಾಲಿಫಿಕೇಷನ್ಸ್ ಕೂಡ ಅಗತ್ಯ. ಲೆಕ್ಕ ಬರೆಯುವುದಕ್ಕೆ ಬರುತ್ತದೆಯೋ, ಇಲ್ಲವೆ ಎಂದು ತಿಳಿಯದೆ ಅವರಿಗೆ ಅಧಿಕಾರ ವಹಿಸುವುದು ಸರಿಯಲ್ಲ ಹಾಗೆ ವಹಿಸಬೇಕಾದರೆ ಮೊದಲು ಟ್ರೈನಿಂಗ್ ಕೊಡಬೇಕು. ಬರೀ ಪಟೇಲ ಶ್ಯಾನುಭೋಗರುಗಳು ಲೆಕ್ಕಪತ್ರ ತಿಳಿದುಕೊಂಡರೆ ಸಾಲದು, ಸಾಮಾನ್ಯ ಜನರಿಗೂಕೂಡ ಈ ಲೆಕ್ಕಪತ್ರವೇನು, ಹೇಗೆ ಬರೆಯುತ್ತಾರೆ, ಅದರಲ್ಲೇನು ತಿಳಿದುಕೊಳ್ಳಬೇಕಾದ ವಿಷಯವಿದೆ ಎಂಬುದು ಗೊತ್ತಾಗುವ ರೀತಿಯಲ್ಲಿ ಲೆಕ್ಕಪತ್ರವಿರಬೇಕು. ಇದು ಬಹಳ ಕಾನ್ಫಿಡೆನ್ಷಿಯಲ್ ಎನ್ನುವಹಾಗಾಗಬಾರದು. ಆಧಾರ, ಭೋಗ್ಯ ಕಾಗದಪತ್ರ ಬರೆಸಿಕೊಳ್ಳಬೇಕಾದರೆ ಪಟೇಲ ಶ್ಯಾನುಭೋಗರನ್ನು ಆಶ್ರಯ ಮಾಡಿ ಅನೇಕ ಸಂದರ್ಭಗಳಲ್ಲಿ ತಮ್ಮ ಅಸ್ತಿತ್ವವನ್ನೆಲ್ಲಾ ಕಳೆದುಕೊಳ್ಳುವಂತಿರಬಾರದು. ಪಂಚಾಯಿತಿ ಲೆಕ್ಕಪತ್ರಗಳ ಆಡಿಟ್ ಆಗಿಲ್ಲ. ಚುನಾವಣೆ ನಡೆದು ವೈಷಮ್ಯ ಜಾಸ್ತಿಯಾಗಿದೆ. ಲೆಕ್ಕಪತ್ರ ಸರಿಯಾಗಿಟ್ಟು ಜವಾಬ್ದಾರಿಯುತವಾದ ಆಡಳಿತವನ್ನು ನಡೆಸಬೇಕೆಂಬ ಮಾರ್ಗ ಗೊತ್ತಿಲ್ಲದೆ ಈ ದಿವಸ ಪಂಚಾಯಿತಿಗಳಲ್ಲಿ ಕೆಲಸಕಾರ್ಯಗಳು ನಿಂತುಹೋಗಿವೆ ಇದಕ್ಕೆ ಸರ್ಕಾರ ಒಂದು ಏರ್ಪಾಡು ಮಾಡಬೇಕು, ಈ ರೀತಿ ಮಾಡತಕ್ಕದ್ದು ಅಗತ್ಯವಾಗಿದೆ. ಇದು ಬಹಳ ಉಪಯುಕ್ತವಾದ ಕೆಲಸ. ಇಂಥ ದೊಡ್ಡ ಜವಾಬ್ದಾರಿಯನ್ನು ಹೊತ್ತಿರುವ ಸಂಸ್ಥೆಯ ಕೆಲಸ ಮಾಡುವವರಿಗೆ ಸರ್ಕಾರ ಯಾವ ತಿಳಿವಳಿಕೆಯನ್ನೂ ಕೊಟ್ಟಿಲ್ಲ. ಯಾವುದೋ ಕಾಲದಿಂದ ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುತ್ತಿರುವ ಪದ್ಧತಿ ಮುಂದುವರಿಯುತ್ತಿದೆ. ಅವರಿಗೆ ಸರ್ಕಾರ ಶಿಕ್ಷಣ ಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಈಗಲಾದರೂ ಟ್ರೈನಿಂಗ್ ಕೊಡಲು ಏರ್ಪಾಡು ಮಾಡಬೇಕು. ಅದರಿಂದ ಸರ್ಕಾರಕ್ಕೆ ಸಹಾಯವಾಗುವುದೂ ಅಲ್ಲದೆ ಜನರಿಗೆ ಕೂಡ ಹೆಚ್ಚು ಪ್ರಯೋಜನವಾಗುತ್ತದೆ ಎಂದು ನಾನು ಅದನ್ನು ಒತ್ತಾಯ ಮಾಡುತ್ತೇನೆ.

Mr. SPEAKER.—I want to bring it to the notice of the House that because we had not much time for the general discussion on the Budget, I think there should be no time restriction to-day or tomorrow. Of course, with the concurrence of the House, I want to extend the time from 12-30 P.M. to 1-30 P.M. I want to cite the relevant rule so that no points of order are raised. According to rule 124 (2) it is not obligatory on my part to put all the Demands to vote at 12-30 P.M. Since we have come to some arrangement, we can extend the time and then put the Demands to vote.

SOME HON'BLE MEMBERS.—1 o'clock would be all right.

Mr. SPEAKER.—We shall see.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ ಇನಾಂ ರದ್ದಿಯಾತಿ ಮಸೂದೆ ಶಾಸನ ಸಭೆಗಳ ಅಂಗೀಕಾರ ಮುದ್ರೆಯನ್ನು ಪಡೆದು ಇಲ್ಲಿಗೆ ಸುಮಾರು ಎರಡು ವರ್ಷಗಳ ಮೇಲಾಯಿತು. ಆದರೆ ನಮ್ಮ ಬಡ ರೈತರ ದುರದೃಷ್ಟದಿಂದ ಸರ್ಕಾರದವರು ಆ ಆಕ್ಟನ್ನು ಇನ್ನೂ ಜಾರಿಗೆ ಕೊಡದೆ ಹಾಗೆಯೇ ಅದನ್ನು ಮೂಲೆಗಿಟ್ಟಿದ್ದಾರೆ. ಹೀಗೆ ಈ ಆಕ್ಟ್ ಮೂಲೆಯನ್ನು ಸೇರಿದ್ದರಿಂದ ಆ ರೈತರ ಮೇಲೆ ಇತ್ತೀಚೆಗೆ ಅನೇಕ ದುಷ್ಪರಿಣಾಮಗಳುಂಟಾಗಿರುತ್ತವೆ. ಸುಮಾರು ನೂರಾರು ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬಂದಿದ್ದಂಥ ಅನೇಕ ಖದೀಂ ರೈತರು, ಸರ್ಕಾರದವರು ಈ ಕಾನೂನನ್ನು ಸಕಾಲದಲ್ಲಿ ಜಾರಿಗೆ ತಾರದೆಹೋದಕಾರಣದಿಂದ, ಅವರ ವಶದಲ್ಲಿದ್ದಂಥ ಜಮೀನುಗಳನ್ನು ಈಗಾಗಲೇ ಅನೇಕರು ಕಳೆದುಕೊಂಡಿದ್ದಾರೆ; ಇನ್ನೂ ಅನೇಕರು ಸದ್ಯದಲ್ಲೇ ಅವರ ಭೂಮಿಯನ್ನೂ ಸಹ ಕಳೆದುಕೊಳ್ಳುವುದರಲ್ಲಿದ್ದಾರೆ. ಈ ಒಂದು ನಿದರ್ಶನವನ್ನು ನಾವು ಗಮನಿಸಿ ನೋಡಿದ್ದಾದರೆ ಇಂದಿನ ಸರ್ಕಾರದವರು ದೇಶಕ್ಕೆ ಎಷ್ಟು ಉತ್ತಮವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ, ಈ ಭೂಸುಧಾರಣೆ ಅನ್ನತಕ್ಕಂಥ ಒಂದು ದೊಡ್ಡ ಪ್ರಶ್ನೆಯ ಬಗ್ಗೆ ಇವರಿಗೆ ಎಷ್ಟರಮಟ್ಟಿಗೆ ಶ್ರದ್ಧೆ-ಆಸಕ್ತಿಗಳಿರುತ್ತವೆ, ಇದನ್ನು ಜಾರಿಗೆ ತರುವುದರಲ್ಲಿ ಇವರಿಗೆ ಎಷ್ಟು ತಾತ್ಸಾರ ಮನೋಭಾವವಿದೆ ಎನ್ನುವುದನ್ನು ಮತ್ತೆ ವರ್ಣಿಸಬೇಕಾಗಿದ್ದಿಲ್ಲ ಎಂಬ ಅಂಶವನ್ನು ಸೂಚಿಸಲು ನಾನು ಬಹಳ ವಿಷಾದಪಡುತ್ತೇನೆ. ಈ ಹಿಂದೆ ನಾನು ಈ ಸಂಬಂಧವಾಗಿ ಒಂದು ಪ್ರಶ್ನೆಯನ್ನೇ ಈ ಸಭೆಯ ಕಾರ್ಯ ನಡೆವಳಿಕೆಗಳಲ್ಲಿ ಸೇರಿಸಿ ಕಳುಹಿಸಿದ್ದೆನು. ಆಲೂರು ಮತ್ತು ಅರಕಲಗೂಡು ತಾಲ್ಲೂಕುಗಳಲ್ಲಿ ಆ ಜಿಲ್ಲೆಯ ಡೆಪ್ಯುಟಿ ಕಮಿಷನರ್ ಅವರ ಅನುಮತಿಯಿಲ್ಲದೇನೇ ಅಲ್ಲಿಯ ಜೋಡೀದಾರರೂ ಮತ್ತು ಇನಾಂದಾರರೂ ಹೇಗೆ ನೂರಾರು ಜನ ರೈತರಿಂದ ಅವರ ವಶದಲ್ಲಿದ್ದ ಜಮೀನುಗಳನ್ನು ಇತರರಿಗೆ ಪರಭಾರೆ ಮಾಡಿರುತ್ತಾರೆಂಬ ವಿಚಾರವನ್ನು ಅಡಕಗೊಳಿಸಿ ಆ ಪ್ರಶ್ನೆಯನ್ನು ಕಳುಹಿಸಿದ್ದೆನು. ಏತಕ್ಕೆಂದರೆ ಈ ದಿವಸ ಅಲ್ಲಿರತಕ್ಕಂಥ ಇನಾಂದಾರರೂ ಮತ್ತು ಜೋಡೀದಾರರೂ ಆ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಪ್ಪಣೆಪಡೆಯದೆ ಹಾಗೆಯೇ ನೂರಾರು ಜನ ರೈತರ ಜಮೀನನ್ನು ಪರಭಾರೆ ಮಾಡಿದ್ದಾರೆ. ಆದರೆ ವಾಸ್ತವಾಂಶಗಳು ಹೀಗಿರುವುದರಿಂದ ನಮ್ಮ ಸರ್ಕಾರ ವ್ಯವಸಾಯಗಾರರ ಸ್ಥಿತಿಗತಿಗಳನ್ನು ಉತ್ತಮಪಡಿಸುತ್ತಿದ್ದೇವೆ, ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸಿ

ದ್ದೇವೆ ಎಂದು ಹೇಳುತ್ತಿರುವ ಹೇಳಿಕೆಗೆ ಬಹಳ ಧಕ್ಕೆ ಬಂದಿದೆ. ಈ ರೈತರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕು ಎಂಬ ವಿಚಾರದಲ್ಲಿ ನಾವು ಸರ್ಕಾರಕ್ಕೆ ಪದೇಪದೇ ಒತ್ತಾಯವನ್ನು ಹಾಕುತ್ತಿದ್ದರೂ ಸಹ ನಮ್ಮ ಸರ್ಕಾರದವರು ಪಾಸಾಗಿರುವ ಆಕ್ಟನ್ನು ಸಹ ಸಕಾಲದಲ್ಲಿ ಜಾರಿಗೆ ಕೊಡದೆ ಅವರಿಗೆ ತುಂಬ ಅನ್ಯಾಯಮಾಡಿದ್ದಾರೆ. ಈ ಇನಾಂ ರದ್ದಿಯಾತಿ ಕಾನೂನು ನಮ್ಮ ದೇಶದಲ್ಲಿ ಬಹಳ ಹಿಂದೆಯೇ ಜಾರಿಗೆ ಬರಬೇಕಾಗಿತ್ತು. ಆದರೆ ಅದು ಇನ್ನೂ ಜಾರಿಗೆ ಬಾರದಿರುವುದು ನಮ್ಮ ದುರದೃಷ್ಟ. ಆದರೆ ಹೀಗೆ ಆ ಇನಾಂದಾರರಿಗೆ ಪಾವತಿಯಾಗಬೇಕಾಗಿದ್ದಂಥ ಪರಿಹಾರದ್ರವ್ಯದ ಪ್ರಶ್ನೆ ಸಹ ಹಿಂದೆಯೇ ತೀರ್ಮಾನವಾಗಿದೆ. ಹೀಗೆ ಸರ್ಕಾರದವರು ಈ ವರ್ಷವಾದರೂ ಈ ಕಾನೂನನ್ನು ಜಾರಿಗೆ ತರಬಹುದೆಂದು ಆಲೋಚನೆ ಮಾಡಲು ಅವರು ಈ ಕಾಂಪೆನ್ಸೇಷನ್ ಬಗ್ಗೆ ಕೊಡಬೇಕಾದ ಮೊಬಲಗಿನ ಬಗ್ಗೆ ಬಡ್ಜೆಟ್ಟಿನಲ್ಲಿ ಯಾವ ಹಣವನ್ನೂ ಒದಗಿಸಿಟ್ಟುಕೊಂಡಿಲ್ಲ. ಆದಕಾರಣ ನಮ್ಮ ಸರ್ಕಾರ ಈ ವರ್ಷವೂ ಸಹ ಈ ಕಾನೂನನ್ನು ಜಾರಿಗೆ ತರಲು ಸಿದ್ಧವಾಗಿಲ್ಲ ಎಂದು ಇದರಿಂದ ಕಂಡುಬರುತ್ತದೆ. ಇದು ನಿಜವಾಗಿಯೂ ನಮಗೆ ಬಹಳ ಆಶ್ಚರ್ಯಕರವಾದಂಥ ವಿಚಾರವಾಗಿದೆ. ಇಂಥ ಒಂದು ಪ್ರಾಮುಖ್ಯವಾದ ವಿಚಾರದಲ್ಲೇ ಸರ್ಕಾರದವರು ಹೀಗೆ ಗಮನ ಕೊಡದೆ ಉದಾಸೀನ ಭಾವದಿಂದ ವರ್ತಿಸುತ್ತಿರುವಾಗ ಇವರು ಇನ್ನು ಯಾವ ವಿಚಾರಕ್ಕೆತಾನೇ ಗಮನ ಕೊಟ್ಟಾರು ಎನ್ನುವುದೇ ನನಗೆ ತಿಳಿಯದಂತಾಗಿದೆ. ಈ ಹಿಂದೆ ಆ ಟೆನೆನ್ಸಿ ಬಿಲ್ ಇದೇ ಸಭೆಯಮುಂದೆ ಎರಡು ದಿನಗಳವರೆಗೆ ಚರ್ಚಿಸಲ್ಪಟ್ಟಿತು. ಆ ಮಸೂದೆ ಬೇಗ ಪಾಸಾಗಿ ಜಾರಿಗೆ ಬರಬೇಕು ಎಂಬ ಅಭಿಪ್ರಾಯ ಈ ಸಭೆಯ ಎಲ್ಲ ಸದಸ್ಯರಿಗೂ ಇತ್ತು. ಅಷ್ಟು ತೀವ್ರವಾದಂಥ ರೀತಿಯಲ್ಲಿ ನಾವುಗಳು ಅಭಿಪ್ರಾಯವನ್ನಿಟ್ಟುಕೊಂಡಿರುವಾಗ ಅದಕ್ಕೆ ಅವಶ್ಯಕವಾದಂಥ ತಿದ್ದುಪಡಿಗಳನ್ನು ಮಾಡಿ ಅದನ್ನು ಆದಷ್ಟು ಬೇಗ ಜಾರಿಗೆ ತರಬೇಕು ಎಂಬ ಮನೋಭಾವ ಸರ್ಕಾರದವರಿಗೆ ಇಲ್ಲದಿರುವುದರಿಂದಲೇ ಇವರು ಈಹೊತ್ತೂಕೂಡ ಆ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿರುವುದಿಲ್ಲ. ಆದಕಾರಣ ಹೀಗೆ ಸರ್ಕಾರದಲ್ಲಿ ನಡೆಯಬೇಕಾದಂಥ ಅತಿ ಮುಖ್ಯವಾದ ವಿಚಾರಗಳೂ ಸಹ ಸಕಾಲಕ್ಕೆ ಸರಿಯಾಗಿ ನಡೆಯುತ್ತಿಲ್ಲ. ಈಗಲಾದರೂ ಸರ್ಕಾರದವರು ಸದರಿ ಮಸೂದೆಯನ್ನು ಈ ಸಭೆಯಮುಂದಿಟ್ಟು ಅದಕ್ಕೆ ಮುಖ್ಯವಾಗಿ ಆಗಬೇಕಾಗಿರುವ ತಿದ್ದುಪಾಟುಗಳನ್ನು ನಡೆಸಿ ಅದನ್ನು ಬೇಗ ಜಾರಿಗೆ ಕೊಡುವಂತೆ ಏರ್ಪಾಡು ನಡೆಸಬೇಕೆಂದು ನಾನು ಸರ್ಕಾರದವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಈ ಪ್ಲ್ಯಾನ್‌ಗಳ ವಿಚಾರದಲ್ಲಿ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ಈಗತಾನೆ ಕೆಲವು ಮಾನ್ಯ ಸದಸ್ಯರು ಈ ತಾಲ್ಲೂಕ್ ಅಮಲ್ದಾರರುಗಳಿಗೆ ಒಂದೊಂದು ಜೀಪನ್ನು ಒದಗಿಸುವ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ನಾನು ನಮ್ಮ ಜಿಲ್ಲೆಯ ಪರವಾಗಿ ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಆ ಜಿಲ್ಲಾಧಿಕಾರಿಗಳಿಗೆ ಕೂಡ ಅಲ್ಲ ಒಂದು ಪ್ಲ್ಯಾನ್ ಇರುವುದಿಲ್ಲ. ಈ ಹಿಂದೆ ಶ್ರೀಮಾನ್ ಟಿ. ಮರಿಯಪ್ಪನವರು ಮಂತ್ರಿಗಳಾಗಿದ್ದ ಕಾಲದಲ್ಲಿ ರೂರಲ್ ಡೆವಲಪ್‌ಮೆಂಟ್ ಯೂನಿಟುಗಳನ್ನು ಸ್ಥಾಪಿಸಿ-ಅವುಗಳಿಗೆಲ್ಲಾ ಒಂದೊಂದು ಪ್ಲ್ಯಾನನ್ನು ಕೊಟ್ಟಿದ್ದರು. ಈಗ ಅವುಗಳನ್ನೆಲ್ಲಾ ರದ್ದುಗೊಳಿಸಿ ಆ ಪ್ಲ್ಯಾನುಗಳನ್ನೆಲ್ಲಾ ಸರ್ಕಾರದವರು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಹೀಗಾದದ್ದು ನಮ್ಮ ದೇಶದ ದುರದೃಷ್ಟ. ಇತ್ತೀಚೆಗೆ ಈ ಜಿಲ್ಲಾಧಿಕಾರಿಗಳಿಗಂತೂ ಅವರ ಕಾರ್ಯಕ್ಷೇತ್ರ ಬಹಳ ವಿಶಾಲವಾಗಿ ಅವರಿಗೆ ಕೆಲಸಗಳು ಹೆಚ್ಚಾಗಿರುತ್ತವೆ. ಯಾವ ಒಂದು ಸಮಿತಿಯನ್ನು ಏರ್ಪಾಡು ಮಾಡಿದರೂ ಅವರು ಅದಕ್ಕೆ ಅಧ್ಯಕ್ಷರಾಗಿರಬೇಕು ಎಂಬುದಾಗಿ ಇರುತ್ತದೆ. ಆದಕಾರಣ ಈ ಸಂದರ್ಭದಲ್ಲಿ ನಾನು ನಮ್ಮ ಹಾಸನ ಜಿಲ್ಲಾಧಿಕಾರಿಗಳಿಗೆ ಒಂದು ಪ್ಲ್ಯಾನನ್ನು ಒದಗಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಡಿಮ್ಯಾಂಡ್ ಮನವಿ ಬಗ್ಗೆ ಮಾತನಾಡುತ್ತಾ ನಮ್ಮ ಕಡೂರು ತಾಲ್ಲೂಕಿನಲ್ಲಿ ಕೂಡಲೇ ಈ ಸರ್ವೆಸೆಟಲ್‌ಮೆಂಟ್ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವ ಆವಶ್ಯಕತೆ ಬಗ್ಗೆ ಈಗ ಒಂದೆರಡು ಅಂಶಗಳನ್ನು ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗ್ಗೆ ಮೂರು ವರ್ಷಗಳಾಗಾಯಿತಿನಿಂದಲೂ ನಾನು ಆ ನಮ್ಮ ಕಡೂರು ತಾಲ್ಲೂಕಿನಲ್ಲಿ ಈ ಸರ್ವೆ ಕಾರ್ಯಗಳನ್ನು ನಡೆಸಬೇಕೆಂದು ಸರ್ಕಾರಕ್ಕೆ ಪದೇ ಪದೇ ಒತ್ತಾಯಮಾಡುತ್ತಲೇ ಬಂದಿದ್ದೇನೆ. ಅನೇಕವೇಳೆ ಈ ಮಾನ್ಯ ಸಭೆಯಲ್ಲೇ ಅನೇಕಮಂದಿ ಸದಸ್ಯರು ಈ ದಿವಸ ಜಾರಿಯಲ್ಲಿರತಕ್ಕಂಥ ಭೂಕಂದಾಯದ ದರ ಕೆಲವು ಕಡೆ ಜಾಸ್ತಿ ಕೆಲವುಕಡೆ ಕಮ್ಮಿ ಎಂಬುದಾಗಿ ತಿಳಿಸಿದ್ದಾರೆ. ನಮ್ಮ ಸಂಸ್ಥಾನದಲ್ಲಿ ಈ ಸರ್ವೆ ಸೆಟಲ್‌ಮೆಂಟ್ ಕಾರ್ಯಗಳು ನಡೆದು ಬಹಳ ವರ್ಷಗಳಾಗಿವೆ. ಈದಿವಸ ರೈತರು ಕೊಡುತ್ತಿರುವ ಕಂದಾಯ ಬಹಳ ಹಿಂದೆ ಗೊತ್ತುಮಾಡಿದ್ದಾಗಿದೆ. ಈ ದಿವಸ ಸರ್ಕಾರದವರು ಈ ಸರ್ವೆಕಾರ್ಯವನ್ನು ಕೈಗೊಂಡಿದ್ದೇ ಆದರೆ ಸರ್ಕಾರಕ್ಕೆ ಈಗ ಕಂದಾಯ ರೂಪದಲ್ಲಿ ಏನೊಂದು ವರಮಾನ ಬರುತ್ತಿದೆಯೋ ಅದಕ್ಕಿಂತಲೂ ಸ್ವಲ್ಪ ಹೆಚ್ಚು ವರಮಾನ ಬರುವ ಸಂದರ್ಭವಿದೆ. ಈಗ್ಗೆ ಬಹುದಿವಸಗಳ ಹಿಂದೆ ಈ ಜಮೀನುಗಳ ಬೆಲೆ ಮತ್ತು ಧಾನ್ಯಗಳ ಧಾರಣವಾಸಿಗಳು ಯಾವ ರೀತಿಯಾಗಿದ್ದವೋ ಅದಕ್ಕೆ ಅನುಗುಣವಾಗಿ ಆಗ ವಿಧಿಸಿದಂಥ ಕಂದಾಯವನ್ನೇ ಈದಿವಸವೂ ಸಹ ಆ ಜಮೀನ್ದಾರರು ಕೊಡುತ್ತಿದ್ದಾರೆ. ಅಲ್ಲಿಂದೀಚೆಗೆ ಈ ಜಮೀನುಗಳ ಸರ್ವೆಯೂ ಆಗಿಲ್ಲ, ಕಂದಾಯವನ್ನು ಸಹ ಸರಿಮಾಡಿಲ್ಲ. ಆದರೆ ಇತ್ತೀಚೆಗೆ ಅನೇಕರು ಈ ಜಮೀನು ಸರ್ವೆಗಾಗಿ ಅರ್ಜಿ ಕೊಟ್ಟಿರುತ್ತಾರೆ. ಹಾಗೆ ಅವರು ಸರ್ಕಾರಕ್ಕೆ ಅರ್ಜಿಹಾಕಿಕೊಂಡು 10-15 ವರ್ಷಗಳಾದರೂ ಇನ್ನೂ ಅವರ ಜಮೀನುಗಳು ಸರ್ವೆಆಗಿಲ್ಲ. ಹಾಗೆಯೇ ಇರುತ್ತವೆ. ನಮ್ಮ ತಂದೆಯ ಕಾಲದಲ್ಲಿ ಕೊಟ್ಟ ಅರ್ಜಿಗಳೂ ನನ್ನ ಕಾಲಕ್ಕೂಕೂಡ ಆಗದೆ ಇನ್ನೂ ಹಾಗೆಯೇ ಉಳಿದಿರಬೇಕಾದರೆ ಈ ಸರ್ವೆ ಇಲಾಖೆ ಎನ್ನುವುದು ಇನ್ನು ಯಾವ ರೀತಿ ಕೆಲಸಮಾಡುತ್ತಿದೆಯೋ ನನಗಂತೂ ಅದು ಗೊತ್ತಾಗುವುದಿಲ್ಲ. ಇತ್ತೀಚೆಗೆ ಜಮೀನುಗಳು ಒಬ್ಬರಕೈಯಿಂದ ಮತ್ತೊಬ್ಬರಿಗೆ ಬದಲಾವಣೆಯಾಗಿದ್ದರೂ ದಾಖಲೆಗಳಲ್ಲಿ ಮಾತ್ರ ಯಥಾಪ್ರಕಾರವೇ ಇರುತ್ತದೆ. ಒಂದು ಸರ್ವೆನಂಬರಿನಲ್ಲಿರತಕ್ಕ ಜಮೀನು ಈದಿವಸ ನಾಲ್ಕಾರು ಜನರಿಗೆ ಕ್ರಯವಾಗಿರುತ್ತದೆ. ಹಾಗೆ ಕ್ರಯವಾದ ಜಮೀನನ್ನು ಕ್ರಯದಾರರ ಹೆಸರಿಗೆ ವರ್ಗಾಯಿಸದೇ ಈ ನಾಲ್ಕು ಜನರ ಹೆಸರಿಗೂ ಖಾತೆ ಬಿಡದಿರುವುದರಿಂದ ಆ ಗ್ರಾಮದ ಪಟೇಲ್ ಶ್ಯಾನುಭೋಗರು ಆ ಜಮೀನಿಗೆ ಸಂಬಂಧಪಟ್ಟ ಕಂದಾಯವನ್ನು ಪೂರ್ತಿಯಾಗಿ ಆ ನಾಲ್ಕು ಜನರಿಂದಲೂ ವಸೂಲ್ಮಾಡಿಕೊಳ್ಳುತ್ತಿದ್ದಾರೆ. ಆದರೆ ಆ ಕ್ರಯದಾ

(ಶ್ರೀ ವೈ. ಎಂ. ಚಂದ್ರಶೇಖರಯ್ಯ).

ರರು ಆ ಸರ್ವೆ ನಂಬರಿನ ಜಮೀನಿಗೆ ಪಾವತಿಯಾಗತಕ್ಕ ಕಂದಾಯದಲ್ಲಿ ಪ್ರತಿಯೊಬ್ಬರೂ ನಾಲ್ಕನೇ ಒಂದು ಭಾಗದ ಕಂದಾಯಕ್ಕೆ ಮಾತ್ರ ಹಕ್ಕುದಾರರಾಗಿರುತ್ತಾರೆ. ಹಾಗಿದ್ದರೂ ಈದಿವಸ ಅವರಿಂದ ಒಬ್ಬೊಬ್ಬರಿಂದಲೂ ಪೂರಾ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ. ಈ ನ್ಯೂನತೆಗಳನ್ನೆಲ್ಲಾ ಸರಿಪಡಿಸಲು ಸರ್ಕಾರ ಕೂಡಲೆ ಕಡೂರು ತಾಲ್ಲೂಕಿನಲ್ಲೂ ಮತ್ತು ಸಂಸ್ಥಾನದ ಇತರ ಭಾಗಗಳಲ್ಲೂ ಈ ಸರ್ವೆ ಕಾರ್ಯವನ್ನು ಕೂಡಲೇ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಟೇಲ್ ಶ್ಯಾನುಬೋಗರುಗಳಿಗೆ ಪಾವತಿಯಾಗುತ್ತಿರುವ ಪೋಟಿಗೆಯನ್ನು ಜಾಸ್ತಿ ಮಾಡಬೇಕೆಂದು ನಾವು ಪದೇಪದೇ ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ನಾನು ನೋಡಿರುವ ಹಾಗೆ ಒಬ್ಬ ಪಟೇಲನಿಗೆ ವರ್ಷಕ್ಕೆ ಏಳು ರೂಪಾಯಿ ಪೋಟಿಗೆ ಬರುತ್ತಿದೆ. ಇಂಥ ಮನುಷ್ಯನಿಗೆ ಅಲ್ಲಿ ಸರ್ಕಾರದ ಪರ ಕೆಲಸಮಾಡಲು ಹೇಗೆತಾನೆ ಸಾಧ್ಯವಾದೀತು ಎನ್ನುವುದನ್ನು ತಾವೇ ಆಲೋಚಿಸಬೇಕಾಗಿದೆ. ಹಿಂದೆ ಒಂದು ದಿವಸ ಈ ಏಳು ರೂಪಾಯಿ ಪೋಟಿಗೆ ಬರತಕ್ಕ ಪಟೇಲ ತಾಲ್ಲೂಕು ಕಛೇರಿಗೆ ಆ ಪೋಟಿಗೆ ಮೊಬಲಗನ್ನು ತರಲು ಹೋಗಿದ್ದನು. ಆಗ ಆತನು ಆ ಏಳು ರೂಪಾಯಿ ಪೋಟಿಗೆಯಲ್ಲಿ ಎರಡು ರೂಪಾಯಿಗಳನ್ನು ಸಿರಸ್ತೆದಾರರಿಗೆ ಕಾಣಿಕೆ ಕೊಟ್ಟ. ಒಬ್ಬ ಗುಮಾಸ್ತನಿಗೆ ಒಂದು ರೂಪಾಯಿಯನ್ನೂ, ಇನ್ನೊಬ್ಬ ಗುಮಾಸ್ತನಿಗೆ ಮತ್ತೊಂದು ರೂಪಾಯಿಯನ್ನೂ ಕಾಣಿಕೆಯಾಗಿ ಕೊಟ್ಟ. ಬಳಿಕ ಉಳಿದ ಮೊಬಲಗಿನಲ್ಲಿ ಮುಂದೆ ಬಂದು ನಿಂತ ಜವಾನನಿಗೆ ಇನ್ನೊಂದು ರೂಪಾಯಿ ಪಾವತಿಮಾಡಿದ ಮೇಲೆ ಆ ಪಟೇಲನಲ್ಲಿ ಉಳಿದಿದ್ದು ಕೇವಲ ಎರಡು ರೂಪಾಯಿಗಳು ಮಾತ್ರ. ಆಗ ಆತನು ಸೀದಾ ಆ ಅಮಲ್ದಾರರ ಮುಂದೆ ಹೋಗಿ ಆ ಏಳು ರೂಪಾಯಿ ಪೋಟಿಗೆಯಲ್ಲಿ ಖರ್ಚಾಗಿ ಹೋದ ಐದು ರೂಪಾಯಿಗಳು ಜಾತಾ ಉಳಿದಿದ್ದ ಎರಡು ರೂಪಾಯಿಗಳನ್ನು ತಮಗೆ ಕೊಟ್ಟುಬಿಟ್ಟು ನಾನು ಅನಂತರ ಊರುಕಡೆಗೆ ಹೊರಡೋಣ ಎಂಬುದಾಗಿ ಮನಸ್ಸು ಮಾಡಿಕೊಂಡು ತಮ್ಮಲ್ಲಿಗೆ ಬಂದಿದ್ದೇನೆಂದು ತಿಳಿಸಲು ಆಗ ಆ ಮೊಬಲಗನ್ನೆಲ್ಲಾ ಅವರು ಪುನಃ ವಾಪಸ್ಸು ಕೊಡಿಸಿದರಂತೆ. ಹೀಗಿರುತ್ತದೆ ಸಮಾಚಾರಗಳು. ಇಂಥದರಲ್ಲಿ ಹೀಗೆ ಏಳು ರೂಪಾಯಿ ಪೋಟಿಗೆಗೆ ಕೆಲಸ ಮಾಡತಕ್ಕವನು ಹೇಗೆ ಪಟೇಲಿಕೆ ನಡೆಸುತ್ತಾನೆ ಎನ್ನುವುದನ್ನು ನಾವು ಸ್ವಲ್ಪ ಆಲೋಚನೆ ಮಾಡಿ ನೋಡಬೇಕಾಗಿದೆ. ಆದ್ದರಿಂದ ಸರ್ಕಾರದವರು ಈ ಪಟೇಲ್ ಶ್ಯಾನುಭೋಗರುಗಳಿಗೆ ಪೋಟಿಗೆ ಜಾಸ್ತಿ ಮಾಡಬೇಕಾದದ್ದು ನ್ಯಾಯವೆಂದು ಹೇಳುತ್ತೇನೆ. ಕಾರಣ ಹೊಟ್ಟೆತುಂಬ ಅನ್ನ ಕೊಟ್ಟರೆ ಅವರು ಕೈತುಂಬ ಕೆಲಸ ಮಾಡುತ್ತಾರೆ.

ಇನ್ನು ನಾನು ಕಡೆಯದಾಗಿ ಅಮಲ್ದಾರರು ಮತ್ತು ಅಸಿಸ್ಟೆಂಟ್ ಇಂಜಿನಿಯರ ಆಡಳಿತ ವೈಖರಿಯ ಬಗ್ಗೆ ಎರಡು ಮಾತುಗಳನ್ನು ಹೇಳಿ ನನ್ನ ಭಾಷಣವನ್ನು ಪೂರೈಸುತ್ತೇನೆ. ಈ ಅಮಲ್ದಾರರುಗಳಿಗೆ ಪ್ರತಿ ತಾಲ್ಲೂಕು ಕಸಬೆಗಳಲ್ಲೂ ಕಛೇರಿಯಲ್ಲಿ ಒಂದು ಆಫೀಸಿದ್ದರೆ ಅವರ ವಾಸದ ಬಂಗಲೆಗಳಲ್ಲೂ ಅವರಿಗೊಂದು ಹೋಂ ಆಫೀಸು ಎಂದಿರುತ್ತದೆ. ಅವರು ಊರು ಹೊರಗಡೆ ಎಲ್ಲಿಯೂ ಹೋಗದೆ—ಹೆಡ್ ಕ್ವಾರ್ಟರ್ಸಿನಲ್ಲೇ ಉಳಿದಿದ್ದರೂ ಅವರು ತಮ್ಮ ತಾಲ್ಲೂಕು ಕಛೇರಿಯಲ್ಲಿರುವ ಆಫೀಸಿಗೆ ದಿನಗಟ್ಟಲೆ ಬರುತ್ತಲೇ ಇಲ್ಲ. ಗ್ರಾಮಾಂತರ ಪ್ರದೇಶಗಳಿಂದ ಜನರು ಪ್ರತಿ ದಿನವೂ ಅವರ ಭೇಟಿಗಾಗಿ ಬಂದು ಕಾದಿರುತ್ತಾರೆ. ಹಾಗೆ ಅವರು 15-20 ಮೈಲಿಗಳಿಂದ ಬಂದು ಕಛೇರಿ ಬಳಿ ದಿನವೆಲ್ಲಾ ಕಾದಿದ್ದರೂ ಅವರ ಅಹವಾಲನ್ನು ಕೇಳತಕ್ಕವರೇ ಇಲ್ಲದಂತಾಗಿ ಅನೇಕ ಕಡೆ ರೈತರಿಗೆ ತುಂಬ ತೊಂದರೆಗಳಾಗಿರುತ್ತವೆ. ಈ ಎಲ್ಲಾ ತೊಂದರೆಗಳನ್ನೂ ನಿವಾರಣೆ ಮಾಡಲು ಈ ಅಮಲ್ದಾರರುಗಳು ಗ್ರಾಮಗಳಿಗೆ ಸರ್ಕೀಟು ಹೋದಂಥ ಕಾಲದಲ್ಲಿ ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಅರ್ಜಿಗಳನ್ನೆಲ್ಲಾ ಆಯಾ ಗ್ರಾಮದಲ್ಲೇ ಫೈಸಲ್ ಮಾಡುವಂಥ ಒಂದು ಏರ್ಪಾಡನ್ನು ಮಾಡಿದರೆ ಒಳ್ಳೆಯದೆಂದು ನಾನು ಸೂಚಿಸುತ್ತೇನೆ. ಈ ರೈತಾಪಿ ಜನರ ಕಷ್ಟ ನಿವಾರಣೆ ಮಾಡತಕ್ಕ ದೃಷ್ಟಿಯಿಂದಲಾದರೂ ಈ ಎಲ್ಲ ಅಮಲ್ದಾರರುಗಳಿಗೂ ಒಂದೊಂದು ಜೀಪ್ ವ್ಯಾನನ್ನು ಒದಗಿಸುವುದು ತುಂಬ ಅವಶ್ಯಕವೆಂದು ನಾನು ಹೇಳುತ್ತೇನೆ. ನಮ್ಮ ಕಡೂರ್ ತಾಲ್ಲೂಕಿನಲ್ಲೇ ಸುಮಾರು 300 ಹಳ್ಳಿಗಳಿರುತ್ತವೆ. ಆದಕಾರಣ ಎಲ್ಲ ಅಮಲ್ದಾರರುಗಳಿಗೂ ಒಂದು ಜೀಪು ಕಾರನ್ನಾಗಲಿ ಇಲ್ಲವೇ ಒಂದು ವ್ಯಾನನ್ನಾಗಲಿ ಒದಗಿಸುವ ಏರ್ಪಾಡು ಮಾಡಿದರೆ ಜನರಿಗೆ ತುಂಬ ಅನುಕೂಲವಾಗುತ್ತದೆಂದು ಹೇಳಿ ನಾನು ಈ ಕತ್ತರಿ ನಿರ್ಣಯಕ್ಕೆ ನನ್ನ ಬೆಂಬಲ ನೀಡುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ-ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ಮೈಸೂರು ಸಂಸ್ಥಾನದಲ್ಲಿ 17,000 ಹಳ್ಳಿಗಳಿರುತ್ತವೆ. ಈ ಎಲ್ಲಾ ಹಳ್ಳಿಗಳಲ್ಲೂ ತೋಟಿ-ತಳವಾರರುಗಳು ಕೆಲಸ ಮಾಡಿಕೊಂಡು ಬಹಳ ಹಿಂದಿನ ಕಾಲದಿಂದಲೂ ಎಂದರೆ, ಐತ್‌ನಾಮ ಬಹದ್ದೂರು ಕಾಲದಿಂದಲೂ ಈ ಮೇರೆಗೆ ಮಿರಾಸೆಗಳನ್ನು ಪಡೆದುಕೊಂಡು ಬರುತ್ತಿರುವುದು ವಾಡಿಕೆಯಾಗಿ ಬಂದು ಹೋಗಿದೆ. ಈ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ನಾವು ಸರ್ಕಾರದವರಲ್ಲಿ ಪದೇ ಪದೇ ಮನವಿಗಳನ್ನು ಮಾಡಿಕೊಳ್ಳುತ್ತಲೇ ಬಂದಿದ್ದೇವೆ. ಐತ್ ನಾಮ ಬಹದ್ದೂರು ಕಾಲದಿಂದ ಎಂದರೆ—ಹಿಂದೆ ಮುಸಲ್ಮಾನರ ದೌಲತ್ ಇದ್ದಂಥ ಕಾಲದಲ್ಲಿ ಬಾರಾ ಬಲೂತಿ ಎಂಬುದಾಗಿ 12 ಕಸಬಿನ ಕೈವಾಡಗಾರರನ್ನು ಗ್ರಾಮನೌಕರರನ್ನಾಗಿ ನೇಮಿಸಿಕೊಂಡು ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರು. ಆ 12 ಜನ ಕೈವಾಡಗಾರರು ಯಾರಾರೆಂದರೆ—ಗೌಡ, ಶ್ಯಾನುಭೋಗ, ತೋಟಿ, ತಳವಾರ, ನೀರುಗಂಟಿ, ಗೊಂಡಕಾರ ಅಗಸ, ಅಕ್ಕಸಾಲೆ, ಕಮ್ಮಾರ, ಕುಂಬಾರ, ಹಜಾಮ ಇತ್ಯಾದಿ 12 ಕಸಬಿನ ಜನಗಳಿಗೂ ಅವರು ಮಾಡತಕ್ಕ ಸೇವೆಗೋಸ್ಕರವಾಗಿ ಗ್ರಾಮದ ಜನರು ಎಕರೆಗೆ ಮೂರುಸೇರು ಕಾಳಿನಂತೆ ಕೊಡುತ್ತಿದ್ದರು. ಇದರಲ್ಲಿ ಆ ದೇವಾದಾಯ—ದೇವರ ಪೂಜೆಮಾಡತಕ್ಕ ಪೂಜಾರಿಗೆ ಎಕರೆಗೆ ಮೂರುಸೇರು ಕಾಳನ್ನು ಕೊಡಬೇಕಾಗಿತ್ತು, ಅದೇ ರೀತಿ ಬ್ರಹ್ಮಾದಾಯ—ಪಂಚಾಂಗ ಹೇಳತಕ್ಕವರಿಗೂ ಕೊಡಬೇಕಾಗಿತ್ತು. ಆ ಹಳೆಯ ಕಾಲದಲ್ಲಿ ರಚನೆಯಾದಂಥ ಆಗಿದ್ದ ಸಮಾಜ ಪದ್ಧತಿಯ ಪ್ರಕಾರ ಕೆಲಸ ಮಾಡಬೇಕೆಂದು ವಿಧಿಸಿದ್ದ ಕೆಲಸಗಳನ್ನು ಈ ಹೊತ್ತು ಈ ತೋಟಿ-ತಳವಾರಿಗಳು ಈ ಎಕರೆ ಕಾಳಿನಮೇಲೆ ಮಾಡುತ್ತಲೇ ಬಂದಿದ್ದಾರೆ. ಆದರೆ ಈ ದಿವಸ ಇವರಿಗೆ ಆ ಎಕರೆ ಕಾಳೂ ಸಹ ಸರಿಯಾಗಿ ದೊರೆಯುತ್ತಿಲ್ಲ. ಇದಕ್ಕೆಲ್ಲಾ ಸರಿಯಾದ ದಾಖಲೆ ಇತ್ಯಾದಿಗಳನ್ನಿಟ್ಟು ಕೆಲಸ ಮಾಡಲು ಈ ಜನರು ವಿದ್ಯಾವಂತರಲ್ಲ. ಇವರಿಗೆ ಓದು ಬರಹಗಳು ಯಾವವೂ ಇರುವದಿಲ್ಲ. ಇವರು ತಮಗೆ ಬರಬೇಕಾದ ಆದಾಯಗಳು ಬರಲಲ್ಲವೆಂದು ತಾಲ್ಲೂಕು ಅಮಲ್ದಾರ

ರಿಗೆ ದೂರು ಕೊಟ್ಟರೆ ಅವರು ಕ್ರಮವಾಗಿ ಅವರ ಮೇಲೆ ಅಪೀಲು ತನ್ನಿ ಆಗ ನಾನು ಅದನ್ನೆಲ್ಲಾ ವಿಚಾರ ಮಾಡುತ್ತೇನೆಂದು ಹೇಳುತ್ತಿದ್ದಾರೆ. ಈ ದಿವಸ ಇವರು ಸರ್ಕಾರದ ಬೆನ್ನುಮೂಳೆಯಾಗಿದ್ದುಕೊಂಡು ಕೆಲಸಮಾಡುತ್ತಿದ್ದಾರೆ. ಇವರು ಸರ್ಕಾರಕ್ಕೆ ಈ ದಿವಸ ಸಲ್ಲಿಸುತ್ತಿರುವಷ್ಟು ಸೇವೆಯನ್ನು ಮತ್ತೆ ಯಾರೂ ಸಲ್ಲಿಸುತ್ತಿಲ್ಲ. ಈ ದಿವಸ ನಮ್ಮ ಪಕ್ಕದ ಪ್ರಾಂತ್ಯವಾದ ಮದರಾಸ್ ಸರ್ಕಾರ ಅಲ್ಲಿನ ತೋಟಿ-ತಳವಾರಿಗಳಿಗೆ ತಿಂಗಳೊಂದಕ್ಕೆ 6-7 ರೂಪಾಯಿಗಳಂತೆ ವೇತನ ಕೊಡುತ್ತಿದ್ದಾರೆ. ತಾವೂ ಆ ರೀತಿಯಾಗಿ ಇಲ್ಲಿ ಮಾಡದೆ, ಅವರ ಹೊಟ್ಟೆ-ಬಟ್ಟೆಗೂ ಸರಿಯಾಗಿ ಕೊಡದೆ, ನೀವು ಕೆಲಸಮಾಡಿ ಎಂದು ಹೇಳಿದರೆ ಯಾರುತಾನೆ ಹಾಗೆ ಕೆಲಸ ಮಾಡುತ್ತಾರೆ? ಈ ಪಟೇಲ್-ಶ್ಯಾನುಭೋಗರುಗಳೂ ಕೂಡ ಅವರ ಹಾಗೆ ಎಷ್ಟೋ ವರ್ಷಗಳಿಂದ ಈ ಗ್ರಾಮದ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಅವರಿಗೂ ಸಹ ಸರ್ಕಾರದವರು ಹೊಟ್ಟೆಗೆ ಸರಿಯಾಗಿ ಕೊಡುತ್ತಿಲ್ಲ. ಸಂಬಳ ಕೊಡುವಂತೆ ಒಂದು ವ್ಯವಸ್ಥೆಯನ್ನು ಈವರೆಗೂ ಮಾಡಲಿಲ್ಲ—ಅಥವಾ ಅವರಿಗೆ ಪೋಟಿಗೆಯನ್ನಾದರೂ ಜಾಸ್ತಿಮಾಡಿ ಎಂದು ಕೇಳಿದರೆ ಅದನ್ನೂ ಸಹ ಮಾಡುವುದಿಲ್ಲ. ಇದಕ್ಕಾಗಿ ಈಗ ದೇಶದಲ್ಲೆಲ್ಲಾ ದೊಡ್ಡ ಕೂಗೇ ಎದ್ದಿದೆ.

ಈ ದಿವಸ ಒಬ್ಬ ರೈತ ಸರ್ಕಾರಕ್ಕೆ ಜಮೀನಿಗಾಗಿ ಒಂದು ಅರ್ಜಿ ಕೊಟ್ಟರೆ, ಅದು ಎಲ್ಲಿ ಹೋಯಿತು ಎಂಬುದನ್ನು ಕಂಡುಹಿಡಿಯುವುದೇ ಬಹಳ ದುಸ್ತರವಾಗಿದೆ. ರೈತರು ಹೀಗೆ ಏನಾದರೂ ಒಂದು ಅರ್ಜಿಯನ್ನು ತಾಲ್ಲೂಕ್ ಕಛೇರಿಗೆ ಕೊಟ್ಟರೆ ಸರ್ಕಾರದವರು ಅವರಿಗೆ ಯಾವ ಒಂದು ರಶೀತಿ ವಗೈರೆಗಳನ್ನೂ ಕೊಡುತ್ತಿಲ್ಲ. ಆದರೆ ಇತಃಪರ ಯಾವ ರೈತನೇ ಆಗಲಿ ಸರ್ಕಾರಕ್ಕೆ ಒಂದು ದರಖಾಸ್ತು ಅರ್ಜಿಕೊಟ್ಟರೆ ಅದನ್ನು ಮೂರು ತಿಂಗಳೊಳಗಾಗಿ ಫೈಸಲ್ಮಾಡುವಂತೆ ಸರ್ಕಾರದವರು ಒಂದು ಹುಕುಂ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಸರ್ಕಾರದವರಿಂದ ನಮಗೆ ಹೆಚ್ಚಿನ ಸೇವೆ ಆಗಬೇಕು, ಮಂತ್ರಿಗಳ ಗಮನ ಹಳ್ಳಿ ಜನರ ಕಡೆಗೆ ಹರಿಯುವಂತೆ ಆಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

11-30 P.M.

*ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಸಣ್ಣ ಪುಟ್ಟ ಪ್ರಶ್ನೆಗಳನ್ನು ಚರ್ಚೆ ಮಾಡುವ ಪ್ರಮೇಯವೇನೂ ಇಲ್ಲ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ಲಾನಿಂಗ್ ಕಮಿಷನವರು ಒಂದು ಚೌಕಟ್ಟನ್ನು ಕೊಟ್ಟಿದ್ದಾರೆ ಅದರಲ್ಲಿ ಸರ್ಕಾರದ ನೀತಿ ಹೇಗಿರಬೇಕೆಂಬುದನ್ನು ತಿಳಿಸಿದ್ದಾರೆ. ಆ ಯೋಜನೆಯ ಪ್ರಕಾರ 1958ನೇ ಇಸವಿಯಲ್ಲಿ ಈ ಭೂಪ್ರಶ್ನೆಯನ್ನು ತೀರ್ಮಾನ ಮಾಡಬೇಕೆಂದು ಖಚಿತವಾಗಿ ಹೇಳಿದ್ದಾರೆ. ಈಗ ಏನಾಗಿದೆ! ಮುಖ್ಯಮಂತ್ರಿಗಳ ಭಾಷಣದಲ್ಲಿ ಈ ವಿಷಯವನ್ನು ಸೂಚಿಸಿಲ್ಲ ಮತ್ತು ಫೈನಾನ್ಷಿಯಲ್ ಮೆಮೋರ್ಯಾಂಡಂನಲ್ಲೂ ಕೂಡ ಸೂಚಿಸಿಲ್ಲ. ನಮಗೆ ಗೊತ್ತಾಗುವುದು ಹೇಗೆ? ಶ್ರೀಮಾನ್ ತಿಮ್ಮಪ್ಪಗೌಡರು ಇನಾಂ ರದ್ದಿಯಾತಿ ಮಾಡುವುದಕ್ಕೆ ಹಣ ಒದಗಿಸಿಲ್ಲ ಎಂದು ಆಗಲೇ ಹೇಳಿದರು. ಈ ವಿಷಯಗಳೆಲ್ಲಾ ಇವೆ. ಸ್ವಲ್ಪ ಕಾಲಾವಕಾಶ ಕೊಟ್ಟರೆ ಉತ್ತಮ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಇನ್ನು ಚರ್ಚೆ ಮಾಡಬೇಕೆಂದರೆ ಬಾಕಿ ಡಿಮ್ಯಾಂಡುಗಳಿಗೆ ಕಾಲಾವಕಾಶ ಕಡಮೆಯಾಗುತ್ತದೆ. I leave it to the House.

Sri D. DEVARAJ URS (Hunsur).—As mentioned by Sri T. Mariappa, let us know how it would be implemented.

Mr. SPEAKER.—I entirely agree with the Hon'ble Member. But I leave it to the House to take whatever time it wishes to. It can discuss even for two hours. I have no objection. But whether the other Demands will be approached at all is the point.

ಶ್ರೀ ಟಿ. ಮರಿಯಪ್ಪ.—ಸಣ್ಣ ಪುಟ್ಟ ರೀತಿಯಲ್ಲಿರ ತಕ್ಕ ಸಾಧಕ ಬಾಧಕಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತಾ ಇದ್ದಾರೆ. ಅದನ್ನು ಸದ್ಯಕ್ಕೆ ನಿಲ್ಲಿಸಿ ಈ ಭೂಪ್ರಶ್ನೆಯ ವಿಚಾರದಲ್ಲಿ ಸರ್ಕಾರದ ಖಚಿತವಾದ ನೀತಿ ಏನು, ಪ್ಲಾನಿಂಗ್ ಕಮೀಷನವರ ಅಭಿಪ್ರಾಯದಂತೆ ಎಷ್ಟುಮಟ್ಟಿಗೆ ಅವರ ಯೋಜನೆಯಂತೆ ಎರಡು ವರ್ಷಗಳಲ್ಲಿ ಕಾರ್ಯಗತ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಚರ್ಚೆ ಮಾಡುವುದು ಒಳ್ಳೆಯದಲ್ಲವೇ? ಮೂಲಭೂತವಾದ ಈ ಪ್ರಶ್ನೆಯನ್ನು tackle ಮಾಡುವುದು ಹೇಗೆ ಎಂಬುದನ್ನು ಹೇಳುವುದಕ್ಕೆ ಯಾರಾದರೂ ಇಬ್ಬರು-ಮೂರು ಜನ ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು—ಮೂಡಿಗೆರೆ ಅನುಸೂಚಿತ ಜಾತಿಗಳು).—ರಾಜಪ್ರಮುಖರ ಭಾಷಣದ ಮೇಲೂ, ಸಪ್ಲಿಮೆಂಟರಿ ಗ್ರ್ಯಾಂಟ್ ಮೇಲೂ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿಲ್ಲ.

ಅಧ್ಯಕ್ಷರು.—ಮಾತನಾಡುವುದಕ್ಕೆ ಇಷ್ಟವಿದ್ದರೆ ಈಗ ಮಾತನಾಡಿ.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಈ ಅಧಿವೇಶನದಲ್ಲಿ ಒಂದು ಸಾರಿಯೂ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಲಿಲ್ಲ. ಈಗ ಅವಕಾಶ ಸಿಕ್ಕಿದೆ. ಅದಕ್ಕಾಗಿ ಅಧ್ಯಕ್ಷರಿಗೆ ವಂದಿಸುತ್ತಾ ಈ ಖೋತಾ ನಿರ್ಣಯಕ್ಕೆ ಸಂಬಂಧಪಟ್ಟಂತೆ ಗ್ರಾಮಾಧಿಕಾರಿಗಳ ಪೋಟಿಗೆ ವಿಚಾರದಲ್ಲಿ ಮೊದಲು ಮಾತನಾಡುತ್ತೇನೆ. ಅವರು ಈಗಾಗಲೇ ಪೋಟಿಗೆ ಬೇಡ, ವೇತನದ ರೂಪವಾಗಿ ನಮಗೆ ಸಂಬಳ ಕೊಡಲಿ ಅಥವಾ ನಮ್ಮ ಹುದ್ದೆಗಳನ್ನೇ ರದ್ದುಮಾಡಲಿ ಅಥವಾ ಪೋಟಿಗೆ ಜಾಸ್ತಿ ಮಾಡಲಿ ಎಂದು ಕೇಳುತ್ತಾ ಇದ್ದಾರೆ. ಪಂಚವಾರ್ಷಿಕ ಯೋಜನೆ ವಗೈರೆ ಕೆಲಸ ಜಾಸ್ತಿಯಾಗಿ ಪೋಟಿಗೆ ಜಾಸ್ತಿ ಕೊಡಿ ಎಂದು ವಿಲೇಜ್ ಆಫೀಸರುಗಳು ಕೇಳುತ್ತಾ ಇದ್ದಾರೆ. ಇದು ವಾಸ್ತವವಾದ ವಿಚಾರ ಎಂಬುದನ್ನು ನಾನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಗ್ರಾಮಾಧಿಕಾರಿಗಳ ಕೆಲಸ ಕಾರ್ಯಗಳಿಗೆ ತಕ್ಕ ವೇತನ ಕೊಡುವುದನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಬೇಕು. ಈಗ ತೋಟಿ, ತಳವಾರರಿಗೆ ಕೂಡ ಕೆಲಸ ತುಂಬ ಜಾಸ್ತಿಯಾಗಿದೆ ಎಂಬುದನ್ನು ಮಾನ್ಯಮಿತ್ರರಾದ ಶ್ರೀ ಸಿ. ಟಿ. ಹನುಮಂತಯ್ಯನವರು ತಮ್ಮ ಗಮನಕ್ಕೆ ತಂದಿದ್ದಾರೆ. ತೋಟಿ ತಳವಾರರಿಗೆ ಯಾವ ಇನಾಮು ಜಮೀನು ಕೊಟ್ಟಿದ್ದೀರೋ ಅವು ಉತ್ಕೃಷ್ಟವಾದ ಜಮೀನಲ್ಲ. ಅಲ್ಲದೆ ಅವರ ವರಮಾನವೂ ಕೂಡ ಬಹಳ ಕಡಮೆಯಾಗಿ ಅವರ ಜೀವನದ ಸ್ಥಿತಿ ಚಿಂತಾಜನಕವಾಗಿದೆ. ಈ ಮಾನ್ಯ ಸಭೆಯಲ್ಲಿ ಅನೇಕ ವರ್ಷಗಳಿಂದಲೂ ಕೂಡ ತೋಟಿ ತಳವಾರರ ಸ್ಥಿತಿಯನ್ನು ಪರಿಶೀಲಿಸಿ ಅವರುಗಳಿಗೆ ಸಲ್ಲತಕ್ಕ ಮಿರಾಸೆಯನ್ನು ಜಾಸ್ತಿ ಮಾಡಬೇಕು ಮತ್ತು ಮಿರಾಸೆ ಸರಿಯಾದ ರೀತಿಯಲ್ಲಿ ಸಲ್ಲುತ್ತಿಲ್ಲ, ಅದನ್ನು ಸರಿಯಾದ ರೀತಿಯಲ್ಲಿ ಸಲ್ಲುವಂತೆ ಏರ್ಪಾಡು

(ಶ್ರೀ ಜಿ. ಪುಟ್ಟಸ್ವಾಮಿ.)

ಮಾಡಬೇಕೆಂದು ಸರ್ಕಾರದವರಲ್ಲಿ ಮನವಿಮಾಡಿಕೊಂಡಿದ್ದಾರೆ. ಆದರೂ ಕೂಡ ತೃಪ್ತಿಕರವಾದ ರೀತಿಯಲ್ಲಿ ಸರ್ಕಾರ ಈ ವಿಚಾರದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ಇನ್ನು ಮುಂದಾದರೂ ಕೂಡ ಅದನ್ನು ಮೂಲಭೂತವಾದ ತತ್ವದ ರೀತಿಯಲ್ಲಿ ಸಮಗ್ರವಾಗಿ ಯೋಚನೆಮಾಡಿ ಈ ಗ್ರಾಮಾಧಿಕಾರಿಗಳಿಗೆ ಯಾವ ಒಂದು ಸರಿಯಾದ ವೇತನ ಸಲ್ಲಿಸಬೇಕೋ ಅದನ್ನು ಸಲ್ಲಿಸಿ, ಈ ಕೆಲಸ ತೃಪ್ತಿಕರವಾಗಿ ನಡೆದುಕೊಂಡು ಬರುವುದಕ್ಕೆ ಒಂದು ಯೋಜನೆಯನ್ನಾದರೂ ತಯಾರುಮಾಡಿ ಕ್ರಮಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ದರಖಾಸ್ತು ವಿಚಾರದಲ್ಲಿ ಸ್ವಲ್ಪ ಜಮೀನು ವಿಲೇವಾರಿ ಮಾಡತಕ್ಕ ವಿಷಯದಲ್ಲಿ ಕೆಲವು ಅಂಶಗಳನ್ನು ಈಗಾಗಲೇ ಮಾನ್ಯಸದಸ್ಯರು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಯಾರಿಗೆ ಜಮೀನು ಸೇರಬೇಕೋ ಅವರಿಗೆ ಸೇರದೆ, ಜಮೀನಿರುವವರಿಗೇ ಜಮೀನು ಸೇರುತ್ತಿದೆ ಎಂಬ ಅಂಶವನ್ನು ಕೂಡ ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಸರ್ಕಾರದವರ ಗಮನಕ್ಕೆ ತಂದಿದ್ದಾರೆ. ಒಂದು ತತ್ವದ ದೃಷ್ಟಿಯಿಂದ ಜಮೀನು ಯಾರಿಗೆ ಸೇರಬೇಕು ಎಂದರೆ, ಯಾರು ಉಳುತ್ತಾನೆಯೋ ಅವನಿಗೆ ಜಮೀನು ಸೇರಬೇಕು ಎಂಬ ಒಂದು ತತ್ವ ಎಲ್ಲರ ಭಾವನೆಯಲ್ಲೂ ಇದೆ. ಅದಕ್ಕೆ ತಕ್ಕಂತೆ ಕಾನೂನನ್ನು ಕೂಡ ಅನೇಕ ರೀತಿಯಲ್ಲಿ ಮಾರ್ಪಾಡು ಮಾಡಿದ್ದಾರೆ. ಆದರೂ ಸಾಲದು. ಸರ್ಕಾರದವರು ಆಗಿಂದಾಗ್ಗೆ ಸರ್ಕ್ಯುಲರ್ ಮೂಲಕ ರೆವಿನ್ಯೂ ಇಲಾಖೆಯಲ್ಲಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಜಮೀನು ದರಖಾಸ್ತುಗಳ ವಿಲೇವಾರಿಯನ್ನು ಜಾಗ್ರತೆಯಾಗಿಯೂ ಸರಿಯಾದ ರೀತಿಯಲ್ಲಿಯೂ ಮಾಡಬೇಕೆಂದು ತಿಳಿಸುತ್ತಾ ಇದ್ದಾರೆ. ಆದರೂ ಸಹ ನಿರೀಕ್ಷಿಸಿದಷ್ಟು ಮಟ್ಟದಲ್ಲಿ ಈ ಜಮೀನುವಿಲೇವಾರಿ ಆಗುತ್ತಿಲ್ಲ. ರೈತರಿಗೆ ಸರಿಯಾದ ರೀತಿಯಲ್ಲಿ ಜಮೀನು ದೊರಕುತ್ತಾ ಇಲ್ಲ. ಅಹವಾಲು ತಃಖ್ತೆ ನೋಡಿ ಮಂಜೂರ್ಮಾಡಬೇಕೆಂದು ನಿಯಮವಿದ್ದರೂ ಕೂಡ ಯಾರಿಗೆ ಜಮೀನು ಇರುತ್ತದೆಯೋ ಆತನನ್ನು ಬಿಟ್ಟುಬಿಟ್ಟು ಅದೇ ಕುಟುಂಬದಲ್ಲಿರತಕ್ಕ ಇನ್ನೊಬ್ಬನನ್ನು ಬೇರೆ ಕುಟುಂಬದಲ್ಲಿದ್ದಾನೆ ಎಂಬ ಲೆಕ್ಕವನ್ನು ತೋರಿಸಿ ಒಂದೇ ಕುಟುಂಬದ ಎಲ್ಲರೂ ಜಮೀನು ಪಡೆಯುತ್ತಿದ್ದಾರೆಂಬುದನ್ನು ತನಿಖೆ ಮಾಡಬೇಕು. ಕಾರ್ಯತಃ ಜಮೀನಿಲ್ಲದವರಿಗೆ ಏನು ಒಂದು ಆಶೆ ಇದ್ದೆಯೋ ಅದು ನೆರವೇರುತ್ತಾ ಇಲ್ಲ ಎಂದು ಹೇಳುತ್ತೇನೆ. ನಿರ್ಗತಿಕರಾದ ಬಡವರಿಗಂತೂ ಜಮೀನು ದೊರೆಯದೆ, ಯಾರ ಪ್ರಭಾವ ಹೆಚ್ಚಿರುತ್ತದೆಯೋ, ಯಾರಿಗೆ ಜಮೀನಿರುತ್ತದೆಯೋ ಅವರಿಗೇ ಜಮೀನು ದೊರೆಯುತ್ತಿದೆ ಎಂಬ ಭಾವನೆ ಜನರಲ್ಲಿದೆ. ಇದು ಹೋಗಬೇಕೆಂದು ಅನೇಕ ಮಾನ್ಯಸದಸ್ಯರು ಬಹಳ ವರ್ಷಗಳಿಂದಲೂ ಹೇಳುತ್ತಾ ಇದ್ದಾರೆ. ಈಗಲೂ ಈ ವಿಚಾರದಲ್ಲಿ ಎಷ್ಟೋ ಉತ್ತಮವಾಗಿದ್ದರೂ ಕೂಡ ನಿರೀಕ್ಷಿಸಿದಷ್ಟು ಮಟ್ಟಕ್ಕೆ ಬಂದಿಲ್ಲ. ಹರಿಜನರಿಗಂತೂ ಜಮೀನು ದೊರೆಯುತ್ತಿಲ್ಲ. ಎಲ್ಲಿ ನೋಡಿದರೂ ಕೂಡ ಜಮೀನಿಲ್ಲದವರ ಹೆಸರಿನಲ್ಲಿ ಅರ್ಜಿಹಾಕಿ ಜಮೀನುದಾರನೇ ಜಮೀನನ್ನು ಪಡೆಯುತ್ತಾ ಇದ್ದಾನೆ. ಹರಿಜನರ ದರಖಾಸ್ತು ಅರ್ಜಿಯಮೇಲೆ ಮಾತ್ರ. ಎಲ್ಲಿ ನೋಡಿದರೂ ಸ್ಟೇ ಆರ್ಡರು, ಎಲ್ಲಿ ನೋಡಿದರೂ ಅಪೀಲುಗಳು. ಸರ್ಕಾರದಲ್ಲಿರತಕ್ಕ ಲೆಕ್ಕ ತೆಗೆದುಕೊಂಡರೆ ಮಾತ್ರ ಕಾಣುತ್ತದೆಯೇ ಹೊರತು ಹರಿಜನರಿಗೆ ಹೆಚ್ಚಾಗಿ ಜಮೀನು ಮಂಜೂರ್ಮಾಡುತ್ತಿದೆ ಎಂದು ಬಾಯಲ್ಲಿ ಹೇಳಿದರೆ ಕಾಣುವುದಿಲ್ಲ. ಸರ್ಕಾರದವರು ನಾನು ಹೇಳತಕ್ಕದ್ದು ನಿಜವೇ ಅಥವಾ ಸತ್ಯಕ್ಕೆ ದೂರವಾದದ್ದೇ ಎಂಬುದನ್ನು ಪರಿಶೀಲನೆ ಮಾಡಬಹುದು. ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಹರಿಜನರಿಗೆ ಸಂಬಂಧಪಟ್ಟ ದರಖಾಸ್ತು ಅರ್ಜಿಗಳು ಹೆಚ್ಚಾಗಿ ಪೆಂಡಿಂಗ್‌ನಲ್ಲಿರುತ್ತವೆ. ಜಮೀನು ಇಲ್ಲದಂಥಾ ರೈತರ ಅರ್ಜಿಗಳು ಎಷ್ಟೋ ಪೆಂಡಿಂಗ್‌ನಲ್ಲಿವೆ. ಇವು ಎಷ್ಟು ಇವೆ, ಎಷ್ಟು ವರ್ಷಗಳಿಂದ ಇವೆ, ಎಲ್ಲ ದರಖಾಸ್ತು ಅರ್ಜಿಗಳೂ ರಿಜಿಸ್ಟರಾಗುತ್ತಿವೆಯೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟು ಈ ಅರ್ಜಿಗಳು ಜಾಗ್ರತೆ ವಿಲೇ ಆಗುವಂತೆ ಮಾಡಿ ಜಮೀನಿಲ್ಲದವರಿಗೆ ಜಮೀನು ದೊರೆಯುವಂತಾದರೆ ನನಗೆ ತೃಪ್ತಿಯಾಗುತ್ತದೆ ಎಂದು ನಾನು ಮನವಿಮಾಡಿಕೊಳ್ಳುತ್ತೇನೆ.

ಆಮೇಲೆ ಈ ಸರ್ವೇ ಇಲಾಖೆಯಲ್ಲಿ 10-20 ವರ್ಷಗಳಿಂದಲೂ ರಿಕಾರ್ಡ್‌ಗಳು ಫೈಸಲಾಗದೆ ಬಾಕಿ ಇವೆ ಎಂದು ಕೇಳಿದ್ದೇನೆ. ಇದು ನಿಜವಾದ ಪಕ್ಷದಲ್ಲಿ ನಾನು ತುಂಬ ವಿಷಾದಪಡುತ್ತೇನೆ. ಸರ್ವೆ ಇಲಾಖೆಯಲ್ಲಿ ಬಹಳ ದಿವಸಗಳಿಂದಲೂ ಈ ರಿಕಾರ್ಡ್‌ಗಳು ಫೈಸಲಾಗದೆ, ಫೋಡ್ ರೆಕಾರ್ಡ್ಸ್ ಬಾಕಿ ಇವೆ. ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹಾಸನದಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರ ಸರ್ವೇ ಆಫೀಸು ಇದೆ. ಅಲ್ಲಿಗೆ ನಮ್ಮ ಜಿಲ್ಲೆಯವರು ಹೋಗಿ ಬರುವುದಕ್ಕೆ ಆಗುವುದಿಲ್ಲ. ರೈತರು ನೇರವಾಗಿ ಆಫೀಸರುಗಳನ್ನು ನೋಡುವುದಕ್ಕೆ ಆಗುವುದಿಲ್ಲ. ಆಗಾಗ್ಗೆ ಈ ಮೇಲ್ಕಂಡ ಸರ್ವೇ ಆಫೀಸರು ಚಿಕ್ಕಮಗಳೂರಿಗೆ ಬರುತ್ತಾರೆ. ಆಗಲೂ ಸಹ ಅವರು ರೈತಾಪಿ ಜನರ ಕೈಗೆ ಸಿಕ್ಕುವುದಿಲ್ಲ. ಇದರಿಂದ ಎಷ್ಟೋ ತೊಂದರೆಯಾಗಿದೆ. ರೈತರಿಗೆ ನೇರವಾಗಿ ಆಫೀಸರುಗಳನ್ನು ಭೇಟಿ ಮಾಡುವ ಅವಕಾಶ ದೊರೆಯದೆ ತಾಲ್ಲೂಕು ಆಫೀಸಿನಲ್ಲಿರತಕ್ಕ ಅಧಿಕಾರಿಗಳನ್ನು ಕೂಡ ನೋಡುವುದಕ್ಕೆ ಅವಕಾಶವಾಗದೇ ಅವರ ಮನವಿಗಳನ್ನು, ಸಲ್ಲಿಸುವುದಕ್ಕೂ ಅವರ ಕುಂದುಕೊರತೆಗಳನ್ನು ಹೇಳಿಕೊಳ್ಳುವುದಕ್ಕೂ ಅವಕಾಶ ದೊರೆಯದೇ ಎಷ್ಟು ತೊಂದರೆಯಾಗಿದೆ ಎಂಬುದನ್ನು ವಿವರಿಸುವುದಕ್ಕೆ ಸಾಧ್ಯವಿಲ್ಲ. ಎಷ್ಟು ರಿಕಾರ್ಡುಗಳು, ಎಷ್ಟು ವರ್ಷಗಳಿಂದ ಪೆಂಡಿಂಗ್‌ನಲ್ಲಿವೆ ಎಂಬುದನ್ನು ಸರ್ಕಾರದವರು ತಿಳಿದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕೆಂದು ಸಲಹೆ ಮಾಡಿ, ಈ ಫೋಡ್ ರಿಕಾರ್ಡು ಆದಷ್ಟು ಜಾಗ್ರತೆ ವಿಲೇ ಆಗಬೇಕು ಮತ್ತು ಸರ್ಕಾರದಿಂದ ದರಖಾಸ್ತು ಮೂಲಕ ಪಡೆದಂಥಾ ಜಮೀನು ಫೋಡಿ ರಿಕಾರ್ಡುಗಳು ಕೂಡ ಅನೇಕ ಕಾರಣಗಳಿಂದ ಬಾಕಿ ಇವೆ, ಅವುಗಳನ್ನು ಕೂಡ ಜಾಗ್ರತೆ ವಿಲೇ ಮಾಡುವುದಕ್ಕೆ ಏರ್ಪಾಡುಮಾಡಬೇಕೆಂದು ಕೇಳುತ್ತೇನೆ ಸ್ವಾಮಿ.

ಶ್ರೀ ಜೆ. ನಾರಾಯಣಪ್ಪ (ಚಿಂತಾಮಣಿ—ಅನುಸೂಚಿತ ಜಾತಿಗಳು).—ಸ್ವಾಮಿ, ಈಗ್ಗೆ ಸುಮಾರು ನಾಲ್ಕು ವರ್ಷಗಳಿಂದಲೂ ತೋಟಿ, ತಳವಾರರ ವಿಚಾರದಲ್ಲಿ ನಿರ್ಣಯಗಳನ್ನೂ, ಪ್ರಶ್ನೆಗಳನ್ನೂ ತಿಳಿಸುತ್ತಾ ಇದ್ದೇನೆ. ಆದರೂ ಕೂಡ ಅವರ ವಿಚಾರದಲ್ಲಿ ಯಾವುದೂ ಇತ್ಯರ್ಥವಾಗಲಿಲ್ಲ. ಆ ವಿಚಾರದಲ್ಲಿ ನನಗೆ ಪೂರ್ಣ ಅನುಭವ ಇದೆ, ಸ್ವಾಮಿ. ಗ್ರಾಮಾಂತರಗಳಲ್ಲಿ ಈ ತಳವಾರನಿಗೆ ನಿರ್ದಿಷ್ಟವಾಗಿ ಇಷ್ಟೇ ಘಂಟೆಗಳ ಕಾಲ ಕೆಲಸಮಾಡಬೇಕೆಂಬ ನಿಗದಿ ಇಲ್ಲ. ಹದಿನೆಂಟು ಡಿಪಾರ್ಟ್‌ಮೆಂಟುಗಳ ಆಫೀಸರುಗಳು ಬಂದರೂ ಅವರ ಸೇವೆ ಅವನು ಮಾಡಬೇಕು. ಪಟೇಲ್ ಶ್ಯಾನುಭೋಗರ ಕೈಕೆಳಗೆ ಒಂದು ಘಳಿಗೆಯೂ ಬಿಡುವಿಲ್ಲದೆ ಹಗಲುಹೊತ್ತು ದುಡಿಯುತ್ತಾ ಇರುತ್ತಾರೆ. ಗ್ರಾಮಗಳಲ್ಲಿ ರಾತ್ರಿ ಹೊತ್ತು ಸರದಿ

ಪ್ರಕಾರ ಕಾವಲು ಕಾಯುತ್ತಾರೆ. ಕೆಲವರಿಗೆ ತಿಂಗಳಿಗೆ ಒಂದು ಸಾರಿ ಬೀಳುತ್ತದೆ. ಈ ನೌಕರರು ಮಾತ್ರ ದಿನವೂ ಇರಬೇಕು. ಒಂದು ದಿನ ತಪ್ಪಿದರೆ ಪೋಲೀಸ್‌ನವರು ಹಿಂದೆಯೇ ಬರುತ್ತಾರೆ. ಈ ನೌಕರರಿಗೆ ಇರತಕ್ಕ ಆದಾಯ ಎಂದರೆ ಮಿರಾಸೆ. ನಿಜವಾಗಿಯೂ ಈ ಮಿರಾಸೆ ಎನ್ನುವುದು ನಿರಾಸೆಯಾಗಿದೆ. ಮಿರಾಸೆಯನ್ನು ದೊಡ್ಡ ದೊಡ್ಡವರಾರೂ ಕೊಡುವುದೇ ಇಲ್ಲ. ಸಣ್ಣ ಪುಟ್ಟ 1-2 ಎಕರೆ ಇಟ್ಟುಕೊಂಡಿರುವವರು ಲೆಕ್ಕಾಚಾರವಾಡದೇ ಐದುಸೇರು ಕೊಡುವ ಕಡೆ ಮೂರು ಸೇರು ಕೊಟ್ಟು, ಹಿಂದಿನಿಂದ, ನಮ್ಮಪ್ಪನ ಕಾಲದಿಂದ ಇಷ್ಟೇ ಕೊಡುವುದು ಎಂದು ಹೇಳಿಬಿಡುತ್ತಾರೆ. ನಮ್ಮ ಜಿಲ್ಲೆಯಲ್ಲಿ 100-200 ಸೇರು ಕೊಡಬೇಕಾದವರು ಇದ್ದಾರೆ. ಅಂಥವರು ಕೂಡ ಮೊರದಲ್ಲಿ ಎರಡು ಅಥವಾ ಮೂರು ಸೇರು ಇಟ್ಟು 'ಸಾಲದೇನೋ' ಎಂದು ಹೇಳಿ ಕಳುಹಿಸಿಬಿಡುತ್ತಾರೆ. ಇದೆಲ್ಲಾ ನಿಜ. ನಿಜ ಎಂದರೆ ನನ್ನ ಅನುಭವ ಹಾಗಿದೆ. ಈಗ ಯಾವುದಾದರೂ ಒಂದು ಇಲಾಖೆಯನ್ನು ಸ್ಥಾಪನೆಮಾಡಬೇಕಾದರೆ ಒಂದು ಲಕ್ಷ ಆಗಲಿ, ಹತ್ತು ಲಕ್ಷವಾಗಲಿ ಖರ್ಚುಮಾಡುತ್ತೀರಿ. ಮಾಡಿ ಅದನ್ನು ಬೇಗ ಸ್ಥಾಪನೆಮಾಡುತ್ತೀರಿ. ಈ ಬಡ ನೌಕರರ ವಿಚಾರದಲ್ಲಿ ಗುಂಡಪ್ಪ ಗೌಡರ ಕಾಲದಿಂದಲೂ ಕೇಳುತ್ತಾ ಇದ್ದಾರೆ. ಒಂದು ವರ್ಷದ ಹಿಂದೆ ನಾನು ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿದಾಗ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಉತ್ತರ ಕೊಡುತ್ತಾ, ಬೇಗ ಸಮಿತಿ ಏರ್ಪಡಿಸಿ ಅವರಿಗೆ ಸಂಬಳ ಬರುವ ರೀತಿಯಲ್ಲಿ ಏನಾದರೂ ಏರ್ಪಾಡು ಮಾಡುತ್ತೇವೆ ಎಂದು ಅಪ್ಪಣೆ ಮಾಡಿದರು. ಆದರೂ ಕೂಡ ಇದುವರೆಗೂ ಆ ಸಮಾಚಾರವೇ ಇಲ್ಲ. ಈಗ ಅವರಿಗೆ ದವಸದ ರೂಪದಲ್ಲಿ ಕೊಡಿಸುತ್ತೇವೆ ಎಂದು ಹೇಳುತ್ತೀರಿ. ರೈಲ್ವೇ ಸೆಸ್ಸು, ಎಜ್ಯುಕೇಷನ್ ಸೆಸ್ಸು ಎಂಬುದಾಗಿ ಅನೇಕ ಸೆಸ್ಸುಗಳನ್ನು ಹಾಕಿ ವಸೂಲು ಮಾಡುತ್ತೀರಿ; ಅದೇ ರೀತಿ ಮಿರಾಸೆ ಸೆಸ್ಸು ಎಂದು ಹೇಳಿ ಹಾಕಿ ವಸೂಲುಮಾಡಿ ಅದನ್ನು ತೋಟಿ ತಳವಾರರಿಗೆ ದವಸದ ರೂಪದಲ್ಲಿ ಕೊಡುವುದಕ್ಕೆ ಬದಲಾಗಿ ಸಂಬಳದ ರೂಪದಲ್ಲಿ ಕೊಡುವ ಏರ್ಪಾಡುಮಾಡಿದರೆ ಒಳ್ಳೆಯದು. ವಂಶಪಾರಂಪರ್ಯವಾಗಿ ಬಂದಿದ್ದಾರೆ ಎಂದ ಮಾತ್ರಕ್ಕೆ ಅವರನ್ನೆಲ್ಲಾ ಖಾಯಂಮಾಡಬೇಡಿ, ಯಾರು ಸರಿಯಾಗಿ ಕೆಲಸಮಾಡುತ್ತಾರೆಯೋ ಅಂಥವರನ್ನು ಆರಿಸಿಕೊಂಡು ಕೆಲಸಮಾಡುವುದಕ್ಕೆ ತಕ್ಕಂತೆ ಸಂಬಳ ಕೊಡುವುದು ಉತ್ತಮ. ಅವರ ಕಷ್ಟ ಇಷ್ಟು ಅಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಅವನಿಗೆ ಇನಾಂ ಜಮೀನು ಕೊಟ್ಟಿರುತ್ತೀರಿ. ಅದರಲ್ಲಿ ಅವನು ಯಾವಾಗ ಕೆಲಸಮಾಡಬೇಕು? ಅವನಿಗೆ ಬಿಡುವೇ ಇಲ್ಲ. ರಾತ್ರಿ ಹಗಲು ಗ್ರಾಮದ ಕಾವಲು ಕಾದು ಇರಬೇಕು. ಪಟೇಲ್ ಶ್ಯಾನುಭೋಗರಿಂದ ಹಿಡಿದು ಬಂದು ಹೋದ ಆಫೀಸರುಗಳ ಕೆಲಸ ನೋಡಬೇಕು. ಈಗ ಈ ಜಮೀನುಗಳು ಬೀಡು ಬಿದ್ದಿರುತ್ತವೆ. ಅದನ್ನು ನೋಡುವವರೂ ಇಲ್ಲ. ಇವರಿಗೆ ಕೊಡತಕ್ಕ ಮಿರಾಸೆ ಪದ್ಧತಿಯನ್ನು ತಪ್ಪಿಸಿ; ಸ್ವಾತಂತ್ರ್ಯ ಬಂದುದಕ್ಕೆ ಇದು ಒಂದು ಗುರುತಾಗಲಿ. ನಾವು ಯಾವಾಗ ಹೇಳಿದರೂ ಮಾಡುತ್ತೇವೆ ಎನ್ನುವುದರಲ್ಲಿ ಇದೆಯೋ ಹೊರತು ಮಿರಾಸೆ ವಿಚಾರದಲ್ಲಿ ಸರ್ಕಾರದವರು ಮಾತುಕೊಟ್ಟ ಮೇಲೆ ಎಷ್ಟೋ ಕೆಲಸಗಳಾಗಿವೆ, ಆದರೆ ಇದು ಮಾತ್ರ ಆಗಿಲ್ಲ; ಇದು ಬಹಳ ಅನ್ಯಾಯ.

ಜಮೀನು ವಿಷಯದಲ್ಲಿ ಒಂದೇ ಒಂದು ಮಾತು ಹೇಳುತ್ತೇನೆ. ಅನೇಕ ಕಡೆಗಳಲ್ಲಿ ಗೋಮಾಳ ಇಲ್ಲವೆಂದು ಹೇಳುತ್ತಾರೆ. ಒಂದೊಂದು ಗ್ರಾಮಕ್ಕೆ 10-15 ಎಕರೆ ಗೋಮಾಳ ಇರಬೇಕಾದರೆ ಪಕ್ಕದಲ್ಲಿ ಅರಣ್ಯ (forest) ಇರುತ್ತದೆ. ಅಕ್ಕಪಕ್ಕದ ಗ್ರಾಮಗಳ ಗೋಮಾಳವಿರುತ್ತದೆ. ಅದರಲ್ಲಿ ದನಗಳನ್ನು ಅಲ್ಲಿ ಮೇಯಿಸುತ್ತಾರೆ. ನೂರಾರು ಎಕರೆಗಳ ಗೋಮಾಳವಿರತಕ್ಕ ಗ್ರಾಮಗಳೂ ಇರುತ್ತವೆ. ದನಗಳನ್ನೆಲ್ಲ ಕಾಡಿನಲ್ಲಿ ಮೇಯಿಸಿಕೊಂಡು ಸುಮ್ಮನೆ ಗೋಮಾಳವನ್ನು ಇಟ್ಟುಕೊಂಡಿರುತ್ತಾರೆ. ಇಂತಹ ನಿದರ್ಶನಗಳು ಅನೇಕವಿವೆ. 10 ಎಕರೆ ಗೋಮಾಳ ಎನ್ನುವುದಕ್ಕೆ ಬದಲಾಗಿ ಅದಷ್ಟು ಇದನ್ನು ಕಡಿಮೆಮಾಡಿ, ಗ್ರಾಮದ ಪಕ್ಕದಲ್ಲಿರುವ ಕಾಡಿನಲ್ಲಿ ದನಗಳನ್ನು ಮೇಯಿಸಿಕೊಳ್ಳುವಂತೆ ಮಾಡಿದರೆ ಎಷ್ಟೋ ಅನುಕೂಲವಾಗುತ್ತದೆ. ಚಿಂತಾಮಣಿ ಟೌನ್‌ಗೆ ಸೇರಿದ ಮಾಳಪ್ಪಳ್ಳಿ ಎಂಬ ಗ್ರಾಮವಿದೆ. ಈ ಗ್ರಾಮದಲ್ಲಿ 1951ರಲ್ಲಿ 9 ಜನರಿಗೆ ಒಬ್ಬೊಬ್ಬರಿಗೆ ಎರಡೆರಡು ಎಕರೆಯಂತೆ ಡೆಪ್ಯುಟಿ ಕಮಿಷನರು ವಿಲೇಮಾಡಿದರು. ಟೌನಿಗೆ ಗೋಮಾಳಬೇಕಾಗಿಲ್ಲವೆಂದು ಈ- ರೀ ಕೊಟ್ಟರು. ಇದಕ್ಕೆ ಸಾಗುವಳಿ ಚೀಟಿ ಸಹ ಕೊಟ್ಟು ಎರಡು ವರ್ಷಗಳ ಕಾಲ ವ್ಯವಸಾಯ ಮಾಡಿದರು. ಅನಂತರ ಕೆಲವು ಮುಖಂಡರು, ರೆವೆನ್ಯೂ ಕಮಿಷನರ್‌ರವರಲ್ಲಿ ಅಪೀಲುಮಾಡಿ ಅದನ್ನು ವಜಾಮಾಡಿಸಿದ್ದಾರೆ. ಈಗ ಆ ಜನರು ಗ್ರಾಮ ಬಿಟ್ಟುಹೋಗುವುದಕ್ಕೂ ಇಲ್ಲ ಅಲ್ಲಿಯೇ ಇರುವುದಕ್ಕೂ ಇಲ್ಲ ಹೀಗೆ ತೊಂದರೆಯಾಗಿದೆ. ನಾನಾಗಲೇ ಹೇಳಿದಂತೆ ಟೌನ್‌ಗಳಿಗೆ ಗೋಮಾಳ ಬೇಕಾಗಿಲ್ಲ. ಯಾಕೆಂದರೆ ಅಲ್ಲಿ ದನಗಳು ಹೆಚ್ಚಾಗಿ ಇರುವುದಿಲ್ಲ. ಆದರೂ ಅನ್ಯಾಯ ಮಾಡಿದ್ದಾರೆ. ಈ ವಿಚಾರದಲ್ಲಿ ಒಂದು ಅರ್ಜಿಯನ್ನೂ ಸಹ ಕೊಡಿಸಿದ್ದೆ. ಅರ್ಜಿಯನ್ನು ಕೊಟ್ಟಿದ್ದರೂ ಅದನ್ನು ಏನು ಮಾಡಿದರೋ, ಅದು ಏನಾಯಿತೋ ಗೊತ್ತಿಲ್ಲ. ಇಂಥ ನಿದರ್ಶನಗಳು ಅನೇಕವಿವೆ. ಈ ವಿಚಾರದಲ್ಲಿ ಸರಿಯಾದ ಪರಿಶೀಲನೆಮಾಡಬೇಕು ಎಂದು ಹೇಳುತ್ತೇನೆ.

ಪೊಲಿಟಿಕಲ್ ಸಫರರ್ಸ್‌ಗೆ ಜಮೀನು ಕೊಡುತ್ತಿದ್ದಾರೆ. ಇದರಲ್ಲಿ ಸರಿಯಾದ ನೀತಿಯನ್ನನುಸರಿಸುತ್ತಿಲ್ಲ. ಉದಾಹರಣೆಗೆ ಶ್ರೀನಿವಾಸಪುರದ ತಾಲ್ಲೂಕು ಚಲ್ದಿಗಾನ ಹಳ್ಳಿಯಲ್ಲಿ ಜಮೀನು ಇಲ್ಲದೇ ಇರುವವರು ಅನೇಕರು ಜಮೀನಿಗಾಗಿ ಅಲೆಯುತ್ತಿದ್ದಾರೆ. ಆದರೆ 100 ಎಕರೆ, 200 ಎಕರೆ ಜಮೀನು ಹೊಂದಿರುವ (ಪೊಲಿಟಿಕಲ್ ಸಫರರ್ಸ್) ರಾಜಕೀಯದಲ್ಲಿ ನೊಂದಿರುವವರಿಗೆ ಜಮೀನು ವಿಲೇವಾರಿಯಾಗಿದೆ ಎಂದು ತಿಳಿದಿದ್ದೇನೆ. ರಾಜಕೀಯದಲ್ಲಿ ನೊಂದವರು ಎಂದರೆ ಬಡವರೂ ಮತ್ತು ಜಮೀನಿಲ್ಲದವರೂ ಆಗಿದ್ದರೆ ಅಂಥವರಿಗೆ ಕೊಡುವುದು ನ್ಯಾಯವೂ, ಧರ್ಮವೂ ಆಗಿದೆ. ಆದರೆ ಜಮೀನಿಲ್ಲದಿರುವವರು ಜಮೀನು ಕೊಡಿ ಎಂದು ಅಲೆಯುತ್ತಿದ್ದರೂ ಸಹ ಜಮೀನು ಹೊಂದಿರುವವರಿಗೇ ಕೊಡುತ್ತಿದ್ದಾರೆಂಬ ದೂರು ಬಂದಿದೆ.

ಅಧ್ಯಕ್ಷರು.—ಜಮೀನು ಇಲ್ಲದವರಿಗೆ ಮಾತ್ರ ಕೊಡಬೇಕೆಂದು ಆರ್ಡರಾಗಿದೆ.

ಶ್ರೀ ಜೆ. ನಾರಾಯಣಪ್ಪ.—ನಮ್ಮ ಊರಿನ ಹತ್ತಿರ ಬಂದಾರ್ಲಹಳ್ಳಿ ಗ್ರಾಮವಿದೆ. ಅಲ್ಲಿ ಜಮೀನು ಹರಿಜನರಿಗೆ ವಿಲೇವಾರಿಯಾಗಿದ್ದು ಅನಂತರ ಸರ್ಕಾರದ ಆಜ್ಞೆಯಾಗಿ ವಜಾ ಆಯಿತು. ಇಂಥ ಜಮೀನಿಗೆ ಈಗ ಇಬ್ಬರು ಅರ್ಜಿಹಾಕಿದ್ದಾರೆ. ಈ ಸರ್ವೆ ನಂಬರು 22ರಲ್ಲಿ 86 ಎಕರೆ, 24 ಗುಂಟೆ ಜಮೀನಿದೆ. ಈ ಜಮೀನಿನ ನೀರು ಕುರುಬೂರ್ ಅಮಾನಿಕೆರೆಗೆ ಹೋಗುತ್ತದೆ. ಹರಿಜನರ ವಿಚಾರದಲ್ಲಿ ಈ ಜಮೀನನ್ನು ಕೊಡಕೂಡದೆಂದು ಮಾಡಿದ್ದರು. ಆದರೆ ರಾಜಕೀಯದಲ್ಲಿ ನೊಂದವರಿಗೆ (political sufferers) ಒಬ್ಬೊಬ್ಬ

(ಶ್ರೀ ಜಿ. ನಾರಾಯಣಪ್ಪ.)

ರಿಗೆ 20 ಎಕರೆ, 15 ಎಕರೆ ಹೀಗೆ ಕೊಡಬೇಕೆಂದು ಶಿಫಾರಸುಮಾಡಿದ್ದಾರೆಂದು ನನಗೆ ತಿಳಿದು ಬಂದಿದೆ. ನನಗೆ ಹೆಚ್ಚು ಕಾಲವಿಲ್ಲ. ಇಂಥ ವಿಚಾರಗಳಲ್ಲಿ ಸರ್ಕಾರದವರು ಸರಿಯಾಗಿ ಪರ್ಯಾಲೋಚನೆಮಾಡಿ ಬಡವರಿಗೆ ಜಮೀನು ಸಲ್ಲುವಂತೆ ಮಾಡಬೇಕು. Political sufferers ಎಂದರೆ ಸ್ವಾತಂತ್ರ್ಯ ಬಂದಿರುವಾಗ ಒಬ್ಬೊಬ್ಬರೂ ಬಟ್ಟೆ ಹಾಕಿಕೊಂಡು ಹೆಚ್ಚಿಗೆ ತಿರುಗಾಡುವವರು ಮಾತ್ರ political sufferers ಅಲ್ಲ. ನಮಗೆಲ್ಲ ಓಟು ಕೊಟ್ಟು ನಮ್ಮನ್ನು ಮುಂದೆ ತಂದಿರುವವರು political sufferers. ಬಡವರೂ ನಮಗೆ ಸಹಾಯ ಮಾಡಿದವರೂ, ಹರಿಜನರೂ, ಸ್ವಾತಂತ್ರ್ಯ ಬಂದೀತು, ಅವಾಗ ನಮಗೆಲ್ಲ ಅನುಕೂಲವಾಗುತ್ತದೆಂದು ಭಾವಿಸಿದ್ದರು. ಆದುದರಿಂದ ಬಡವರಿಗೂ, ಜಮೀನಿಲ್ಲದವರಿಗೂ ಸಹಾಯಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಈ ಖೋತಾ ನಿರ್ಣಯದಲ್ಲಿ ಮುಖ್ಯವಾಗಿ ನಮ್ಮ ಮೈಸೂರು ದೇಶದಲ್ಲಿ ಗ್ರಾಮ ನೌಕರರ ವಿಷಯದಲ್ಲಿ ನಮ್ಮ ಸರ್ಕಾರ ಯಾವ ರೀತಿ ನಡೆಯುತ್ತಿದೆ, ಗ್ರಾಮ ನೌಕರರ ವಿಷಯದಲ್ಲಿ ಯಾವ ವಿಷಯದಲ್ಲಿ ಯಾವ ರೀತಿ ನಮ್ಮ ಸರ್ಕಾರದ ಆಡಳಿತ ನಡೆಯುತ್ತಿದೆ ಎಂಬ ವಿಚಾರವಾಗಿ ಕೆಲವು ಅಂಶಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಮುಖ್ಯವಾಗಿ ಗ್ರಾಮಗಳಲ್ಲಿ ಗ್ರಾಮ ನೌಕರರು, ಪಟೇಲ್ ಮತ್ತು ಶ್ಯಾನುಭೋಗರು ಬಹಳ ಹಿಂದಿನ ಕಾಲದಿಂದಲೂ, ಅನಾದಿ ಕಾಲದಿಂದಲೂ ಸರ್ಕಾರಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸುತ್ತಿದ್ದಾರೆಂಬುದು ನಿರ್ವಿವಾದವಾದ ಸಂಗತಿ. ಯಾಕೆಂದರೆ ಅವರುಗಳಿಲ್ಲದೆ ಯಾವ ಕೆಲಸವೂ ನಡೆಯುವಂತಿಲ್ಲ. ಒಂದು ಗ್ರಾಮದಲ್ಲಿ ಗ್ರಾಮಾಭಿವೃದ್ಧಿಯಾಗಲಿ, ಯಾವ ಕೆಲಸ ಕಾರ್ಯಗಳೇ ಆಗಲಿ ಆಗಬೇಕಾದರೆ ಇವರುಗಳು ಮುಖ್ಯವಾಗಿ ಇರಬೇಕು. ಈ ಗ್ರಾಮ ನೌಕರರುಗಳಿಗೆ ಕೊಡತಕ್ಕ ಪೋಟಗಿ ವಿಷಯ ಹೇಳಿದರೆ ಖಂಡಿತವಾಗಿಯೂ ನಾಚಿಕೆಯಾಗುತ್ತದೆ. ಈಗ ನಮ್ಮ ಸ್ನೇಹಿತರೊಬ್ಬರು ಏಳು ರೂಪಾಯಿಗಳ ಪೋಟಿಗಿ ಪಡೆದು ಕೆಲಸ ಮಾಡುತ್ತಿದ್ದಾರೆ. ಇದು ನಿಜವಾದ ಸಂಗತಿ. ಈ ರೀತಿ ಐದು ರೂಪಾಯಿ, ಏಳು ರೂಪಾಯಿ, ಹತ್ತು ರೂಪಾಯಿ ಹೀಗೆ ಪೋಟಿಗಿಯನ್ನು ಪಡೆದು ಪಟೇಲರು ಮತ್ತು ಶ್ಯಾನುಭೋಗರು ಕೆಲಸ ಮಾಡುತ್ತಾ ಹೋದರೆ ಖಂಡಿತವಾಗಿಯೂ ಅವರಿಗೆ ಗೌರವವಿರುವುದಿಲ್ಲ, ಒಂದು ಸುಖವಿರುವುದಿಲ್ಲ. ಆದುದರಿಂದಲೇ ಅಧಿಕಾರಿಗಳು ಇವರನ್ನು ತುಚ್ಛವಾಗಿ ಕಾಣುತ್ತಾರೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಸರ್ಕಾರ ಬಂದ ಮೇಲೂ ಕೂಡ ಗ್ರಾಮಾಧಿಕಾರಿಗಳ ವಿಷಯದಲ್ಲಿ ಬಹಳ ತುಚ್ಛವಾಗಿ ಕಾಣುತ್ತಾರೆ. ಆದುದರಿಂದ ಇದೆಲ್ಲ ತಪ್ಪಬೇಕು. ಇದಾಗಬೇಕಾದರೆ ಪಟೇಲ್ ಮತ್ತು ಶ್ಯಾನುಭೋಗರನ್ನು ವಜಾಮಾಡಿ, ಇಲ್ಲವೇ ಅವರಿಗೆ ಸರಿಯಾದ ಸಂಬಳ ಕೊಡಿ. ಇವರನ್ನು ವಜಾ ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಿದ್ದೀರೇ ಹೊರತು ಇದ ವರೆಗೂ ಆ ರೀತಿ ಮಾಡುವುದಕ್ಕೆ ಆಗಿಲ್ಲ. ಇವರನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಆಗಿಲ್ಲ. ಅವರುಗಳು ಚುನಾವಣೆಗಳಿಗೆ ನಿಲ್ಲಬೇಕು ಎಂದರೆ ಅದಕ್ಕೆ ಅವಕಾಶ ಇಲ್ಲ. ಆತನು ಈ ಸಂಬಂಧದಲ್ಲಿ ಸರ್ಕಾರಿ ನೌಕರನೆಂದೇ ಪರಿಗಣಿಸಲ್ಪಡುತ್ತಾನೆ. ಆದರೆ ಇವರಿಗೆ ದೊರೆಯುತ್ತಿರುವ ಪ್ರತಿಫಲ ಅತ್ಯಲ್ಪ. ಆದುದರಿಂದ ಪಟೇಲ್ ಶ್ಯಾನುಭೋಗರುಗಳಿಗೆ ಸರಿಯಾದ ಸಂಬಳ ಕೊಟ್ಟು ಅವರನ್ನು ನೇಮಕ ಮಾಡಬೇಕು ಮತ್ತು ಅವರ ಸ್ಥಿತಿಯನ್ನು ಉತ್ತಮ ಪಡಿಸಬೇಕು. ಸಾಧ್ಯವಾದ ಕಡೆಗಳಲ್ಲೆಲ್ಲ ಸಂಬಳದ ಮೇಲೆ ಪಟೇಲ್ ಮತ್ತು ಶ್ಯಾನುಭೋಗರ ಸ್ಥಾನಗಳಿಗೆ ಅರ್ಹರಾದವರನ್ನು ನೇಮಿಸಬೇಕು. ಈ ರೀತಿ ಮಾಡದೆ ಹೋದರೆ ನಾವು ಯಾವ ಉದ್ದೇಶ ಸಾಧನೆ ಮಾಡಬೇಕು ಎಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಯೋ ಅದನ್ನು ಖಂಡಿತವಾಗಿಯೂ ಸಾಧನೆ ಮಾಡಿದಂತಾಗುವುದಿಲ್ಲ.

ಮುಖ್ಯವಾಗಿ ಅರ್ಜಿಗಳ ವಿಲೇವಾರಿಯ ವಿಷಯದಲ್ಲಿ ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಒಬ್ಬ ರಾಯನ ಕಾಲದ ಪದ್ಧತಿಯೇ ನಡೆದುಕೊಂಡು ಬರುತ್ತಿದೆ. ಇದು ತಪ್ಪಬೇಕು. ಇಲ್ಲದೆ ಇದ್ದರೆ ನಾವು ಯಾವ ಜನತೆಯ ಪರವಾಗಿ ಇಲ್ಲಿಗೆ ಬಂದಿದ್ದೇವೆಯೋ, ಜನತೆಗೆ ಯಾವ ಭರವಸೆಯನ್ನು ಕೊಟ್ಟಿದ್ದೇವೆಯೋ ಅದು ಖಂಡಿತವಾಗಿಯೂ ಸಾರ್ಥಕವಾಗುವುದಿಲ್ಲ. ಬಡವನಿಗೆ ಅವನು ಕೊಟ್ಟ ಅರ್ಜಿಗೆ ಜವಾಬು ಕೊಟ್ಟು ಅದನ್ನು ಎರಡು ತಿಂಗಳೊಳಗಾಗಿ ಫೈಸಲ್ಮಾಡಿದಲ್ಲಿ ರೈತನಿಗೆ ಎಷ್ಟೋ ಸಹಾಯವಾಗುತ್ತದೆ. ಇದು ನಿಮಿಷಗಳ ಕೆಲಸ. ಅದಕ್ಕೆ ಸುಮಾರು ಮೂರು ನಾಲ್ಕು ತಿಂಗಳು ತಾಲ್ಲೂಕು ಆಫೀಸಿಗೆ ಸುತ್ತಬೇಕು. ಈ ರೀತಿ ಮಾಡದೆ ಇದ್ದರೆ ನಾವು ಯಾವ ಉದ್ದೇಶಕ್ಕಾಗಿ ಸ್ವರಾಜ್ಯವನ್ನು ಸಂಪಾದನೆ ಮಾಡಿದ್ದೇವೆಯೋ ಅದು ಖಂಡಿತವಾಗಿಯೂ ಸಫಲವಾಗುವುದಿಲ್ಲ. ಈ ಪದ್ಧತಿಯನ್ನು ಮಾರ್ಪಾಟುಮಾಡಬೇಕು.

ಈಗ ಮುಖ್ಯವಾಗಿ ಎಲ್ಲ ಕಾರ್ಯಗಳಿಗೂ ರೆವೆನ್ಯೂ ಇಲಾಖೆ ಇದೆ. ಯಾವ ಕೆಲಸವನ್ನೂ ರೆವೆನ್ಯೂ ಇಲಾಖೆಗೆ ವಹಿಸುತ್ತಾರೆ. ಅವರಿಗೆ ಏನೇನು ಸೌಕರ್ಯ ಕೊಟ್ಟಿದ್ದೀರಿ ! ಯಾವ ಅನುಕೂಲಮಾಡಿದ್ದೀರಿ ! ಒಬ್ಬ ತಾಲ್ಲೂಕು ಅಮಲ್ದಾರ್‌ಅವರಿಗೆ ಸುಮಾರು 300–400 ಗ್ರಾಮಗಳಿವೆ. ಈ ಗ್ರಾಮಗಳನ್ನೆಲ್ಲ ಸಂಚರಿಸಿ ಬಡವರ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ಅವರಿಗೆ ವಾಹನ ಸೌಕರ್ಯವಿಲ್ಲ. ಕಡೇ ಪಕ್ಷ ಶ್ರೀ ಚಂದ್ರಶೇಖರಯ್ಯನವರು ಹೇಳಿದ ಹಾಗೆ ಪ್ರತಿಯೊಬ್ಬ ಅಮಲ್ದಾರರಿಗೂ ಒಂದೊಂದು 'ಜೀಪ್' ಕೊಟ್ಟರೆ ಕೆಲಸಕಾರ್ಯಗಳು ತೀವ್ರವಾಗಿ ಆಗುವುದಕ್ಕೆ ಅವಕಾಶವಾಗುತ್ತದೆ. ಇದಕ್ಕೆ ಲಕ್ಷಾಂತರ ರೂಪಾಯಿಗಳು ಖರ್ಚಾಗಬಹುದು. ಆದರೆ ಸರಿಯಾದ ಕಾರ್ಯಕ್ಕೆ ಖರ್ಚು ಮಾಡುವುದಕ್ಕೆ ಹಿಂದೆ ಹೋಗಬಾರದು. ಕೆಲವು ಬಾಬುಗಳಿಗೆ ಬೇಕಾದಷ್ಟು ಖರ್ಚುಮಾಡುತ್ತ ಇರುವುದು ತಮಗೆಲ್ಲ ಗೊತ್ತಿದೆ. ಒಬ್ಬ ಅಮಲ್ದಾರರಿಗೆ ಒಂದು ಜೀಪ್ ಕೊಟ್ಟರೆ ಅದಕ್ಕೆ ಹಣ ಖರ್ಚಾಗುತ್ತದೆ, ಆದರೆ ರೈತನಿಗೆ ಇದರಿಂದ ಅನುಕೂಲವಾಗುವುದೇ ಸಾಕ್ಷಿಯಾಗಿರುವುದರಿಂದ ಈ ವಿಷಯವನ್ನು ಬಹಳ ಚೆನ್ನಾಗಿ ಯೋಚನೆಮಾಡಬೇಕು.

ಜಮೀನು ವಿಲೇವಾರಿ ಮಾಡುವಾಗ ಜಮೀನಿಲ್ಲದವರಿಗೆ ಕೊಡಬೇಕು ಎಂದಿದೆ. ಯಾರೇ ಆಗಲಿ, ಜಾತಿ ಮತಗಳ ಭೇದವಿಲ್ಲದೆ ಕೊಡಬೇಕು. ಜಮೀನು ಇಲ್ಲದೆ ಇರುವವರು ಜಮೀನು ಕೊಡಿ ಎಂದು ಎಂಟು ವರ್ಷಗಳಿಂದ ಪ್ರಯತ್ನ ಮಾಡಿದರೂ ಸಾಧ್ಯವಾಗದೆ ಇದ್ದರೆ ಅದಕ್ಕೆ ಏನು ಹೇಳಬೇಕು ? ಹೇಗಾದರೂ ಮಾಡಿ ಇಂಥ ಜನರಿಗೆ ಜಮೀನು ಕೊಟ್ಟು ಉದ್ಧಾರಮಾಡಬೇಕು. ಅನೇಕ ಜನರಿಗೆ ಒಂದು ಎಕರೆ ಜಮೀನೂ ಇಲ್ಲ. ಒಂದು ಸಂಸಾರಕ್ಕೇ ಕಡೆಯ ಪಕ್ಷ ನಾಲ್ಕು ಎಕರೆ ಜಮೀನಾದರೂ ಕೊಡಿ ಎಂದರೆ ಸರ್ಕಾರದವರಿಗೆ ಕೊಡುವುದಕ್ಕೆ ದಕ್ಷತೆ ಮತ್ತು ಶಕ್ತಿ ಇಲ್ಲದೆ ಇದ್ದ

ಮೇಲೆ ನಾವು ಯಾಕೆ ಇಲ್ಲಿ ಸದಸ್ಯರಾಗಿರಬೇಕು ? ಹೊಟ್ಟೆ ತುಂಬ ಅನ್ನ ಮೈ ತುಂಬ ಬಟ್ಟೆ ಕೊಡಬೇಕೇ ಹೊರತು ಬರೀ ಮಾತಿನಿಂದ ಪ್ರಯೋಜನವಾಗುವುದಿಲ್ಲ. ಮುಖ್ಯವಾಗಿ ಹೇಳಬೇಕೆಂದರೆ ಗ್ರಾಮಗಳ ವಿಷಯದಲ್ಲಿ ನಮ್ಮ ಸರ್ಕಾರದವರು ಎಷ್ಟು ಮಟ್ಟಿನ ನಿಗಾ ತೆಗೆದುಕೊಳ್ಳಬೇಕೋ ಅಷ್ಟನ್ನು ತೆಗೆದುಕೊಳ್ಳುತ್ತಿಲ್ಲ. ಅವರು ಎಷ್ಟೋ ಕೆಲಸಗಳನ್ನು ಮಾಡಿದ್ದಾರೆ. ಆದರೆ ಮಾಡಬೇಕಾದ ಕೆಲಸ ಇನ್ನೂ ಬಹಳವಿದೆ. ಅದಕ್ಕೋಸ್ಕರ ಗ್ರಾಮಾಂತರ ರೈತರ ವಿಷಯದಲ್ಲಿ ಇನ್ನೂ ಹೆಚ್ಚು ನಿಗಾ ತೆಗದುಕೊಳ್ಳಬೇಕೆಂದು ಹೇಳುತ್ತೇನೆ.

ಬೆಂಗಳೂರು, ಮೈಸೂರು ಇಂಥ ಪಟ್ಟಣಗಳಲ್ಲಿ ನೀರಿನ ಸೌಕರ್ಯ ಮಾಡಬೇಕಾಗಿದ್ದರೆ ಎಷ್ಟೋ ಹಣ ಖರ್ಚು ಮಾಡುತ್ತೀರಿ. ಅದೇ ಗ್ರಾಮಗಳಲ್ಲಿ ಒಂದು ಬಾವಿ ಕೇಳಿದರೆ ಕೊಡುತ್ತಿಲ್ಲ. ಪಟ್ಟಣಗಳಲ್ಲಿ ಮನೆ ಮನೆಗೂ ನಲ್ಲಿಗಳು ಇರುತ್ತವೆ, ಹಳ್ಳಿಗಳಲ್ಲಿ ಒಂದು, ಎರಡು, ಮೂರು ಫರ್ಲಾಂಗುಗಳ ದೂರದಿಂದ ನೀರು ತರಬೇಕು. ಇದು ಬಹಳ ಕಷ್ಟವಾಗಿದೆ. ಇದನ್ನೆಲ್ಲ ಸರಿಪಡಿಸಬೇಕು.

Ex-servicemen ಎಂದು ಜಮೀನು ಕೊಡುತ್ತಾರೆ. ಅವರು ಎಲ್ಲೋ ಇರುತ್ತಾರೆ. ಜಮೀನನ್ನು ಮಾಡುವವರು ಯಾರೋ ಇರುತ್ತಾರೆ. ದೊಡ್ಡ ದೊಡ್ಡವರು ಈ ಜಮೀನುಗಳ ಬೆಳೆಯನ್ನು ತಿನ್ನುತ್ತಾರೆ. ನಾನು ಯಾಕೆ ಇದನ್ನು ಹೇಳುತ್ತಿದ್ದೇನೆಂದರೆ ನಮ್ಮ ತಾಲ್ಲೂಕಿನಲ್ಲಿ ಕೃಷ್ಣರಾಜಪುರ ಪ್ಲಾಂಟೇಷನ್ ಇದೆ. ಸುಮಾರು ಹತ್ತು ವರ್ಷಗಳಿಂದಲೂ ಬಡ ಜನರಿಗೆ ಈ ಪ್ಲಾಂಟೇಷನ್‌ನಲ್ಲಿ ಜಮೀನು ಕೊಡಿ ಎಂದು ಕೇಳುತ್ತಿದ್ದರೆ ಅದು ಅವರ ಕಿವಿಗೇ ಬೀಳಲಿಲ್ಲ. ಆದರೆ ಯಾರೋ ಒಬ್ಬರಿಗೆ ಭಾರಿ ಕೈಗಾರಿಕೆ ಸ್ಥಾಪನೆ ಮಾಡಬೇಕು ಎಂದು ಕೊಟ್ಟಿದ್ದಾರೆ. ಅಲ್ಲಿ ಕೈಗಾರಿಕೆಯೂ ಇಲ್ಲ, ಏನೂ ಇಲ್ಲ, ಯಾರೋ ಒಬ್ಬರು ಆ ಜಮೀನನ್ನು ಸಾಗುವಳಿ ಮಾಡಿಕೊಂಡು ಸುಖವಾಗಿ ತಿನ್ನುತ್ತಿದ್ದಾರೆ. ಬಡ ಜನರಿಗೆ ಒಂದು ಎಕರೆ ಜಮೀನು ಕೊಡುವುದಕ್ಕಾಗಲಿಲ್ಲ. ಯಾಕೆ ಕೊಡಲಿಲ್ಲ ! ಇಂಥ ಸರ್ಕಾರ ಯಾಕೆ ಇರಬೇಕು ? ಅಸೆಂಬ್ಲಿ ಸೇರುವುದಕ್ಕೆ ಮಾತ್ರವೇ ಸರ್ಕಾರ ಇರುವಂತೆ ತೋರುತ್ತದೆ. ಬಡ ಜನರಿಗೆ ಯಾವ ರೀತಿ ಅನುಕೂಲ ಮಾಡಿಕೊಡಬೇಕು, ಯಾವ ರೀತಿ ಸಹಾಯಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಅದಕ್ಕೋಸ್ಕರ ನಾನು ತಮ್ಮನ್ನು ಪ್ರಾರ್ಥನೆ ಮಾಡುವುದು ಏನೆಂದರೆ ಇನ್ನು ಮುಂದೆ ಯಾದರೂ ಕೂಡ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿರುವ ಬಡಜನರ ಸ್ಥಿತಿಗತಿಗಳೇನು, ಯಾವ ರೀತಿ ಇದೆ, ಅವರನ್ನು ಉತ್ತಮ ಮಟ್ಟಕ್ಕೆ ತರುವುದಕ್ಕೆ ಏನು ಕೆಲಸ ಮಾಡಬೇಕು ಎಂದು ಒಂದು plan ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಗ್ರಾಮಗಳ ಅಭಿವೃದ್ಧಿಯನ್ನು ಮಾಡಲು ಒಂದು plan ಹಾಕಿಕೊಂಡು ಕಾರ್ಯಕ್ರಮ ಮಾಡುತ್ತ ಹೋದರೆ ಸ್ವರಾಜ್ಯವನ್ನು ಸ್ಥಾಪನೆ ಮಾಡಿ ಬಡಜನರಿಗೆ ಅನುಕೂಲಮಾಡುತ್ತೇವೆಂದು ಏನು ಯೋಚನೆಮಾಡಿದ್ದೇವೋ ಅದು ಸಫಲವಾಗುತ್ತದೆ. ಇಲ್ಲದೆ ಹೋದರೆ ಏನೂ ಸಾರ್ಥಕವಾಗುವುದಿಲ್ಲ.

ತಾಲ್ಲೂಕುಗಳಲ್ಲಿ ಜಮಾಬಂದಿ ವಿಚಾರವಾಗಿ ಒಂದೆರಡು ಮಾತು ಹೇಳಿ ನನ್ನ ಭಾಷಣವನ್ನು ನಿಲ್ಲಿಸುತ್ತೇನೆ. ಪಟೇಲ್ ಮತ್ತು ಶ್ಯಾನುಭೋಗರುಗಳಿಗೆ ತಾಲ್ಲೂಕು ಆಫೀಸಿನಿಂದ ಇಂಥ ದಿನ ಇಷ್ಟು ಘಂಟೆಗೆ ಇಂಥ ಕಡೆ ಜಮಾಬಂದಿ ಇಟ್ಟುಕೊಳ್ಳುತ್ತೇವೆ ಎಂದು ತಿಳಿಸುತ್ತಾರೆ. ಇಂಥ ತಾರೀಖು ಸಾಯಂಕಾಲ ನಾಲ್ಕು ಘಂಟೆಗೆ ಜಮಾಬಂದಿ ಇದೆ ಎಂದು ತಿಳಿಸುತ್ತಾರೆ. ಪಟೇಲ್, ಶ್ಯಾನುಭೋಗರುಗಳು ಅಮಲ್ದಾರರಿಗಾಗಿ ಕಾದುಕುಳಿತಿರುತ್ತಾರೆ. ರಾತ್ರಿ 12 ಘಂಟೆಯಾದರೂ ಬರುವುದಿಲ್ಲ. ಆಗ ಬಂದು ಈಗ ನಿದ್ದೆ ಹೊತ್ತಾಗಿರುವುದರಿಂದ ನಾಳೆ ಬೆಳಿಗ್ಗೆ ಜಮಾಬಂದಿ ಮಾಡುತ್ತೇನೆಂದು ಹೇಳಿಬಿಡುತ್ತಾರೆ. ಅಷ್ಟು ಹೊತ್ತಿನಲ್ಲಿ ರಾತ್ರಿ ಅವೇಳೆಯಲ್ಲಿ ಪಟೇಲರು ಶ್ಯಾನುಭೋಗರು ತಮ್ಮ ಗ್ರಾಮಗಳಿಗೆ ವಾಪಸು ಹೋಗಬೇಕಾದರೆ 10—12 ಮೈಲಿಗಳ ದೂರ ಪ್ರಯಾಣ ಮಾಡುವುದಕ್ಕೆ ಬಹಳ ಕಷ್ಟಸಾಧ್ಯವಾದ ಕೆಲಸ. ಇಂಥದನ್ನೆಲ್ಲ ಸರಿಪಡಿಸಬೇಕು. ಒಂದು ಕಡೆ ಜಮಾಬಂದಿ ಮಾಡುತ್ತೇವೆ, ಇಷ್ಟು ಹೊತ್ತಿಗೆ ಮಾಡುತ್ತೇವೆಂದು ತಿಳಿಸಿದರೆ, ಕಾಲಕ್ಕೆ ಸರಿಯಾಗಿ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಕೆಲಸ ಮಾಡುವಂತೆ ಸರ್ಕಾರದವರು ಸರಿಯಾಗಿ ರೂಲ್ಸ್ ಮಾಡಬೇಕು. ಅದುಬಿಟ್ಟು ಜಮಾಬಂದಿ ಇಂದು ಇಲ್ಲ, ನಾಳೆ ಬನ್ನಿ ಎಂದು ಹೇಳುವಂತಾಗಬಾರದು. ಇದೆಲ್ಲ ಹೋಗಬೇಕು ಎಂದು ತಿಳಿಸುತ್ತೇನೆ.

12 NOON.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಈಗ ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿ ಮಾಡುವುದೇನೆಂದರೆ ತೋಟಿ ತಳವಾರರ ಪ್ರಶ್ನೆ ಬಹಳ ಮುಖ್ಯವಾದುದು, ಮಾನ್ಯ ಸದಸ್ಯರು ತುಂಬ ವ್ಯಸನವನ್ನು ಸೂಚಿಸಿದ್ದಾರೆ. ಅವರಲ್ಲಿ ನನಗೆ ತುಂಬ ಗೌರವವಿದೆ. ಅವರು ಗ್ರಾಮ ರಕ್ಷಕರು. ಸರ್ಕಾರದವರು ಅವರಿಗೆ ತುಂಬ ಅನುಕೂಲ ಮಾಡಬೇಕು. ಏಕೆಂದರೆ ಈ ದಿವಸ ವೈಸರಾಯರೇ ಬರಲಿ, ರಾಜ ಮಹಾರಾಜರೇ ಬರಲಿ ನಮಗಾರಿಗೂ ಛಾನ್ಸ್ ಇಲ್ಲ, ಅವರಿಗೇ ಮೊದಲು ಪ್ರಾಶಸ್ತ್ಯ, ಕೈಯಲ್ಲಿ ದೊಣ್ಣೆ ಇಟ್ಟುಕೊಂಡಿರುತ್ತಾರೆ. ಹಳ್ಳಿಗಳಿಗೆ ಅಧ್ಯಕ್ಷರು, ಮಂತ್ರಿಗಳು ಮುಂತಾದವರು ಬರುತ್ತಾರೆಂದರೆ ಮೊದಲು ತೋಟಿ ತಳವಾರರು ಗೌರವ ನೀಡುತ್ತಾರೆ. ಅವರಿಗೆ ಮಂತ್ರಿಗಳು ಮುಂತಾದವರೂ ನಮಸ್ಕಾರ ಮಾಡುತ್ತಾರೆ. ತೋಟಿ ತಳವಾರರು ದೇವರಿದ್ದ ಹಾಗೆ. ಹಿಂದಿನ ಸಂಪ್ರದಾಯ ಅನುಸರಿಸುವುದು ಬೇಡ. ತೋಟಿ ತಳವಾರರೆಂಬ ಹೆಸರನ್ನು ಮಾತ್ರ ಬದಲಾಯಿಸಬೇಕು. ಕಮ್ಯಾಂಡರ್ ಎಂದು ಹೆಸರಿಡಿ. ಅವರಿಗೆ ಮಿಲಿಟರಿ ಉಡುಪು, ಕುದುರೆ ಕೊಡಿ, ಮಂತ್ರಿಗಳಿಗಿರುವ ಹಾಗೆ ಬೆಳ್ಳಿ ಕೋಲು ಕೊಡಿ. ಅದರಿಂದ ಸಂಪ್ರದಾಯ ಕಾಪಾಡಿದ ಹಾಗಾಗುತ್ತದೆ. ಹಾಗೆ ಮಾಡುತ್ತೀರೆಂದು ನಂಬಿದ್ದೇನೆ.

ಎರಡನೆಯದು ಬೆಂಗಳೂರು ಮತ್ತು ಇತರ ಡಿಸ್ಟ್ರಿಕ್ಟುಗಳಲ್ಲಿ ರಿಕಾರ್ಡು ನಿಧಾನವಾಗುತ್ತದೆಂಬುದಕ್ಕೆ ಕೆಲವು ಕಾರಣ ಕೊಟ್ಟಿದ್ದಾರೆ. ನಮ್ಮ ಬೆಂಗಳೂರು ಜಿಲ್ಲಾಧಿಕಾರಿಗಳ ದಕ್ಷತೆಯನ್ನು ಎಷ್ಟು ಹೊಗಳಿದರೂ ಸಾಲದು. ಉದಾಹರಣೆಗೆ ಬೆಂಗಳೂರು ನಗರಕ್ಕೆ ಇತ್ತೀಚೆಗೆ ಅನೇಕ ಪಾಶ್ಚಾತ್ಯ ದೇಶಗಳ ಗಣ್ಯ ವ್ಯಕ್ತಿಗಳು ಬಂದಾಗ, ಅದರಲ್ಲೂ ರಷ್ಯಾದ ನಾಯಕರು ಮತ್ತು ಇತರರು ಬಂದಾಗ, ತಮ್ಮ ಕೆಲಸದ ಜೊತೆಯಲ್ಲಿ ಪ್ರತಿಯೊಂದು ವಿಷಯದಲ್ಲೂ ಅವರು ಸಮರ್ಪಕವಾದ ಏರ್ಪಾಡು ಮಾಡಿರುವುದಕ್ಕಾಗಿ ಅವರಿಗೆ ಈ ಸಭೆ ಪರವಾಗಿ ಒಂದು ರಿವಾರ್ಡ್ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಪೊಲಿಟಿಕಲ್ ಸಫರರ್ಸ್ ವಿಚಾರವಾಗಿ ಒಂದು ಮಾತು. ದೇಶದಲ್ಲಿ ಯಾವ ವಿಧವಾದ ಜಾತಿ ಕುಲ ಎಂಬ ಮನೋಭಾವಕ್ಕೆ ಅವಕಾಶವಿಲ್ಲ. ದೇಶ ಸ್ವಾತಂತ್ರ್ಯಕ್ಕಾಗಿ ಪ್ರತಿಯೊಬ್ಬರೂ ಹೋರಾಟ ನಡೆಸಿದ್ದಾರೆ. ಅದರಲ್ಲೂ ಮುಖ್ಯವಾಗಿ ಪೋಲೀಸ್

(ಶ್ರೀ ಪಿ. ಆರ್. ನಾಯ್ಡು.)

ಕಾನ್‌ಸ್ಟೇಬಲ್ಲುಗಳು, ರಿಸರ್ವ್ ಪೋಲೀಸ್ ಮುಂತಾದವರು ಹೆಚ್ಚಿನ ಸಹಾಯಕರಾಗಿದ್ದರು; ಅವರೂ ಪೊಲಿಟಿಕಲ್ ಸಫರರ್ಸ್; ಅವರು ಒಂದು ತ್ಯಾಗ ಮನೋಭಾವದಿಂದ ದೇಶ ರಕ್ಷಣೆ ಮಾಡಿದ್ದಾರೆ. ಬ್ರಿಟಿಷರ ಆಳ್ವಿಕೆಯಲ್ಲಿ ಆತ್ಮ ಸಂರಕ್ಷಣೆಗೆ ಕೂಡ ಗಮನ ಕೊಡದೆ ಈ ದೇಶದ ಸ್ವಾತಂತ್ರ್ಯಕ್ಕಾಗಿ ಬಹಳ ಯೋಗ್ಯವಾದ ಕೆಲಸ ಮಾಡಿದ್ದಾರೆ. ಆದ್ದರಿಂದ ಜಮೀನು ಕೊಡುವಾಗ ಪೋಲೀಸು ಕಾನ್‌ಸ್ಟೇಬಲ್ಲುಗಳು, ರಿಸರ್ವ್ ಪೋಲೀಸು ಮತ್ತು ದಫೇದಾರರಿಗೆ ಅಪ್ಲಿಕೇಷನ್ ಇಲ್ಲದೆ ಅರ್ಜಿ ತರಿಸಿಕೊಂಡು ಎಲ್ಲಾದರೂ ಜಮೀನು ಕೊಡಬೇಕೆಂದು ಕೋರುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಸ್ವಾಮಿ, ರೆವೆನ್ಯೂ ಇಲಾಖೆಯಲ್ಲಿ ಲೋಪ ದೋಷಗಳೇ ಇಲ್ಲವೆಂದು ನಾನಾದರೂ ಹೇಳುವುದಿಲ್ಲ; ಲೋಪದೋಷಗಳಿವೆ. ಈಗ ಒಂದು ಗಂಟೆಯಲ್ಲಿ ನಾವೇನು ಮಾಡಿದ್ದೇವೆಂದರೆ, ಅನೇಕ ವರ್ಷಗಳಿಂದ ಬಂದಿರುವ ಲೋಪ ದೋಷಗಳನ್ನು ಭೂತಕನ್ನಡಿ ಹಾಕಿಕೊಂಡು ನೋಡಿದ್ದೇವೆ. ಇವು ಸರ್ಕಾರದ ಗಮನದಲ್ಲೂ ಇವೆ. ಅವನ್ನು ಸರಿಪಡಿಸಬೇಕು, ನ್ಯೂನ್ಯಾತಿರಿಕ್ತಗಳಿರಬಾರದು ಎಂಬ ತೀವ್ರಾಸಕ್ತಿ ಸರ್ಕಾರಕ್ಕೂ ಇದೆ. ಈ ಸಭೆಗಿರುವ ಹಾಗೆ ಅಷ್ಟೇ ಮಟ್ಟಿಗೆ ಇದನ್ನು ಸರಿಪಡಿಸಬೇಕೆಂದು ಒಂದು ಸಬ್‌ಕಮಿಟಿ ಕೂಡ ಏರ್ಪಾಡು ಮಾಡಿತ್ತು. ಆ ಸಮಿತಿಗೆ ರೆವೆನ್ಯೂ ಕಮೀಷನರು ಛೇರ್ಮನ್. ಚೀಫ್ ಸೆಕ್ರೆಟರಿ, ಬೆಂಗಳೂರು ಡೆಪ್ಯುಟಿ ಕಮೀಷನರು, ಹಾಸನದ ಡೆಪ್ಯುಟಿ ಕಮಿಷನರು, ಬೆಂಗಳೂರು ಸಬ್‌ಡಿವಿಜನ್ ಆಫೀಸರು, ರಾಮನಗರ ತಾಲ್ಲೂಕು ಅಮಲ್ದಾರರು ಮುಂತಾದವರನ್ನು ಮೆಂಬರುಗಳನ್ನಾಗಿಯೂ, ರೆವೆನ್ಯೂ ಕಮೀಷನರ ಅಡೀಷನಲ್ ಅಸಿಸ್ಟೆಂಟರನ್ನು ಸೆಕ್ರೆಟರಿಯಾಗಿಯೂ ಆ ಸಮಿತಿಗೆ ನೇಮಕ ಮಾಡಿತ್ತು. ಆ ಸಮಿತಿ ವರದಿ ಬಂದು ಅದರ ಬಹುಭಾಗವನ್ನು ಜಾರಿಗೆ ಕೊಟ್ಟಿದೆ. ಇನ್ನು ಕೆಲವು ಭಾಗ ಪಬ್ಲಿಕ್ ಸರ್ವಿಸ್ ಕಮೀಷನರನ್ನು ಕೇಳಬೇಕಾಗಿರುವುದರಿಂದ ಅವರಿಗೆ ಹೇಳಿದೆ. ಇರುವ ನ್ಯೂನತೆಯನ್ನು ಪರಿಹಾರ ಮಾಡಬೇಕೆಂದು ನಮಗೆಲ್ಲಾ ತೀವ್ರಾಸಕ್ತಿಯಿದೆ, ಶ್ರದ್ಧೆಯಿದೆ, ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯವೂ ಇರಬೇಕಾಗಿಲ್ಲ; ಯಾವ ತಾತ್ಸಾರ ಕೂಡ ಸರ್ಕಾರಕ್ಕಿಲ್ಲ ಎಂದು ಪೂರ್ಣವಾಗಿ ಭರವಸೆ ಕೊಡುತ್ತೇನೆ.

ಈ ದಿವಸ ಚರ್ಚೆ ಆಗುತ್ತಿದ್ದಾಗ ಅರ್ಜಿಗಳ ವಿಲೇವಾರಿ, ಗ್ರಾಮಾಂತರ ಪ್ರದೇಶಗಳ ವಿಚಾರ, ಲ್ಯಾಂಡ್ ಪಾಲಿಸಿ, ತೋಟಿ ತಳವಾರರ ಸಂಬಳ ಸಾರಿಗೆ, ಪಟೇಲ ಶ್ಯಾನುಭೋಗರ ಕ್ವಾಲಿಫಿಕೇಷನ್, ಅಮಲ್ದಾರರು ಮತ್ತು ಡೆಪ್ಯುಟಿ ಕಮೀಷನರುಗಳಿಗೆ ಜೀಪುಗಳನ್ನು ಒದಗಿಸುವುದು ಹೀಗೆ ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಅದರಲ್ಲಿ ಅರ್ಜಿಗಳ ವಿಚಾರ ಮೊದಲು ತೆಗೆದುಕೊಳ್ಳೋಣ. ಈಗ ಅರ್ಜಿ ಬರುವುದಂತೂ ಬಹಳ ಜಾಸ್ತಿಯಾಗಿದೆ. ಅದರಲ್ಲೂ ತಾಲ್ಲೂಕು ಆಫೀಸುಗಳಲ್ಲಿ ಆ ಆಫೀಸಿನಲ್ಲಿ ಕೆಲಸ ಮಾಡುವವರೆಲ್ಲರೂ ಅದಕ್ಕೆ ಗಮನಕೊಟ್ಟರೂ ಸಾಲದು. ಮುಖ್ಯವಾದ ವಿಷಯ ಸಾರ್ವಜನಿಕರ ಗಮನಕ್ಕೆ ಬಂದಿಲ್ಲ. ಹಿಂದೆ ಫ್ರೋಸ್ಟರ್ ಫೆಸಿಲಿಟಿಯಿತ್ತು, ಹಣ ಖರ್ಚು ಮಾಡದೆ ಜವಾಬು ಕೊಡಬಹುದಾಗಿತ್ತು. ಈಗ ಸ್ಟಾಂಪ್ ಹಾಕಬೇಕು, ಅದಕ್ಕೆ ಹಣಬೇಕು. ಜವಾಬು ಬೇಕೆಂದು ಕೇಳುವವರು ಪೋಸ್ಟೇಜ್ ಕೊಡಬೇಕು ಎಂದು ಅನೇಕ ಸಲ ಹೇಳಿದೆ, ಈಗಲೂ ಹೇಳುತ್ತಿದ್ದೇನೆ. ಆ ಪದ್ಧತಿಯನ್ನು ಗಮನದಲ್ಲಿಟ್ಟು ಜಾರಿಗೆ ತಂದರೆ ಅನೇಕ ವಿಷಯದಲ್ಲಿ ಸರಿಹೋಗುತ್ತದೆಂದು ಅಂದುಕೊಂಡಿದ್ದೇನೆ.

ಎರಡನೆಯದಾಗಿ . ಸ್ಥಳದಲ್ಲೇ (on the spot) ಇತ್ಯರ್ಥ ಮಾಡಬೇಕೆಂದು ಹೇಳಿ ರೆವೆನ್ಯೂ ವಿಷಯಗಳ ಬಗ್ಗೆ ಅನೇಕ ಸಲ ಚರ್ಚೆಯಾಗಿದೆ. ಹಾಗೆ ಮಾಡುವುದು ಬಹಳ ಕಷ್ಟ. ಎಲ್ಲ ಸಂದರ್ಭಗಳಲ್ಲೂ on the spot ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ. ಅದೇ ಉದ್ದೇಶದಿಂದ ಜಮಾಬಂದಿ ಮಾಡುವಾಗ ಗಮನ ಕೊಡುತ್ತಿದ್ದಾರೆ, ಸ್ಪೆಷಲ್ ಇನ್‌ಸ್ಟ್ರಕ್ಷನ್ ಕೂಡ ಆಗಾಗ್ಗೆ ಕೊಡುತ್ತಿದ್ದೇವೆ. ಈ ವ್ಯವಹಾರ ಹೇಗೆ ನಡೆಸಬೇಕು, ನಾವು ಅದಕ್ಕೆ ಸಿಬ್ಬಂದಿ ಯಾವ ರೀತಿ ಏರ್ಪಾಡು ಮಾಡಬೇಕು ಎಂಬ ವಿಷಯದಲ್ಲಿ ಸಾರ್ವಜನಿಕರ ಒಂದು ಸ್ಪೆಷಲ್ ಕಮಿಟಿ ಕೂಡ ಇದೆ. ಆದ್ದರಿಂದ ಇದನ್ನು ಗಮನಕ್ಕೆ ತೆಗೆದುಕೊಂಡಿದೆ.

ಅನಂತರ ಹೆಚ್ಚಾಗಿ ಚರ್ಚೆಗೆ ಬಂದಿರುವುದು ಸರ್ವೆ ಸೆಟ್ಲ್‌ಮೆಂಟ್ ವಿಚಾರ. ಈ ವಿಷಯದಲ್ಲಿ ಈಗಾಗಲೆ ಇದಕ್ಕೆ ಸಿಬ್ಬಂದಿ ಕಡಮೆಯಾಗಿರುವುದು ನಿಜ. ಕೋರ್ಟು ವ್ಯವಹಾರಗಳಿಗೆ ಅವಕಾಶವಾಗಿದೆ, ಅದಾಗಬಾರದೆಂದು ಸ್ಪೆಷಲ್ ಟ್ರೈನಿಂಗ್ ಕೊಟ್ಟು ಸಿಬ್ಬಂದಿ ಜಾಸ್ತಿ ಮಾಡಲು ಪ್ರಯತ್ನ ಮಾಡಿದೆ, ಮತ್ತು ಇರುವ ರೆವೆನ್ಯೂ ಆಫೀಸರುಗಳೂ ಕೂಡ ಸರ್ವೆ ಕೆಲಸ ಮಾಡಲು ಅವಕಾಶ ಮಾಡಿ ಟ್ರೈನಿಂಗ್ ಕ್ಲಾಸ್ ಏರ್ಪಾಡು ಮಾಡಿದೆ. ಆದ್ದರಿಂದ ತಕ್ಕ ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿದೆ.

ಅನಂತರ ಗ್ರಾಮ ಪಂಚಾಯಿತಿ ವಿಷಯದಲ್ಲಿ ಹಣ ವಸೂಲಾಗುವುದು, ಮನೆಗಂದಾಯ, ಬಹಳ ಕಡಮೆಯಾಗಿದೆ, ಅದರಿಂದ ಗ್ರಾಮ ಪಂಚಾಯಿತಿಗೆ ಬರುವ ವರಮಾನ ಕಡಮೆಯಾಗಿದೆ ಎಂದು ಗೊತ್ತಾಗಿದೆ. ಈ ವಿಷಯದಲ್ಲೂ ಕೂಡ ಹೆಚ್ಚು ಗಮನ ಕೊಡಬೇಕು. ಗ್ರಾಮ ಪಂಚಾಯಿತಿಯವರೂ ಹೆಚ್ಚು ಮುತವರ್ಜಿ ವಹಿಸಬೇಕು; ಅವರು ತಾತ್ಸಾರ ಮಾಡಿದರೆ ತೊಂದರೆ. ಆದರೂ ಅಮಲ್ದಾರರೂ, ರೆವೆನ್ಯೂ ಇನ್‌ಸ್ಪೆಕ್ಟರೂ ಹೆಚ್ಚು ಗಮನಕೊಡಬೇಕು ಎಂದು ಹೇಳಿದೆ. ಆ ಹಣದಿಂದ ಹೆಚ್ಚು ಕೆಲಸವಾಗುವುದಿಲ್ಲ ಎಂದು ಈ ಸಲದ ಬಡ್ಜೆಟ್ ಎಸ್ಟಿಮೇಟಿನಲ್ಲಿ 25 ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಬೋರ್ಡ್‌ಗಳು ಮತ್ತು ಗ್ರಾಮಪಂಚಾಯಿತಿಗಳಿಗೆ ಹಂಚಲು ಕೊಟ್ಟಿದೆ. ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ರೆವಿನ್ಯೂನಿಂದ ಕೊಡುತ್ತಿದ್ದುದನ್ನು ಆಕ್ಟ್ ತಿದ್ದುಪಡಿಯಾದಾಗ ಡಿಲೀಟ್ ಮಾಡಿದೆ. ಆದ್ದರಿಂದ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ರೆವೆನ್ಯೂನಲ್ಲಿ ಈಗ ಯಾವ ಹಣವೂ ಬರುವುದಿಲ್ಲ. ಮತ್ತು ಇನ್ನೊಂದು ಹೊಸದಾಗಿ ಇದರ ವಿಷಯವಾಗಿ ಹೆಚ್ಚು ಗಮನ ಕೊಡುವುದಕ್ಕೆ ಗ್ರಾಮಪಂಚಾಯಿತಿಗಳಿಗೆ ಸೆಕ್ರೆಟರಿ ನೇಮಿಸಬೇಕು, ಅವರು ಅದರ ಮೇಲ್ವಿಚಾರಣೆ ನೋಡಬೇಕು ಎಂಬ ಅಭಿಪ್ರಾಯವಿದೆ. ಈ ವಿಷಯದಲ್ಲೂ ಜಾಗ್ರತೆ ಮುಂದುವರಿಯುವುದಕ್ಕೆ ಪ್ರಯತ್ನ ಮಾಡೋಣ.

ಇನ್ನು ಜಮೀನು ಕೊಡುವ ವಿಷಯದಲ್ಲಿ ಬಹಳ ಚರ್ಚೆಯಾಗಿದೆ. ನಿಮ್ನ ವರ್ಗದವರಿಗೆ ಕೊಡುವುದು, ಜಮೀನಿಲ್ಲದವರಿಗೆ ಕೊಡುವುದು, ಪೊಲಿಟಿಕಲ್ ಸಫರರ್ಸ್‌ಗೆ ಕೊಡುವುದು ಎಂದು ಮೂರು ಭಾಗವಾಗಿ ಜಮೀನು ಕೊಡುವುದನ್ನು ವಿಂಗಡಿಸಬಹುದು. ಹೆಚ್ಚಾಗಿ ಚರ್ಚೆಯಾಗಿರುವುದು ಪೊಲಿಟಿಕಲ್ ಸಫರರ್ಸ್ ವಿಚಾರ. ಅವರ ಸಂಖ್ಯೆ ಬಹಳ ಕಡಮೆ, ಬಾಕಿಯವರ ಸಂಖ್ಯೆ ಸಾವಿರಾರಿದ್ದರೆ ಅವರ ಸಂಖ್ಯೆ

ನೂರಾರಿರಬಹುದು ಎಂದು ಹೇಳಿದ್ದಾರೆ. ಎಂಟು-ಹತ್ತು ವರ್ಷಗಳಿಂದ ಸಮರ್ಪಕವಾದ ತೀರ್ಮಾನವಾಗಿರುವುದರಿಂದ ಒಂದೆರಡು ವರ್ಷಗಳಲ್ಲಿ ಪೂರ್ಣವಾಗಿ ತೀರ್ಮಾನ ಮಾಡುವುದಕ್ಕೆ ಗಮನಕೊಟ್ಟಿದೆ. ಆದರೆ ಅವರಿಗೂ ಕೂಡ ಜಮೀನನ್ನು 15 ವರ್ಷ ಏಲಿಯನೇಟ್ ಮಾಡಕೂಡದೆಂದು ತಿಳಿಸಿದೆ ಮತ್ತು ಅದರಲ್ಲೂ ಜಮೀನಿಲ್ಲದಿರುವವರಿಗೆ ಪ್ರಾಶಸ್ತ್ಯ ಕೊಡಬೇಕು, ಹೆಚ್ಚು ಜಮೀನಿರುವವರಿಗೆ ಕೊಡುವುದು ಸರಿಯಲ್ಲ ಎಂದು ಕೂಡ ಹೇಳಿದೆ. ಇಷ್ಟಾದರೂ ಲೋಪದೋಷ ಅಲ್ಪ ಸ್ವಲ್ಪವಿದ್ದರೆ ಸರಿಪಡಿಸಬಹುದು.

ಎರಡನೆಯದಾಗಿ ಹರಿಜನರಿಗೆ ಹೆಚ್ಚಾಗಿ ರಿಯಾಯಿತಿ ಕೊಟ್ಟಿದೆ, ಮೊನ್ನೆತಾನೆ ಕಾಂಪೆನ್ಸೇಷನ್ ಕೊಡುವ ವಿಚಾರದಲ್ಲಿ ಅಪ್ಸೆಟ್‌ಪ್ರೈಸ್ ಕನ್ಸೆಷನ್ 100 ರೂಪಾಯಿ ಇದ್ದುದನ್ನು 200 ರೂಪಾಯಿಗಳಿಗೆ ಹೆಚ್ಚಿಸಿದೆ. ಆದ್ದರಿಂದ ಹೆಚ್ಚು ರಿಯಾಯಿತಿಯಿದೆ. ಜಮೀನಿಲ್ಲದವರಿಗೆ ಜಮೀನು ಕೊಡಬೇಕು ಎಂದು ಹೇಳಿ ಒಂದು ಸೀಲಿಂಗ್ ಸಹ ನಿಗದಿ ಮಾಡಿದೆ, 4 ಎಕರೆ ತರಿ, 10 ಎಕರೆ ಖುಷ್ಕಿ ಇದ್ದರೆ ಅಂಥವರಿಗೆ ಕೊಡುವುದು ಅನಾವಶ್ಯಕ ಎಂದು ಹೇಳಿದೆ. ಅದಕ್ಕಿಂತ ಕಡಮೆಯಿದ್ದವರಿಗೆ ಕಡಮೆಯಿರುವುದನ್ನು ಭರ್ತಿ ಮಾಡುವಷ್ಟು ಕೊಡಬೇಕು, ಹೆಚ್ಚಿಗೆ ಬೇಡ ಎಂದು ನಿಗದಿ ಮಾಡಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಅನುಸರಿಸುತ್ತಿರುವ ನೀತಿಗೆ ವಿರೋಧವಾಗಿ ಪರಭಾರೆ ವಗೈರೆ ಮಾಡುತ್ತಿದ್ದಾರೆ. ಅದನ್ನು ನಿರ್ಬಂಧಹಾಕಿ ಸರಿಪಡಿಸಬೇಕಾದ್ದು ಅಗತ್ಯವಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ರೀತಿ ಹೆಚ್ಚು ಕಡಮೆಯಾಗಿರುವುದು ಗಮನಕ್ಕೆ ಬಂದಿಲ್ಲ, ಬಂದರೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಮತ್ತು ಈಗ ಮೂರು ವರ್ಷಗಳಿಂದ ಎಷ್ಟು ಜಮೀನು ಕೊಟ್ಟಿದೆಯೆಂಬುದು ಮಾನ್ಯ ಸಭೆ ಗಮನಕ್ಕೆ ಬಂದಿದೆ. ಅದರಿಂದ ಈ ವಿಚಾರದಲ್ಲಿ ತಾತ್ಸಾರವಿಲ್ಲವೆಂದು ಗೊತ್ತಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸರ್ಕಾರದವರೇನೋ ಜಮೀನಿಲ್ಲದಿರುವವರಿಗೆ ಕೊಡಬೇಕೆಂದು ಈ ರೀತಿ ಆರ್ಡರು ಮಾಡಿದ್ದಾರೆ. ಈಗ ನಡೆಯುತ್ತಿರುವುದನ್ನು ಸೂಕ್ಷ್ಮವಾಗಿ ನನಗೊಬ್ಬರು ಹೇಳಿದರು. ಸ್ಥಳದಲ್ಲಿರುವವರಿಗೆ ಜಮೀನು ಕೊಡಬೇಕಾಗಿರುವಾಗ ಸರ್ಕಾರದಿಂದ, ರೆವೆನ್ಯೂ ಕಮೀಷನರಿಂದ ಅಥವಾ ಮಂತ್ರಿಗಳ ಮೂಲಕ ಕೆಲವು ಶಿಫಾರ್ಸುಗಳು ಬರುತ್ತವೆ. ಎರಡು ವರ್ಗದ ಜನರಿಗೆ ಈ ಶಿಫಾರ್ಸು ಬರುತ್ತದೆ. ಪೊಲಿಟಿಕಲ್ ಸಫರರ್ಸ್ ಎಂದು ಈಗಲೂ ಕೆಲವರು ಮಂತ್ರಿಗಳ ಹತ್ತಿರ ಅಥವಾ ದೊಡ್ಡ ಅಧಿಕಾರಿಗಳ ಹತ್ತಿರ ಸಂಪರ್ಕವುಳ್ಳವರು ಅಥವಾ ಅಲ್ಲಿ ತಮ್ಮ ಪ್ರಭಾವ ಬೀರುವುದಕ್ಕೆ ಯಾರಿಗೆ ಶಕ್ತಿಯಿದೆಯೋ ಅಂಥವರು, ಶಿವಮೊಗ್ಗ ಜಿಲ್ಲೆ ಅಥವಾ ಬೆಂಗಳೂರಿನಲ್ಲಿದ್ದುಕೊಂಡು, ಪೆರಿಯಾಪಟ್ಟಣ ಅಥವಾ ಹೆಗ್ಗಡದೇವನಕೋಟೆಯಲ್ಲಿ ನಾಲೆ ಬರುತ್ತದೆಂದು ಹೇಳಿದರೆ ಅಲ್ಲಿಗೆ ಅರ್ಜಿ ಹಾಕಿ ಮೇಲಿನಿಂದ ಶಿಫಾರ್ಸು ಮಾಡಿಸಿ ಜಮೀನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಸ್ಥಳದಲ್ಲಿರುವವರಿಗೆ ಜಮೀನು ಕೊಡುವಾಗ ಇತರ ಕಡೆಗಳಲ್ಲಿರುವ ಅಧಿಕಾರವರ್ಗದವರು ಮುಂತಾದವರಿಗೆ ಶಿಫಾರ್ಸು ಮೂಲಕ ಜಮೀನು ಕೊಡುತ್ತಿದ್ದಾರೆ. ಯಾವ ಕಾರಣದಿಂದ ಅಂಥವರಿಗೆ ಜಮೀನು ಕೊಡಬೇಕೆಂದು ಶಿಫಾರ್ಸು ಮಾಡುತ್ತಾರೋ ತಿಳಿಯದು. ಹತ್ತಾರುವರ್ಷಗಳಿಂದ ಅನೇಕ ಅರ್ಜಿಗಳು ವಿಲೆಯಾಗದೆ ಉಳಿದಿವೆ. ಇಂಥ ಕಡೆ ಜಮೀನು ಕೊಡಬೇಕೆಂದು ತಾಲ್ಲೂಕು ಆಫೀಸಿಗೆ ರೆವೆನ್ಯೂ ಕಮೀಷನ ಆಫೀಸಿನಿಂದಲೇ ಬರೆದು ಕಳುಹಿಸಿರುತ್ತಾರೆ. ಇಂಥ ಕಡೆ ಜಮೀನು ಹೇಗಿದೆಯೆಂಬುದು ನಮಗೆ ಗೊತ್ತಾಗುವುದಿಲ್ಲ. ಆ ಸಮಾಚಾರ ತಿಳಿದುಕೊಂಡು ಎಲ್ಲಿ ಚೆನ್ನಾಗಿರುವ ಜಮೀನಿರುತ್ತದೆಯೋ ಅಂಥಕಡೆ ಜಮೀನು ಕೊಡಬೇಕೆಂದು ಬೇಕಾದವರಿಗೆ ಶಿಫಾರ್ಸು ಬರುತ್ತದೆ. ಈಗ ಏನಾಗುತ್ತಿದೆ ಎಂದರೆ ವಾಸ್ತವವಾಗಿಯೂ ನೂರಾರು ವರ್ಷಗಳಿಂದ ಯಾರಿಗೆ ಜಮೀನು ಇತ್ಯಾದಿಗಳೊಂದೂ ಇರುವುದಿಲ್ಲವೋ ಅಂಥವರಿಗೆಲ್ಲಾ ಈ ದಿವಸ ಜಮೀನು ದೊರೆಯುವಂತಾಗಬೇಕು. ಈ ಅಂಶವನ್ನು ಜಮೀನು ವಿಲೇಮಾಡತಕ್ಕ ಸಂದರ್ಭದಲ್ಲಿ ಸರ್ಕಾರದವರು ತಮ್ಮ ಮನಸ್ಸಿಗೆ ತೆಗೆದುಕೊಂಡು, ಇಂಥಿಂಥಾ ಜನಗಳಿಗೇ ಈ ಜಮೀನನ್ನು ಕೊಡಬೇಕು ಎಂಬುದಾಗಿ ತಾವೇನೋ ಒಂದು ಹೊಸ ಸಮಾಜವನ್ನೇ ರಚನೆಮಾಡುತ್ತೇವೆಂದು ಹೇಳುತ್ತಿದ್ದೀರೋ ಆ ತತ್ವಕ್ಕನುಗುಣವಾಗಿ ಈ ಲ್ಯಾಂಡ್‌ಲೆಸ್ ಮತ್ತು ಬೋನಾಫೈಡಿ ಅಗ್ರಿಕಲ್‌ಚರಿಸ್ಟ್‌ಗಳಿಗೆ ಜಮೀನು ದೊರೆಯುವ ಹಾಗೆ ಮಾಡಲು ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಗೊಂಡಿರುತ್ತಾರೆ ಎನ್ನುವುದನ್ನು ಈ ಮಾನ್ಯಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರವನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ನಾನು ನಮ್ಮ ದಾವಣಗೆರೆ ತಾಲ್ಲೂಕಿನಲ್ಲಿರುವ 18 ಜನ ಪೊಲಿಟಿಕಲ್ ಸಫರರ್ಸ್‌ಗಳಿಗೆ ಜಮೀನುಗಳನ್ನು ಕೊಡಿಸಬೇಕೆಂದು ಕಳೆದ ಮೂರು ವರ್ಷಗಳಿಂದ ಪ್ರಯತ್ನಪಡುತ್ತಿದ್ದೇನೆ. ನಾವು ಈ ಬಗ್ಗೆ ಒಂದು ಲಿಸ್ಟ್ ಮಾಡಿದ್ದೇವೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೇ ಶಿವಾಯಿ ಈವರೆಗೂ ಯಾರಿಗೂ ಒಂದು ಎಕರೆ ಜಮೀನ್ ಸಹ ಕೊಟ್ಟಿಲ್ಲ. ಇದೆಲ್ಲಾ ನಾಮಕಾವಾಸ್ತೆ ಹೇಳಿಕೆಗಳೇ ಹೊರತು ಇದರಲ್ಲಿ ತಿಲಮಾತ್ರವೂ ಸತ್ಯವಿಲ್ಲ. ಇದೇನೇನು ತಮ್ಮ ಈ ಜಮೀನು ಹಂಚತಕ್ಕ ರೀತಿ-ನೀತಿ ! ·

ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಶ್ರೀ ಡಿ. ದೇವರಾಜ ಅರಸರು ಹೇಳಿದರು—ಮಿಲಿಟರಿಯವರಿಗೆ ಜಮೀನನ್ನು ಕೊಡಲಾಗುತ್ತಿದೆಯಲ್ಲಾ—ಅದು ಯಾವ ನೀತಿಯೋ ನಮಗಂತೂ ಗೊತ್ತಾಗುವುದಿಲ್ಲ'' ಎಂದು. ಇಂಡಿಯನ್ ಆರ್ಮಿ ರೂಲ್ಸ್ ಎಂಡ್ ಇಂಡಿಯನ್ ಆರ್ಮಿ ಕನ್‌ಸೆಷನ್ ರೂಲ್ಸ್ ಎಂಬ ಒಂದು ಕಾನೂನಿದೆ. ಈ ರೂಲ್ಸ್ ನಮ್ಮ ಮೈಸೂರು ಮಿಲಿಟರಿಯಲ್ಲಿದ್ದು ನಿವೃತ್ತಿಯಾಗಿರತಕ್ಕಂಥ ಜನರಿಗೆ ಮಾತ್ರ ಅನ್ವಯಿಸಿದ್ದಾಗಿರುತ್ತವೆ. ಈ ಜನರಿಗೆ ಆ ರೂಲ್ಸ್ ಮತ್ತು ನಿಬಂಧನೆಗಳಿಗನುಸಾರವಾಗಿ ಮೈಸೂರು ಸಂಸ್ಥಾನದಲ್ಲಿ ಎಲ್ಲೆಲ್ಲಿ ಈ ಕೆರೆಗಳು—ನಾಲೆಗಳು ಆಗುತ್ತಿವೆಯೋ ಅಂಥ ಎಲ್ಲಾ ಪ್ರದೇಶಗಳಲ್ಲೂ ಅವರಿಗೆ ಅವಕಾಶವಿರತಕ್ಕ ಸಂದರ್ಭಗಳಲ್ಲೆಲ್ಲಾ ಜಮೀನನ್ನು ಕೊಡಲಾಗುತ್ತಿದೆ. ಅವರು ನಮ್ಮ ದೇಶದ ಭದ್ರತೆಗಾಗಿ ತಮ್ಮ ಪ್ರಾಣವನ್ನೇತೆರಲು ಸಿದ್ಧರಾಗಿದ್ದಂಥ ಜನರು. ಅವರಿಗೆ. . . .

Sri D. DEVARAJA URS.—They must verify whether those people are settling on the lands given by the Government.

Sri A. G. RAMACHANDRA RAO.—As far as possible. ನಾನು ಅದಕ್ಕಾಗಿಯೇ ಅದನ್ನು ಪರಿಶೀಲನೆಮಾಡುತ್ತೇನೆಂದು ಆಗಲೇ ಹೇಳಿದೆನು. ಆದರೆ ಈ ಪೊಲಿಟಿಕಲ್ ಸಫರರ್ಸುಗಳ ಪೈಕಿ ಇನ್ನೂ ಕೆಲವರಿಗೆ ಜಮೀನು ದೊರೆತಿಲ್ಲ. ಈ ಜನರಿಗೆ ಕೆಲಕೆಲವು ಸಂದರ್ಭಗಳಲ್ಲಿ ಮೂರು ನಾಲ್ಕು ಕಡೆಗಳಲ್ಲಿ ಜಮೀನು ಮಂಜೂರಾದಾಗ್ಯೂ ಇವರಿಗೆ ಇತರ ಕೆಲವು ತೊಂದರೆಗಳಿಂದ ಅದು ದೊರೆಯದೆ ಹೋಗಿರುತ್ತದೆ. ಅದಕ್ಕಾಗಿ ಈಗ ಇತರ ಕಡೆಗಳಲ್ಲಿ ಕೊಡುವುದಕ್ಕೇನಾದರೂ ಸಾಧ್ಯವಾಗುತ್ತದೆಯೇ ಎಂಬುದನ್ನೂ ಪರಿಶೀಲನೆಮಾಡಲಾಗುತ್ತಿದೆ. ಆದರೆ ಸದ್ಯಕ್ಕೆ ಈ ಪೊಲಿಟಿಕಲ್ ಸಫರರ್ಸ್‌ಗಳಿಗೇನೋ ಕೆಲವರಿಗೆ ತೊಂದರೆಯಾಗಿದೆ. ಆದರೆ ಇಂಥ ಜನರ ಸಂಖ್ಯೆ ಸಾವಿರಾರೇನೂ ಇಲ್ಲ. ಇದ್ದರೆ ನೂರರೊಳಗಿರಬಹುದು.

Sri M. PALANIYAPPAN.—There are instances where political sufferers have not been granted land. . . .

Sri A. G. RAMACHANDRA RAO.—I have myself admitted it. ಆದರೆ ಈಗ ಈ ಜಮೀನುಗಳನ್ನು ಯಾರು ಲ್ಯಾಂಡ್ ಲೆಸ್ ಪೀಪಲ್ ಆಗಿದ್ದಾರೋ ಅಂಥವರಿಗೆ ಕೊಡುತ್ತಲೇ ಇಲ್ಲ ಎನ್ನುವುದನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ಈ ಬಗ್ಗೆ ನಾನು ಕೆಲವು ಅಂಕಿಅಂಶಗಳನ್ನು ತಮಗೆ ತಿಳಿಸಿದರೆ ಆಗ ತಮಗೇ ಎಲ್ಲ ವಿಷಯಗಳೂ ವೇದ್ಯವಾಗುತ್ತವೆ. 1952-53ರಲ್ಲಿ 61,718 ಎಕರೆ ಜಮೀನನ್ನು ಹಂಚಲಾಗಿದೆ. 1953-54ರಲ್ಲಿ 52,213 ಎಕರೆ ಜಮೀನುಗಳನ್ನೂ 54-55ರಲ್ಲಿ 41,288 ಎಕರೆ ಜಮೀನನ್ನೂ ಹಂಚಿದ್ದೇವೆ. ಹೀಗೆ ಜಮೀನನ್ನು ನಾವು ಅಪಾರವಾಗಿ ಕೊಡುತ್ತಲೇ ಬಂದಿದ್ದೇವೆ. ಇದರಿಂದ ಇತ್ತೀಚೆಗೆ ಈ ಜಮೀನನ್ನು ಕೇಳತಕ್ಕಂಥ ಜನರ ಸಂಖ್ಯೆ ಕೂಡ ಬಹಳ ಕಡಮೆಯಾಗುತ್ತಿದೆಯೆಂಬುದು ಮೇಲಿನ ಅಂಕಿ ಅಂಶಗಳಿಂದ ತಾವೇ ಆಲೋಚಿಸಬಹುದಾಗಿದೆ. ಇನ್ನು ಈ ಜಮೀನನ್ನು ಹಂಚಿಕೆ ಮಾಡತಕ್ಕ ಸಂದರ್ಭದಲ್ಲಿ ಈ ಡಿಪ್ರೆಸ್ಡ್ ಕ್ಲಾಸಿನವರಿಗಾಗಿ ವಿಲೇವಾರಿ ಆಗತಕ್ಕ ಜಮೀನಿನಲ್ಲಿ ಶೇಕಡ 20ರಷ್ಟನ್ನು ಅವರಿಗಾಗಿ ಮೀಸಲಾಗಿಡಬೇಕೆಂದು ಈಗಾಗಲೇ ತೀರ್ಮಾನವಾಗಿದೆ. ಅದರಂತೆ ಈಗ ಅದನ್ನು ಅನುಸರಿಸಲಾಗುತ್ತಿದೆ. ಇನ್ನು ಇವುಗಳಿಗೆ ನಿಗದಿಮಾಡಿರತಕ್ಕಂಥ ಆ ಅಪ್‌ಸೆಟ್ ಬೆಲೆಯನ್ನೂ ಸಹ ಪರಿಶೀಲನೆಮಾಡಿರುತ್ತೇವೆ. ಹೆಚ್ಚಿಗೆ ಇದೆಯೆಂದು ಕಂಡುಬಂದ ಸಂದರ್ಭಗಳಲ್ಲಿ ಅದನ್ನೂ ಪುನಃಪರಿಶೀಲಿಸಿ ಕಡಮೆಮಾಡಿರತಕ್ಕಂಥ ಸಂದರ್ಭಗಳೂ ಸಹ ಇವೆ.

ಇನ್ನು ಈ ಪಟೇಲ್, ಶ್ಯಾನುಬೋಗರುಗಳಿಗೆ ಸಂಬಳ ಸಾರಿಗೆಗಳನ್ನು ಕೊಡಬೇಕೆಂಬ ವಿಚಾರ ಅನೇಕ ವರ್ಷಗಳಿಂದಲೂ ಈ ಸಭೆಯ ಮುಂದೆ ಚರ್ಚೆ ಆಗುತ್ತಲೇ ಬಂದಿದೆ. ಈ ವಿಚಾರವನ್ನು ಸರ್ಕಾರದ ಲೆವಲ್‌ನಲ್ಲಿ ಅನೇಕಾವರ್ತಿ ಪರಿಶೀಲನೆ ಮಾಡಿದ್ದೇವೆ. ಈ ರೀತಿ ಈ ಗ್ರಾಮ ನೌಕರರುಗಳಿಗೆ ಸಂಬಳಸಾರಿಗೆಗಳನ್ನು ಕೊಡಬೇಕೆಂದರೆ ಸರ್ಕಾರಕ್ಕೆ ಬಹಳ ಹಣ ಖರ್ಚಾಗುತ್ತದೆ. ಆದರೆ ಈಗಿರತಕ್ಕ ಪದ್ಧತಿಯೇ ಚೆನ್ನಾಗಿದೆ. ಇದರಲ್ಲೂ ಅಲ್ಪ ಸ್ವಲ್ಪ ತೊಂದರೆಗಳಿರಬಹುದು. ಆದಾಗ್ಯೂ ಈಗ ಇರತಕ್ಕಂಥ ಪದ್ಧತಿಯೇ ಇನ್ನು ಮುಂದಕ್ಕೂ ಮುಂದುವರಿಸಿಕೊಂಡು ಬರಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಈಗ ಇದನ್ನು ಇಷ್ಟಕ್ಕೆ ನಿಲ್ಲಿಸಬೇಕೆಂದಿದ್ದೆವು. ಆದರೆ ಇತ್ತೀಚೆಗೆ ಈ ರಾಜ್ಯಗಳ ಪುನರ್ವಿಂಗಡಣೆಗಳ ವಿಚಾರ ಬೇರೆ ನಡೆಯುತ್ತಿದೆ. ನಾನಾಭಾಗಗಳು ಅನೇಕ ವೈವಿಧ್ಯಗಳಿಂದ ಕೂಡಿರತಕ್ಕಂಥವುಗಳೆಲ್ಲಾ ಈಗ ಒಂದಾಗತಕ್ಕಂಥ ಸಂದರ್ಭ ಬಂದಿದೆ. ಇನ್ನು ಆರು ತಿಂಗಳೊಳಗಾಗಿ ಇದನ್ನು ಕಾರ್ಯಗತಮಾಡಬೇಕಾಗಿರುತ್ತದೆ. ಅದೆಲ್ಲವೂ ಆದನಂತರ ಸರ್ಕಾರ ಈ ಬಗ್ಗೆ ಒಂದು ಸುವ್ಯವಸ್ಥಿತವಾದಂಥ ತೀರ್ಮಾನಮಾಡಬೇಕೆಂದು ನಮ್ಮ ಆಲೋಚನೆ ಇದೆ.

ಇನ್ನು ಈ ಪಟೇಲ್, ಶ್ಯಾನುಬೋಗರುಗಳಿಗೆ ಇತ್ತೀಚೆಗೆ ಇವರ ಕೆಲಸಕಾರ್ಯಗಳೇನೋ ಜಾಸ್ತಿಯಾಗಿವೆ—ಅದಕ್ಕನುಸಾರವಾಗಿ ಅವರಿಗೆ ಹೆಚ್ಚು ವರಮಾನ ಬರುವಂತೆ ಏರ್ಪಾಡುಗಳನ್ನು ಮಾಡಿದ್ದೇವೆ. ತಮ್ಮ ನಿತ್ಯಕಾರ್ಯಾಚರಣೆಗಳಲ್ಲದೆ ಅವರು ಹೆಚ್ಚಿಗೆ ಮಾಡತಕ್ಕಂಥ ಕೆಲಸಗಳ ಬಗ್ಗೆ ನಾಲ್ಕಾಣೆ ಹೆಚ್ಚು ವರಮಾನ ಬರುವಂತೆ ಮಾಡಿದ್ದೇವೆ.

Government have been revising the Potgi allowance from time to time, taking into consideration essential factors and the necessity of further enhancement will be examined in due course.

ಈ ತೋಟಿ-ತಳಾರಿಗಳ ವಿಚಾರ ಕೂಡ ಅಂದರೆ ಇವರ ಮಿರಾಸೆ ವಿಚಾರ ಪರಿಶೀಲನೆ ಆಯಿತು. ಇವರಿಗೆ ಸ್ವಲ್ಪ ಜಾಸ್ತಿಕೊಡಬೇಕೆಂದರೂ ಸರ್ಕಾರದ ಮೇಲೆ 50 ಲಕ್ಷ ರೂಪಾಯಿಗಳಿಗೂ ಹೆಚ್ಚಿನ ಹೊರೆಬೀಳುತ್ತದೆ. ಇದನ್ನು ಹೊರಲು ಸರ್ಕಾರಕ್ಕೆ ಬಹಳ ಕಷ್ಟವಾಗುತ್ತದೆ, ಈ ಹೊತ್ತಿನ ಪರಿಸ್ಥಿತಿಯಲ್ಲಿ ಇವರಿಗೆ ಮಿರಾಸೆ ರೂಪವಾಗಿ ಬರತಕ್ಕ ವರಮಾನ ಕಡಮೆಯಾಗಿರುತ್ತದೆಂಬ ಉದ್ದೇಶದಿಂದಲೇ ಇವರೆಲ್ಲರಿಗೂ ಉಂಬಳಿ ಜಮೀನುಗಳನ್ನೂ ಸಹ ಕೊಡಲಾಗಿದೆ. ತೋಟಿ-ತಳಾರಿಗಳಿಗೆ ಸಲ್ಲಬೇಕಾದ ಮಿರಾಸೆ ಸರಿಯಾಗಿ ಸಲ್ಲುವಂತೆ ನೋಡಿಕೊಳ್ಳಲು ಮತ್ತು ತಪ್ಪಿತಸ್ಥರ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿವಳಿಕೆಕೊಡಲಾಗಿದೆ. ಸಾಧ್ಯವಾಗುವುದಾದರೆ ಈ ವಿಚಾರವನ್ನು ಪುನಃ ಸ್ಟೇಟ್-ರೀ-ಆರ್ಗನೈಜೇಷನ್ ಆದನಂತರ ಪರಿಶೀಲನೆ ಮಾಡುವುದಕ್ಕೆ ಅವಕಾಶವಿದೆ.

ಇನ್ನು ಆ ವಿಲೇಜ್ ಪಂಚಾಯಿತಿಗಳ ಸದಸ್ಯರ ವಿಚಾರ ಬೇರೆ ಬಂದಿದೆ. ಅವರು ನಡೆಸಬೇಕಾಗಿರತಕ್ಕ ಕೆಲಸಕಾರ್ಯಗಳಿಗೆ ತಕ್ಕಂತೆ ಅವರಿಗೆ ತಕ್ಕಷ್ಟು ಶಕ್ತಿ, ವಿದ್ಯಾ-ಬುದ್ಧಿಗಳೆಲ್ಲಾ ಇವೆ. ಅವರಿಗೆ ಈಗ ಸಾಧ್ಯವಾದ ಮಟ್ಟಿಗೂ ಒಂದು ಟ್ರೈನಿಂಗನ್ನು ಕೊಡಲು ಯಶವಂತಪುರದ ಹೋಬಳಿಯಲ್ಲಿ ಒಂದು ಏರ್ಪಾಡನ್ನು ಮಾಡಲಾಗಿದೆ. ಈ ವಿಚಾರವನ್ನು ಮ್ಯಾನ್ಯುಯಲ್‌ನಲ್ಲಿ ಕೂಡ ಹೇಳಿದೆ. ಈಗ ಈ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಕೈಗೊಳ್ಳಲಾಗಿದೆ.

ಇನ್ನು ಈ ಸರ್ವೆ ಅಂಡ್ ಸೆಟಲ್‌ಮೆಂಟ್ ವಿಚಾರದಲ್ಲಿ ಹೇಳುವುದಾದರೆ, ಇತ್ತೀಚೆಗೆ ಸ್ಪೆಷಲ್ ಸರ್ವೇ ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳಲಾಗುತ್ತಿದೆ. ಈಗಾಗಲೇ ಈ ಸರ್ವೆ ಕಾರ್ಯ ಆ ಚಿತ್ರದುರ್ಗ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಮುಗಿಯುತಾ ಬಂದಿದೆ. ಆದಾಗ್ಯೂ ಈ ಸರ್ವೆ ಸಿಬ್ಬಂದಿಯನ್ನು ಇನ್ನೂ ಜಾಸ್ತಿ ಮಾಡಬೇಕೆಂಬ ಆಲೋಚನೆಯಿದೆ. ಶ್ರೀ ಚಂದ್ರಶೇಖರಯ್ಯನವರು ತಿಳಿಸಿರತಕ್ಕಂಥ ಆಧಾರವಾಗಿ ಈ ಸರ್ವೆ ಪರಿಶೀಲನೆ ಬಗ್ಗೆ ಅವರ ಕಡೂರು ಜಿಲ್ಲೆಯ ವಿಚಾರಕ್ಕೆ ಗಮನಕೊಡಲು ಏರ್ಪಾಡು ಮಾಡುತ್ತೇವೆ.

ಇನ್ನು ಈ ಲ್ಯಾಂಡ್ ಪಾಲಿಸಿ ವಿಚಾರವಾಗಿ ಬಹಳ ದೀರ್ಘವಾಗಿಯೇ ಚರ್ಚೆಯಾಯಿತು. ಇನ್ನು ನಮ್ಮ ದೇಶದಲ್ಲಿದ್ದಂಥ ಇನಾಂ ಪದ್ಧತಿಯನ್ನು ರದ್ದುಗೊಳಿಸಿದನಂತರ ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಜಮೀನ್ದಾರರುಗಳು ಇರತಕ್ಕಂಥ ಸಂಭವ ತೀರ ವಿರಳವಾಗಿದೆಯೆಂದು ಗೊತ್ತಾಗಿದೆ. ನಮ್ಮ ಸಂಸ್ಥಾನವನ್ನು ಇತರ ಪ್ರಾಂತ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ಮೈಸೂರಿನಲ್ಲಿ ಈ ದೊಡ್ಡ ಜಮೀನ್ದಾರರ ಸಂಖ್ಯೆ ಬಹಳ ಕಡಮೆಯಾಗಿರುತ್ತದೆ. ಶ್ರೀ ಎಚ್. ಬಿ. ಗುಂಡಪ್ಪಗೌಡರ ಸಮಿತಿಯ ವರದಿಯಲ್ಲೂ ಸಹ ಆಗ ಇದನ್ನು ಪರಿಶೀಲಿಸಿದ್ದಾಯಿತು. ನಮ್ಮ ಸಂಸ್ಥಾನದಲ್ಲಿ ಒಟ್ಟು ದೊಡ್ಡ ಜಮೀನ್ದಾರರುಗಳ ವಶದಲ್ಲಿರತಕ್ಕ ಜಮೀನು ಎಷ್ಟೆಂದರೆ ಅದು ಕೇವಲ 82 ಲಕ್ಷ 63 ಸಾವಿರ ಎಕರೆಗಳು ಮಾತ್ರ. ಈ ಜಮೀನಿನಲ್ಲಿ ಸುಮಾರು 50 ಎಕರೆಗಳಿಗಿಂತಲೂ ಕಮ್ಮಿ ಹೋಲ್ಡಿಂಗ್ಸ್ ಇರತಕ್ಕದ್ದು 12 ಲಕ್ಷ 45 ಸಾವಿರ ಎಕರೆಗಳು. ಇನ್ನು 50 ಎಕರೆಗಳಿಗೆ ಜಾಸ್ತಿ ಇರತಕ್ಕಂಥವರ ಸಂಖ್ಯೆ 12 ಲಕ್ಷದ 36 ಸಾವಿರ. ಹೀಗೆ ಹೆಚ್ಚಿಗೆ ಜಮೀನಿರತಕ್ಕಂಥವರ ಸಂಖ್ಯೆ ನಮ್ಮಲ್ಲಿ ಬಹಳ ಕಮ್ಮಿ. ಈ ಜಮೀನನ್ನು ರಿ-ಡಿಸ್ಟ್ರಿಬ್ಯೂಟ್ ಮಾಡುವಾಗಲೂ ನಾವು ಆ ಹಂಚತಕ್ಕ ಜಮೀನುಗಳು ಒಂದು ಎಕನಾಮಿಕ್ ಹೋಲ್ಡಿಂಗ್ ಆಗಿರುವಂತೆ ನೋಡಿಕೊಂಡು ಮಾಡಬೇಕಾಗಿದೆ. ಸಾಮಾನ್ಯವಾಗಿ 50 ಎಕರೆ ಜಮೀನು ಒಂದು ಎಕನಾಮಿಕ್ ಹೋಲ್ಡಿಂಗ್ ಎಂದು ಇಟ್ಟುಕೊಂಡರೆ ಆಗ ಸುಮಾರು 15 ಸಾವಿರ ಹೋಲ್ಡಿಂಗ್‌ಗಳಲ್ಲಿ 50 ಎಕರೆಗೂ ಜಾಸ್ತಿಯಾಗಿ ಜಮೀನಿರುತ್ತದೆಂದು ತಿಳಿದುಬಂದಿದೆ. ಆದರೆ ಈ 15 ಸಾವಿರ ಹೋಲ್ಡಿಂಗ್‌ಗಳಿರುವುದೇನೂ ಅಂಥ ಒಂದು ದೊಡ್ಡ ಸಮಸ್ಯೆ ಅಲ್ಲ. ಇದನ್ನು ತಾವುಗಳ್ಯಾರೂ ಒಂದು ಭೂತಕನ್ನಡಿ ಹಾಕಿ ನೋಡಬೇಕಾದುದಿಲ್ಲ ಎಂಬ ಅಂಶವನ್ನು ನಾನೀಗ ಮಾನ್ಯಸದಸ್ಯರ ಗಮನಕ್ಕೆ ತರಬೇಕಾಗಿದೆ. ಇನ್ನು ಈ 50 ಎಕರೆಗೂ ಮೇಲ್ಪಟ್ಟಿರುವ ಹೋಲ್ಡಿಂಗ್‌ಗಳಲ್ಲಿರುವುದೆಲ್ಲ 82 ಲಕ್ಷ ಎಕರೆ ಜಮೀನು ಮಾತ್ರ. ಆದ್ದರಿಂದ ನಮ್ಮಲ್ಲಿ ಯಾರೂ ಅಂಥ ಹೆಚ್ಚು ಜಮೀನುಳ್ಳ ದೊಡ್ಡ ಜಮೀನ್ದಾರರು ಇರುವುದು ಬಹಳ ಕಡಮೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಈ ಟೆನೆನ್ಸಿ ಬಿಲ್ಲಿಗೆ ತಿದ್ದುಪಡಿಗಳನ್ನು ತರುವುದರಲ್ಲಿ ಸರ್ಕಾರದವರು ತಾತ್ಸಾರ ಮಾಡಿದ್ದಾರೆಂಬ ಅಪಾದನೆ ಬಂದಿದೆ. ಈಗಾಗಲೇ ಈ ಜನರಲ್ ಇನಾಂ ಅಬಾಲಿಷನ್ ಬಗ್ಗೆ ಫೈನಲ್ ಪಬ್ಲಿಕೇಷನ್ ಕೊಟ್ಟಿದ್ದೇವೆ. ಇನ್ನು ಆ ರಿಲಿಜಿಯಸ್ ಇನಾಂ ರದ್ದಿಯಾತಿ ಬಿಲ್ಲು. . .

ಶ್ರೀ ಟಿ. ಮರಿಯಪ್ಪ.—ಐದು ಸಾವಿರ ರೂಪಾಯಿಗಳನ್ನು ಮಾತ್ರ ಒದಗಿಸಿದ್ದೀರಿ.

12-30 P.M.

ಶ್ರೀ ಎ. ಜಿ. ರಾಮಚಂದ್ರರಾವ್.—ಒಂದು ಟೋಕನ್ ಗ್ರಾಂಟ್ ಮಾತ್ರ ಸೂಚಿಸಿದ್ದೇವೆ. ಇನ್ನು ಈ ಸರ್ಕಾರಿ ಗ್ರಾಮಗಳಲ್ಲಿ ಅನೇಕ ಕಡೆ ಈ ಸರ್ವೆ ಅಂಡ್ ಸೆಟಲ್‌ಮೆಂಟ್ ಕಾರ್ಯ ಪೂರೈಸಿದೆ. ಆ ಬಗ್ಗೆ ರೂಲ್ಸು ಕೂಡ ಆಗಿ ಅವು ಈಗಾಗಲೇ ಪಬ್ಲಿಷ್ ಆಗಿರುತ್ತವೆ. ಇನ್ನು ಈ ಬಗ್ಗೆ ಅಷ್ಟೇನೂ ತಡವಾಗುವುದಿಲ್ಲ. ಜಾಗ್ರತೆಯಾಗಿ ಈ ಕೆಲಸವನ್ನು ಮಾಡಲಾಗುತ್ತದೆ. ಸೀಲಿಂಗ್ ವಿಷಯದಲ್ಲಿ ಸ್ಟ್ಯಾಂಡರ್ಡ್ ಎಕರ್ಸ್ ಎಷ್ಟಿರಬೇಕು ಎಂಬ ಪ್ರಶ್ನೆ ಇದೆ. ಒಂದು ಕಡೆ 100 ಎಕರೆ ಇನ್ನೊಂದು ಕಡೆ 25 ಎಕರೆ ಹಾಕಿಕೊಂಡಿದ್ದಾರೆ. ಇಂಡಿಯಾ ಸರ್ಕಾರದವರು ಸ್ಟ್ಯಾಂಡರ್ಡ್ ಎಕರ್ಸ್, ಹೋಲ್ಡಿಂಗ್, ಎಷ್ಟಿರಬೇಕೆಂಬ ವಿಚಾರದಲ್ಲಿ ಪರಿಶೀಲನೆ ಮಾಡುತ್ತಾ ಇದ್ದಾರೆ. ಅದು ಬಂದತಕ್ಷಣ ಸೀಲಿಂಗ್ ಫಿಕ್ಸ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಟೆನೆನ್ಸಿ ಲೆಜಿಸ್ಲೇಷನ್ ವಿಷಯ ಎಲ್ಲರಿಗೂ ಗೊತ್ತಿದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಇದಕ್ಕೆ ಸಂಬಂಧಪಟ್ಟ ತಿದ್ದುಪಡಿಗಳನ್ನು ಜಾಗ್ರತೆ ತರುತ್ತೇವೆ. ಇದು ಅಖಿಲ ಭಾರತದ ಪ್ರಶ್ನೆಯಾದದರಿಂದ ಒಂದು ಯೂನಿಫಾರಂ ಪಾಲಿಸಿಯನ್ನು ಅನುಸರಿಸಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಆದರಿಂದ ಯಾವ್ಯಾವ ಆಕ್ಷೇಪಣೆಗಳು ಬಂದಿವೆಯೋ ಅವುಗಳೆಲ್ಲವೂ ಸರ್ಕಾರದವರ ಗಮನದಲ್ಲಿದೆ. ಸೂಕ್ತವಾದ ಪರಿಹಾರವನ್ನು ಜಾಗ್ರತೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತಾ ಇರತಕ್ಕ ವ್ಯವಸ್ಥೆಯನ್ನು ಮಾನ್ಯ ಸದಸ್ಯರ ಮುಂದೆ ಇಟ್ಟಿದ್ದೇನೆ. ಆದಕಾರಣ ಆಕ್ಷೇಪಣೆಗಳನ್ನು ವಾಪಸು ತೆಗೆದುಕೊಂಡು ಈ ಡಿಮ್ಯಾಂಡಿಗೆ ತಮ್ಮ ಅನುಮತಿಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is :

"That a sum not exceeding Rs. 61,88,000 be granted to the Government to defray the charges which will come in course of payment during the year ending 31st day of March 1957, in respect of 'Land Revenue'."

The motion was adopted.

DEMAND No. 11—GENERAL ADMINISTRATION.

25. GENERAL ADMINISTRATION (EXCEPT THE SUB-MAJOR HEADS B AND C).

Mr. SPEAKER.—Motion moved:

"That a sum not exceeding Rs. 86,29,900 be granted to the Government to defray the charges which will come in course of payment during the year ending 31st day of March 1957, in respect of 'General Administration' (except the sub-major heads B and C)."

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸುತ್ತೇನೆ. ಸ್ವಾಮಿ, ಗೆಸ್ಟ್ ಹೌಸ್‌ಗೆ ಸಂಬಂಧಪಟ್ಟಂತೆ ಈ ಮಾನ್ಯ ಸಭೆಯ ಸದಸ್ಯರಿಗೆ ಆಗಿರತಕ್ಕ ಏರ್ಪಾಡಿನ ವಿಷಯದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದು ಇಷ್ಟಪಡುತ್ತೇನೆ. ಕೆಲವು ಗೆಸ್ಟ್ ಹೌಸುಗಳಲ್ಲಿ ಅಡಿಗೆಯವರನ್ನು ನೇಮಕ ಮಾಡಿರುತ್ತಾರೆ. ಆದರೆ ಅವರು ಅಲ್ಲಿ ಇರುವುದೇ ಇಲ್ಲ. ಬೇರೆ ಎಲ್ಲಿ ಅವರ ಸೇವೆಸಲ್ಲುತ್ತಾ ಇದೆಯೋ ಗೊತ್ತಿಲ್ಲ. ನಾನು ಕಾರಲ್‌ಟನ್ ಹೌಸ್‌ನಲ್ಲಿ ಸಾಮಾನ್ಯವಾಗಿ ಉಳಿದು

(ಶ್ರೀ ಎಚ್. ಹುಚ್ಚಮಾಸ್ತಿಗೌಡ)

ಕೊಳ್ಳುವುದು. ಅಲ್ಲಿನ ವ್ಯವಸ್ಥೆ ನೋಡಿದರೆ ಅಡಿಗೆಯವರು ಇರುವುದಿಲ್ಲ. ನಮಗೆ ಬೇರೆ ಕಡೆಯಿಂದ ಊಟ ತರಿಸುವುದಕ್ಕೆ ಬಹಳ ತೊಂದರೆ. ಅಂಥ ಸಂಬಂಧದಲ್ಲಿ ಅಲ್ಲಿರುವ ಜವಾನರುಗಳೇ ನಮಗೆ ಅಡಿಗೆಯವರಾಗಬೇಕಾಗುತ್ತದೆ. ಈ ಅಧಿವೇಶನದ ಸಮಯದಲ್ಲಿ ಬೇರೆ ಊಟದ ವ್ಯವಸ್ಥೆ ಅಲ್ಲಿ ಮಾಡಿದರೂ ಕೂಡ, ಪ್ರತಿಯೊಂದು ಕಡೆಯಲ್ಲೂ ಸರಿಯಾದ ವ್ಯವಸ್ಥೆ ಇದೆಯೇ ಇಲ್ಲವೇ ಎಂಬುದನ್ನು ಬಂದು ನೋಡಿಕೊಳ್ಳುವವರು ಯಾರೂ ಇರುವುದಿಲ್ಲ. ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ. ಸರ್ಕಾರಿ ಅಧಿಕಾರಿಗಳು ಬಂದಾಗ ಅವರಿಗೆ ತಿಳಿಸಿದರೆ ವ್ಯವಸ್ಥೆ ಏನು ಮಾಡಬೇಕೆಂಬುದು ಅವರಿಗೆ ಗೊತ್ತಿರುವುದಿಲ್ಲ. ಮಾನ್ಯ ಸಭೆಯ ಸದಸ್ಯರು ಇಲ್ಲಿಗೆ ಬಂದು ತಿಂಗಳುಗಟ್ಟಲೆ ಇರುವ ಸಮಯದಲ್ಲಾದರೂ ಕೂಡ ಅವರಿಗೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡದಿದ್ದರೆ, ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದಕ್ಕೆ ಸರ್ಕಾರದವರು ಗಮನ ಕೊಡಬೇಕೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಖಾಯಂ ಆಗಿ ನೇಮಕ ಮಾಡಿರುವ ಅಡಿಗೆಯವರೂ ಕೂಡ ಅಲ್ಲಿ ಇರುವುದಕ್ಕೆ ಏಕೆ ಮನಸ್ಸು ಮಾಡುವುದಿಲ್ಲವೋ ಏನೋ ಗೊತ್ತಿಲ್ಲ. ಅದೂ ಅಲ್ಲದೆ ಇನ್ನೊಂದು ವಿಷಯ. ಒಂದೊಂದು ರೂಮಿನಲ್ಲಿ ನಾಲ್ಕು, ಐದು ಜನ ಇದ್ದು ಏನಾದರೂ ಒಂದು ಅಧ್ಯಯನ ಮಾಡ ಬೇಕೆಂದರೆ ಅದಕ್ಕೆ ಅಲ್ಲಿ ಅವಕಾಶ ಇಲ್ಲ. ಇಂಥ ತೊಂದರೆ ಇದೆ. ಇದನ್ನು ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಸ್ವಾಮಿ, ಈ ಸಭೆ ಬಡ್ಜೆಟ್ ಅಧಿವೇಶನದಲ್ಲಿ ಕುಳಿತಿದ್ದರೂ ಕೂಡ ಹಣಕಾಸಿನ ಸಚಿವರು ಮತ್ತು ಮುಖ್ಯಮಂತ್ರಿಗಳಾಗಿರತಕ್ಕವರು ಈ ಸಭೆಯ ಸದಸ್ಯರುಗಳು ಏನು ಟೀಕೆ ಟಿಪ್ಪಣಿಗಳನ್ನು ಸಭೆಯ ಮುಂದೆ ಇಡುತ್ತಾರೊ ಅವು ಸರ್ಕಾರದ ಪರಿಶೀಲನೆಗೆ ಅರ್ಹವಾದವೇ ಅಲ್ಲವೇ ಎಂಬುದನ್ನು ಕೂಡ ಮನಸ್ಸಿಗೆ ತೆಗೆದುಕೊಳ್ಳದೆ ಇಂಥ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳು ಪ್ರವಾಸ ಕೈಕೊಳ್ಳುವುದು ಎಂದರೆ ಇದಕ್ಕಿಂತ ಈ ಸಭೆಯನ್ನು ಉದಾಸೀನ ಮಾಡಿರುವ ಉದಾಹರಣೆ ಇನ್ನೆಲ್ಲೂ ಕಾಣುವುದಿಲ್ಲ. ಏಳು-ಎಂಟು ವರ್ಷಗಳ ಮುಂಚೆ ಸ್ವಾತಂತ್ರ ಬರುವುದಕ್ಕೆ ಮೊದಲು ಇಂಥ ಪ್ರಸಂಗ ಅಲ್ಲೊಂದು ಇಲ್ಲೊಂದು ಇರಬಹುದೇ ಹೊರತು ಏಳು ಎಂಟು ವರ್ಷಗಳಿಂದೀಚೆಗೆ ಇದು ಬಹಳವಾಗಿದೆ.

ಶ್ರೀ ಟಿ. ಮರಿಯಪ್ಪ.—ಆಗ ಸಭೆ ಬಿಟ್ಟು ಹೋಗಬೇಕಾದರೆ ಬಹಳ ಹೆದರುತ್ತಾ ಇದ್ದರು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನಿಜ. ಆ ಹೆದರಿಕೆಯು ತಪ್ಪುತ್ತಿದೆಯೆಲ್ಲಾ ಎಂಬುದೇ ನನ್ನ ಆಕ್ಷೇಪಣೆ. ಇಷ್ಟರಮಟ್ಟಿಗೆ ಉದಾಸೀನ ಮಾಡಿರುವುದು ಒಳ್ಳೆಯದಲ್ಲ. ಇದನ್ನು ತಿದ್ದಿಕೊಳ್ಳಬೇಕು ಎಂದು ಹೇಳಿ ನಾನು ಸರ್ಕಾರದವರಿಗೆ ಈ ಸಭೆಯ ಮುಂದೆ ತಿಳಿಸುತ್ತೇನೆ.

ಇನ್ನು ನಮ್ಮ ಮುಖ್ಯ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣ ಮಾಡುವಾಗ ಕಾರ್ಯದಕ್ಷತೆ ಮತ್ತು ಸರ್ಕಾರಿ ನೌಕರರ ವಿಷಯದಲ್ಲಿ ಒಂದು ಮಾತು ಹೇಳಿದ್ದಾರೆ. ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಬಹುಮಟ್ಟಿಗೆ ಒಂದಕ್ಕೊಂದು ಸಂಬಂದವಿಲ್ಲದೆ ಕೆಲಸ ನಡೆಸಿಕೊಂಡು ಹೋಗುತ್ತಿವೆ. ಇದು ಹೀಗೆಯೇ ಬೆಳೆಯುತ್ತಾ ಬರುತ್ತಿದೆ ಎಂಬ ಒಂದು ಮಾತನ್ನು ಹೇಳಿದ್ದಾರೆ. ಸ್ವಾಮಿ, ಅದನ್ನು ನಾವು ಸ್ವಲ್ಪ ತೀವ್ರವಾಗಿ ಯೋಚನೆ ಮಾಡಬೇಕಾಗಿದೆ. ಮುಖ್ಯಮಂತ್ರಿಗಳು ಒಂದು ಇಲಾಖೆಯವರು ಇನ್ನೊಂದು ಇಲಾಖೆಯವರೊಡನೆ ಹೊಂದಿಕೊಂಡು ಕೆಲಸ ಮಾಡದೇ ಇರುವುದು ಹೆಚ್ಚಾಗುತ್ತಾ ಇದೆ ಎಂದರೆ ಸರ್ಕಾರ ಕೀಳ್ ದರ್ಜೆಗೆ ಬರುತ್ತಿದೆ ಎಂದು ಅರ್ಥ ಬರುವಂತೆ ಹೇಳಿದ ಹಾಗೆ ಆಯಿತು. ಅದಕ್ಕಿಂತ ಬೇರೆ ಅಧೋಗತಿ ಇನ್ನಾವುದೂ ಇಲ್ಲ. ಅಧಿಕಾರಿಗಳು ಒಂದು ಇಲಾಖೆಯವರು, ಇನ್ನೊಂದು ಇಲಾಖೆಯವರೊಂದಿಗೆ ಹೊಂದಿಕೊಂಡು ಕೆಲಸ ಮಾಡದಿದ್ದರೆ ನಾವು ನಿರೀಕ್ಷೆ ಮಾಡುವಷ್ಟು ದಕ್ಷತೆ, ಪ್ರಮಾಣಿಕತೆ ಖಂಡಿತ ಸಿಕ್ಕುವುದಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಸ್ವಾಮಿ, ಸರ್ಕಾರದವರೇ ಕೆಳಮಟ್ಟದ ಅಧಿಕಾರಿಗಳಿಗೆ ಈ ಪಾಠ ಹಾಕಿಕೊಟ್ಟಿದ್ದಾರೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. ಎಲ್ಲೋ ಒಂದು ಕಡೆ ಚಿತ್ರದುರ್ಗ ಜಿಲ್ಲೆಯಲ್ಲಿ ಎರಡು—ಮೂರು ಕೆರೆಗಳು ಒಡೆದ ಸಂದರ್ಭದಲ್ಲಿ ಯಾರು ತಪ್ಪು ಮಾಡಿದ್ದಾರೆ ಎಂಬುದನ್ನು ಪತ್ತೆ ಮಾಡುವುದಕ್ಕೆ ಒಂದು ಕಮಿಟಿ ಮಾಡಿ, ಆ ಕಮಿಟಿಯ ವರದಿ ಬಂದು ಅದರಲ್ಲಿ ಯಾರು ಹೆಚ್ಚಿನ ಆಕ್ಷೇಪಣೆಗೆ ಗುರಿಯಾಗಿದ್ದರೋ ಅಂಥವರಿಗೆ ಶಿಕ್ಷೆ ಮಾಡುವುದಕ್ಕೆ ಬದಲಾಗಿ ಅವರನ್ನು ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ಮಾಡಿ ಪ್ರಮೋಷನ್ ಕೊಟ್ಟು ಕೆಲಸ ಮಾಡಿಸಿದರೆ ಕಾರ್ಯದಕ್ಷತೆ ಹೇಗೆ ಉಳಿಯುತ್ತದೆ? ಎಷ್ಟೇ ನಾವು ತಪ್ಪು ಮಾಡಿದರೂ ಕೂಡ ಸರ್ಕಾರದ ದಾಕ್ಷಿಣ್ಯವನ್ನು ಸಂಪಾದನೆ ಮಾಡುವಷ್ಟು ಕೆಲಸ ಮಾಡಿದರೆ ನಮಗೆ ಯಾವ ತೊಂದರೆಯೂ ಆಗುವುದಿಲ್ಲ ಎಂಬ ಧೈರ್ಯ ಅಧಿಕಾರಿಗಳಿಗೆ ಬರಬಾರದು. ನಾನು ಹಿಂದಿನ ಅಧಿವೇಶನದಲ್ಲಿ ಕೇಳಿದಾಗ ಸಂಬಂಧಪಟ್ಟ ಮಂತ್ರಿಗಳು ಯಾರಾರ ಮೇಲೆ ಯಾವ ಯಾವ ಚಾರ್ಜು ಬರುತ್ತದೆ ನೋಡಬೇಕು, ಚೀಫ್ ಇಂಜನಿಯವರಿಗೆ ಬರೆದಿದ್ದೇವೆ ಎಂದು ಹೇಳಿದರು. ಆಮೇಲೆ ಏನಾಯಿತು ಎಂಬುದು ಸಭೆಯ ಗಮನಕ್ಕೆ ಬರಲಿಲ್ಲ. ಈ ಸಭೆಯಿಂದ ಸರ್ಕಾರ ನೇಮಕ ಮಾಡಿದ್ದ ಸಮಿತಿಯ ವರದಿ ಮೇಲೆ ಯಾವ ಕಾರ್ಯಕ್ರಮ ತೆಗೆದುಕೊಂಡರು ಎಂಬುದು ಈ ಸಭೆಗೆ ವರದಿ ಆಗಲಿಲ್ಲ. ಈ ರೀತಿ ಕೆಲಸ ನಡೆದರೆ ಕಾರ್ಯ ದಕ್ಷತೆ ಹೇಗೆ ಉಳಿಯುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು.

ಇನ್ನೊಂದು ವರ್ತಮಾನ ಕೇಳಿದೆ; ಅದು ಎಷ್ಟು ಮಟ್ಟಿಗೆ ನಿಜವೋ, ಸುಳ್ಳೋ ಗೊತ್ತಿಲ್ಲ. ಒಬ್ಬರು ಮಂತ್ರಿಗಳು ಯಾವುದೋ ಒಂದು ಕಳ್ಳತನವನ್ನು ಕಂಡು ಹಿಡಿದರೆ ಇನ್ನೊಬ್ಬ ಮಂತ್ರಿಗಳು ಆ ಕಳ್ಳತನ ನಡೆದಿಲ್ಲ ಎಂದು 'B' ರಿಪೋರ್ಟ್ ತರಿಸಿಕೊಟ್ಟಿದ್ದಾರೆ ಎಂದು ಕೇಳಿದೆ. ಹೀಗೆ ಮಂತ್ರಿಗಳಲ್ಲೇ ಪರಸ್ಪರ ಸೌಹಾರ್ದ ಇಲ್ಲದೇ ಇರುವಾಗ ಇಲಾಖೆಗಳಲ್ಲಿ ಸೌಹಾರ್ದ ಹೇಗೆ ಬರುತ್ತದೆ? ಈ ರೀತಿ ಮೇಲ್‌ಮಟ್ಟದಲ್ಲಿ ಪಾಠ ಹಾಕುತ್ತಾ ಇರುವುದು ನಮಗೆಲ್ಲರಿಗೂ ಕಂಡುಬರುತ್ತಾ ಇದೆ.

ಸ್ವಾಮಿ, ಪಿ. ಡಬ್ಲ್ಯು. ಡಿ. ಮಂತ್ರಿಗಳು ಹಿಂದೆ, ನಾನು ಎಲ್ಲಿ ಹೋದರೂ ಯಾರು ಚನ್ನಾಗಿ ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಾರೆ ಅವರಿಗೆ ಡಬ್ಬಲ್ ಇಂಕ್ರಿಮೆಂಟ್ ಬೇಕಾದರೂ ಕೊಡುತ್ತೇನೆ ಎಂದು ಸಾರುತ್ತಾ ಬಂದರು. ಇದುವರೆಗೂ ಒಬ್ಬರಿಗೂ ಡಬ್ಬಲ್ ಇಂಕ್ರಿಮೆಂಟ್ ಕೊಡಲಿಲ್ಲ ಮತ್ತು ತಪ್ಪು ಮಾಡಿದವರಿಗೆ ಶಿಕ್ಷೆಯನ್ನೂ ಮಾಡಲಿಲ್ಲ. ಈ ರೀತಿ ಸಾಗುತ್ತಾ ಹೋದರೆ ದಕ್ಷತೆ ಯಾವ ಮಟ್ಟಕ್ಕೆ ಇಳಿಯುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಹೀಗೆ ಒಂದಲ್ಲ ಅನೇಕ ಉದಾಹರಣೆ

ಗಳನ್ನು ಕೊಡುತ್ತಾ ಹೋಗಬಹುದು. ಆದರೆ ಇನ್ನೊಂದು ಮುಖ್ಯಮಂತ್ರಿಗಳು ಹೇಳಿರುವುದು ಮಾತ್ರ ಬಹಳ ದೊಡ್ಡ ಮಾತು. ಅದನ್ನು ಅವರು ಆಗ್ಗಾಗ್ಗೆ ಹೇಳುತ್ತಲೇ ಇರುತ್ತಾರೆ. ಪ್ರಕಟಣೆಗಳೂ ಬರುತ್ತಾ ಇರುತ್ತವೆ. ಮಂತ್ರಿಗಳು ಟೂರ್ ಹೋಗ ಬಾರದು ಆದಷ್ಟು ಕಡಿಮೆ ಮಾಡಬೇಕು ಎಂದು ಹೇಳಿ ಮೂರು ತಿಂಗಳಿಗೆ ಒಂದು ಸಾರಿ ಗೆಜೆಟ್‌ನಲ್ಲಿ ಪ್ರಕಟಣೆ ಬರುತ್ತಲೇ ಇರುತ್ತದೆ. ಇದು ಮಾತ್ರ ನಿಲ್ಲುವುದಿಲ್ಲ. ಹೇಳುವುದು ಒಂದು ವಿಧ ಆದರೆ ಮಾಡುವುದು ಇನ್ನೊಂದು ವಿಧ ಆಗುತ್ತಾ ಇರುವಾಗ ಕೆಳ ಅಧಿಕಾರಿಗಳು ಅದರಿಂದ ಪಾಠ ಕಲಿತುಕೊಳ್ಳು ವುದರಲ್ಲಿ ಯಾವ ಅಭ್ಯಂತರವೂ ಇರುವುದಿಲ್ಲ. ಹೀಗಾ ದರೆ ಸರ್ಕಾರದ ಪ್ರಾಮಾಣಿಕತೆಯನ್ನು ಉತ್ತಮಪಡಿ ಸುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನೂ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬಹುದು.

ಸ್ವಾಮಿ, ಸಂಬಳಸಾರಿಗೆ ವಿಷಯದಲ್ಲಿ ನಾನು ನಮ್ಮ ಮುಖ್ಯಮಂತ್ರಿಗಳು ಹೇಳಿರುವುದನ್ನು ಸಂಪೂ ರ್ಣವಾಗಿ ಸ್ವಾಗತಿಸತಕ್ಕವನು.

ಈ ಸಂಬಳ ಸಾರಿಗೆಯನ್ನು ನಿಗದಿ ಮಾಡುವುದಕ್ಕೆ ನೇಮಕವಾದ ಸಮಿತಿಯವರೇ ಒಂದು ವಿಷಯವನ್ನು ಹೇಳಿದ್ದಾರೆ. ಈ ಪ್ರಾಂತಗಳ ಪುನರ್ವಿಂಗಡಣೆ ಯಾಗುವ ಸಂದರ್ಭವಿರುವಾಗ ಯಾವ ಯಾವ ಪ್ರಾಂತಗಳಲ್ಲಿ ಸಂಬಳ ಸಾರಿಗೆಗಳು ಯಾವ ರೀತಿ ಇದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಬೊಂಬಾಯಿನಲ್ಲಿರುವುದಕ್ಕೂ, ಮದರಾಸಿನಲ್ಲಿರುವುದಕ್ಕೂ, ಹೈದರಾಬಾದಿನಲ್ಲಿರುವು ದಕ್ಕೂ ನಾವು ಹೋಲಿಸಿ ನೋಡಿದರೆ ಅವಕ್ಕಿಂತಲೂ ನಾವು ಶಿಫಾರ್ಸು ಮಾಡಿರುವುದು ಬಹಳ ಕಡಿಮೆ ಯಾಗಿದೆ ಎಂದೂ ಹೇಳಿದ್ದಾರೆ. ಈಗ ನಾವು ಆರು ತಿಂಗಳ ಅವಧಿಯಲ್ಲಿ ಸಂಬಳಸಾರಿಗೆಗಳನ್ನು ಜಾಸ್ತಿ ಮಾಡಿದರೂ ಅವರವಟ್ಟಕ್ಕೇನೂ ತರುವುದಿಲ್ಲ. ಈಗ ಸಂಬಳಸಾರಿಗೆಗಳನ್ನು ಬದಲಾಯಿಸಿ, ಮತ್ತೆ ಆರು ತಿಂಗಳನಂತರ ಪುನಃ ಬದಲಾವಣೆ ಮಾಡುವ ಪ್ರಶ್ನೆ ಯನ್ನು ಯೋಚಿಸುವುದಕ್ಕೆ ಬದಲು ಪ್ರಾಂತ ಪುನರ್ವಿಂ ಗಡಣೆ ಆಗುವವರೆಗೂ ಕಾಯುವುದು ಅಗತ್ಯವೆಂದು ಭಾವಿಸುತ್ತೇನೆ. ಆದರೆ ಒಂದು ವಿಷಯವನ್ನು ಮಾತ್ರ ಸರ್ಕಾರದವರು ಚೆನ್ನಾಗಿ ತಿಳಿದುಕೊಳ್ಳಬೇಕು. ಹಿಂದೆ ನಮ್ಮ ರೈಲ್ವೆ ಇಲಾಖೆಯವರು ಕೇಂದ್ರ ರೈಲ್ವೆ ಆಡಳಿ ತಕ್ಕೆ ಸೇರಿದಾಗ ಮೈಸೂರಿನ ಅಧಿಕಾರಿಗಳಿಗೆ ಆದಂತೆ ತೊಂದರೆ ಇವರಿಗೆ ಆಗದೆ ಇರಲಿ. ಅವರಿಗೆ ಬರುತ್ತಿದ್ದಂಥ Status ಮತ್ತು emoluments ಏನಿತ್ತು ಅದನ್ನು ಅವರಿಗೆ ಅಲ್ಲಿ ಕೊಡದೆ ತೊಂದರೆ ಯುಂಟಾಯಿತೆಂದು ಕೇಳಿದ್ದೇನೆ. ಮತ್ತೆ ಇವರಿಗೂ ಆ ರೀತಿಯಾಗದಂತೆ ನೋಡಿಕೊಳ್ಳಬೇಕೆಂದು ಈ ಸಂದ ರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮೈಸೂರು ಸರ್ಕಾರದವರು ಅಧಿಕಾರಿಗಳಿಗೆ ಕೊಡುತ್ತಿದ್ದಂಥ ಅಲೋಯನ್ಸುಗಳನ್ನು ನಿಲ್ಲಿಸಲು ಆಜ್ಞೆ ಮಾಡಿದರು. ಅದು ಇನ್ನೂ ಜಾರಿಯಲ್ಲಿದೆ. ಅನೇಕ ನೌಕರರಿಗೆ ಅಲೋಯನ್ಸ್ ಕೊಡುವುದನ್ನು ನಿಲ್ಲಿಸಿದ್ದಾರೆ. ಆದರೆ ಅದು ಮತ್ತೆ ಷುರುವಾಗು ತ್ತಿದೆ. ಯಾರಾರಿಗೆ ಶಿಫಾರ್ಸು ಬರುತ್ತಿದೆಯೋ ಅಂಥವರಿಗೆಲ್ಲ ಮೂಲ ಉದ್ದೇಶವನ್ನು ಮರೆತು ಪುನಃ ಪರಿಶೀಲನೆ ಮಾಡಿ ಕೆಲವರಿಗೆ ಕೊಡುತ್ತ ಬಂದರು. ಗೃಹಮಂತ್ರಿಗಳ ಆಫೀಸಿನಿಂದ ಒಂದು ಶಿಫಾರ್ಸು ಬಂದು ಅಲ್ಲಿ ಈ ರೀತಿ ಅಂದರೆ "Rationalisation of allowances drop ಮಾಡಿದ್ದಾರೆ ಸರ್ಕಾರದ ದರು ; ಆದುದರಿಂದ ಇಲ್ಲಿನ ಸಿಬ್ಬಂದಿಗೆ allowances ಕೊಡಬಹುದು" ಎಂದು ಒಂದು ನೋಟ್ ಹಾಕಿದರು. ಅದು ಮುಖ್ಯಮಂತ್ರಿಗಳಿಗೆ ಹೋಯಿತು. ಅದರ ಮೇಲೆ "ಹೋಂ ಮಂತ್ರಿಗಳು ಅವರ ಜೊತೆಯಲ್ಲಿ ಮಾತ ನಾಡಬೇಕು" ಎಂದು ಮುಖ್ಯಮಂತ್ರಿಗಳು ಬರೆದರು. —ಇದು ನಡೆದದ್ದು ಸುಮಾರು 1952ನೆ ಇಸವಿಯಲ್ಲಿ— ಮತ್ತೆ ಇದನ್ನು ಕೊಡಬಹುದು ಎಂದು ತೀರ್ಮಾನ ಮಾಡಿದರು. ತೀರ್ಮಾನವಾಗಿ ಅಕೌಂಟೆಂಟ್ ಜನರಲ್ ಆಫೀಸಿಗೆ ಹೋದಾಗ "ಈ ಅಲೋಯನ್ಸು ಕೊಡುವು ದಕ್ಕೆ ಕಾರಣವೇನು ? ಹಿಂದಿನ ಸರ್ಕಾರಿ ಆಜ್ಞೆಗೆ ವಿರೋಧವಾಗಿ ಮಂಜೂರು ಮಾಡಲು ಕಾರಣವೇನು ? ಇದನ್ನೆಲ್ಲ ತಿಳಿಸಬೇಕು" ಎಂದು ಅಕೌಂಟೆಂಟ್ ಜನ ರಲ್‌ರವರು ಸರ್ಕಾರಕ್ಕೆ ಬರೆದರು. ಅದು ಸುಮಾರು 1953ನೆ ಇಸವಿ ಫೆಬ್ರವರಿಯಲ್ಲಿ ಬಂತು. 1953ನೆಯ ಇಸವಿಯಲ್ಲಿ ಬಂದರೆ ಆ ಕಾಗದಕ್ಕೆ ಉತ್ತರವನ್ನು ಬರೆಯಲಿಲ್ಲ. ಅಲೋಯನ್ಸ್ ಮಾತ್ರ ಕೊಟ್ಟುಬಿಟ್ಟರು. ಅದನ್ನು ಡ್ರಾ ಮಾಡುತ್ತಿದ್ದಾರೆ. ಮಂತ್ರಿಗಳ ಸಿಬ್ಬಂದಿಗೆ ಮೊದಲೇ ತಲೆ ಒಂದಕ್ಕೆ 35 ರೂಪಾಯಿ ಅಲೋಯನ್ಸ್ ಅದರ ಜೊತೆಗೆ ಇವರ ಶಿಫಾರ್ಸು ಮಾಡಿದ ಅಲೋಯನ್ಸ್ ಒಬ್ಬರಿಗೆ 15 ರೂಪಾಯಿ, ಇಬ್ಬರಿಗೆ ತಲಾ 10 ರೂಪಾಯಿ, ಇನ್ನೊಬ್ಬರಿಗೆ ಐದು ರೂಪಾಯಿ. ಈ ಅಲೋಯನ್ಸನ್ನು ಏತಕ್ಕೋಸ್ಕರ ಕೊಟ್ಟಿದ್ದೀರಿ ಎಂಬ ಅಕೌಂಟೆಂಟ್ ಜನರಲ್‌ರಿಂದ observation ಬಂದರೂ ಕೂಡ ಅವರಿಗೆ ಜವಾಬು ಕೊಡದೆ allowance draw ಮಾಡುತ್ತಿದ್ದಾರೆ. ಇದರ ಜೊತೆಗೆ ಇನ್ನೂ ಒಂದು allowance ಕೊಡ ಬೇಕು ಎಂದು ಮತ್ತೆ ಶಿಫಾರ್ಸು ಆಯಿತು. ಇದು ಮೂರನೆಯ allowance. ಈ ಶಿಫಾರ್ಸು ಹೋದಾಗ ಮುಖ್ಯಮಂತ್ರಿಗಳು ಏನು ಬರೆದರು ಅಂದರೆ, 'ಹಿಂದೆ Iron Works ಕೆಲಸ ಮಾಡುವುದಕ್ಕೆ ಕೊಟ್ಟ allowance ವಜಾ ಮಾಡಬೇಕು ಎನ್ನಿಸು ತ್ತದೆ. ಆ ಫೈಲನ್ನು ಮುಂದೆ ಇಡಿ' ಎಂದು ಬರೆದರು. ಹಾಗೆ ಬರೆದರೆ ಗೃಹಮಂತ್ರಿಗಳು ಬಹಳ ದಿವಸ ತಮ್ಮಲ್ಲೇ ಇಟ್ಟಿದ್ದು ಅದರ ಮೇಲೆ "file" ಎಂದು ಬರೆದರು. ಈ ರೀತಿಯಾಗಿ ಒಂದು ಕಡೆ ಎರಡು ಮೂರು allowance ಮತ್ತೊಂದು ಕಡೆ allowances rationalise ಮಾಡುತ್ತೇವೆ ಎಂದು ವಜಾಮಾಡಿರುವುದು ಹೀಗಾಗಿದೆ. ಹೀಗೆ allowances ತೆಗೆದುಕೊಳ್ಳತಕ್ಕ ಅಧಿಕಾರಿಗಳು, ಇದ್ದಂಥ allowances ಕಳೆದುಕೊಂಡಿರತಕ್ಕವರು ಒಂದೇ ಸರ್ಕಾರದಲ್ಲಿ ಇರುವಾಗ, ಸಮರ್ಪಕವಾಗಿ, ನ್ಯಾಯ ವಾಗಿ, ಸತ್ಯವಾಗಿ ಕೆಲಸ ಮಾಡಬೇಕು ಎಂದರೆ ಯಾರುತಾನೇ ಮಾಡುತ್ತಾರೆ !

ಸರ್ಕಾರ ನಡೆಸುವವರು ಬಾಯಲ್ಲಿ ಮಾತ್ರ ಕಾರ್ಯದಕ್ಷತೆ, ಸೇವಾನಿಷ್ಠೆ, ಪ್ರಾಮಾಣಿಕತೆ, ಮುಂತಾದ ದೊಡ್ಡ ದೊಡ್ಡ ಪದಗಳನ್ನು ಹೇಳಿ ಕೆಳ ದರ್ಜೆ ನೌಕರರಿಗೆ ನಿಮಗೆ ಹೀಗೆ ಮಾಡುತ್ತೇವೆ ಹಾಗೆ ಮಾಡುತ್ತೇವೆ ಎಂದು ಹೇಳುವುದನ್ನಾದರೂ ನಿಲ್ಲಿಸ ಬೇಕು. ಇಲ್ಲದಿದ್ದರೆ ಹೇಳಿದ ರೀತಿಯಲ್ಲಿ ಕೆಲಸಮಾಡ ಬೇಕು. ಇಷ್ಟಾದರೂ ಮಾಡದೆ ಹೋದರೆ ಕಾಂಗ್ರೆಸ್ ಸಂಸ್ಥೆಯಿಂದ ರಚಿತವಾಗಿರುವ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಈ ಪಕ್ಷಕ್ಕೆ ಇರುವ ಮಾನ್ಯತೆ ಉಳಿಯು ವುದಿಲ್ಲ. ದೇಶದ ಮುಂದೆ ಜನ ಆಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ಅವಕಾಶವನ್ನು ಕೊಡಬಾರದು ಎಂದು ಒತ್ತಾಯ ಪೂರ್ವಕವಾಗಿ ಈ ಸರ್ಕಾರಕ್ಕೆ ತಿಳಿಸಬೇಕೆಂದು ಇಷ್ಟಪಡುತ್ತೇನೆ.

ಇನ್ನೂ ಕೆಲವು ಇಲಾಖೆಗಳಿವೆ–ಅವುಗಳ ವಿಷಯದಲ್ಲಿ ಬೇರೆ ಸಂದರ್ಭದಲ್ಲಿ ಹೇಳುತ್ತೇನೆ.

ಒಬ್ಬ ಸದಸ್ಯರು.—ತಾವು ಹೇಳಿದ ವಿಷಯಗಳನ್ನೆಲ್ಲ ಹೇಗೆ ತಿಳಿದುಕೊಂಡಿರಿ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸರ್ಕಾರದಲ್ಲಿ ಹೀಗೆಲ್ಲ ಮಾಡುವುದನ್ನು ತಿಳಿದುಕೊಳ್ಳುವುದಕ್ಕೆ ನಾನಾ ವಿಧಗಳಿವೆ.

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಇದರಿಂದ ಎಷ್ಟರಮಟ್ಟಿಗೆ administration ಬಗಿಯಾಗಿದೆ ಎಂಬುದು ವ್ಯಕ್ತವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದು ಹಿಂದಿನಿಂದಲೂ ನಡೆದುಕೊಂಡುಬಂದಿದೆ. ಆದುದರಿಂದಲೇ ಒಳಗೆ ನಡೆಯುವ ಅಕ್ರಮಗಳು, 'ಕುಂಭಕೋಣ' ಜನ ಸಾಮಾನ್ಯರಿಗೆ ಗೊತ್ತಾಗುವುದಕ್ಕೆ ಅವಕಾಶವಿದೆ. ಮತ್ತು ಸರ್ಕಾರದ ವಿಚಾರದಲ್ಲಿ ಆಡಿಕೊಳ್ಳುವುದಕ್ಕೆ ಅವಕಾಶವಿದೆ.

ಒಬ್ಬ ಸದಸ್ಯರು.—'ಕುಂಭಕೋಣ' ಅಂದರೆ ಏನು ಎಂಬುದನ್ನು ವಿವರಿಸುತ್ತೀರಾ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—'ಕುಂಭಕೋಣ' ಎನ್ನುವುದನ್ನು ಇಂಗ್ಲೆಂಡಿನಲ್ಲಿ ಕೂಡ ಒಪ್ಪಿಕೊಂಡು ತಮ್ಮ dictionaryಗೆ ಸೇರಿಸಿದ್ದಾರಂತೆ. ಅದನ್ನು ತಾವೇ ತಿಳಿದುಕೊಳ್ಳಬಹುದು.

ಸರ್ಕಾರದಲ್ಲಿರತಕ್ಕ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಸಮಸ್ತ ಪ್ರಯತ್ನವನ್ನೂ ಸರ್ಕಾರದವರು ಮಾಡಬೇಕು ಎಂದು ಸೂಚಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ. ಮುಖ್ಯವಾಗಿ ಸರ್ಕಾರ,—ಯಾವುದೇ ಸರ್ಕಾರವಾಗಲಿ—ಒಂದು ನೀತಿ ನಿಯಮಕ್ಕೆ ಒಳಪಟ್ಟಿರಬೇಕು, ಅವರ ಕಾರ್ಯದಕ್ಷತೆ ಹೆಚ್ಚಬೇಕು ಮತ್ತು ಈಗ ನಮ್ಮ ಮಾನ್ಯ ಸದಸ್ಯರೆಲ್ಲರೂ ಹೇಳಿದಂತೆ 'ನುಡಿದಂತೆ ನಡೆಯಬೇಕು' ಯಾವ ತತ್ವವನ್ನು ಸಾರಿದ್ದೇವೆಯೋ ಅದರಂತೆ ನಡೆದುಕೊಳ್ಳಬೇಕು ಎಂದು ಪ್ರತಿಯೊಬ್ಬರೂ ಸಹ ಇದುವರೆಗೂ ಹೇಳಿದ್ದಾರೆ. ಅಂತೆಯೇ ಈ ಮಾನ್ಯ ಸಭೆಯ ಸದಸ್ಯರೂ ಕೂಡ ಆಡಿದಂತೆ ನಡೆಯಬೇಕು. ಹಾಗಿಲ್ಲದೆ ಹೋದರೆ ಆ ಉದ್ದೇಶ ಖಂಡಿತವಾಗಿಯೂ ಸಾರ್ಥಕವಾಗುವುದಿಲ್ಲ. ಯಾವರೀತಿ ಈ ಸರ್ಕಾರ ನಮ್ಮ ವಿಶ್ವಾಸಕ್ಕೆ ಪಾತ್ರವಾಗಿಲ್ಲ; ಅದು ಮಾಡಬಾರದ ಕೆಲಸ ಮಾಡುತ್ತಿದೆ; ಯಾವೊಂದು ತತ್ವಕ್ಕೂ ಒಳಪಟ್ಟಿಲ್ಲ; ಪ್ರತಿಯೊಂದರಲ್ಲೂ ಕೂಡ ಒಂದು ರೀತಿಯನ್ನು ಹಾಕಿ ಅದಕ್ಕೆ ವಿರೋಧವಾಗಿ ನಡೆದುಕೊಳ್ಳುತ್ತಿದೆ; ಎಂದು ಅಂಕಿಅಂಶಗಳ ಸಮೇತ ಈಗಾಗಲೇ ಮಾನ್ಯ ಸದಸ್ಯರನೇಕರು, ಆಡಳಿತದ ಪಕ್ಷಕ್ಕೆ ಸೇರಿದವರು, ಅಪಾದನೆಮಾಡಿದ್ದಾರೆ. ಹಾಗೆ ಹೇಳಿದವರು ಕೊನೆಯವರೆಗೂಕೂಡ ಅದೇ ರೀತಿ ಇರಬೇಕು. ತಮ್ಮ ಸಂಸ್ಥೆಗೆ ಒಳ್ಳೆಯ ಹೆಸರು ತರಬೇಕು, ಮತ್ತು ದೇಶ ಕೂಡ ಉದ್ಧಾರವಾಗಬೇಕು ಎಂದು ಹೇಳುತ್ತ ಇರುವವರು ಕೊನೆಯವರೆಗೂ ಸಾಧಿಸಿ ಸರ್ಕಾರವನ್ನು ದಾರಿಗೆ ತರಬೇಕು ಮತ್ತು ಸರ್ಕಾರವನ್ನು ತಿದ್ದಬೇಕು ಎಂಬ ಅಭಿಪ್ರಾಯವಿದ್ದರೆ, ಹಾಗೆ ತಿದ್ದುವುದಕ್ಕೆ ಸಾಧ್ಯವಿಲ್ಲದೆ ಹೋದರೆ, ಸರ್ಕಾರವನ್ನೇ ತೆಗೆಯಬೇಕು ಎಂದು ಮನಸ್ಸಿನಲ್ಲಿದ್ದರೆ ಅವರೂ ಕೂಡ ನುಡಿದಂತೆ ನಡೆಯಬೇಕು. ಇಲ್ಲದೆ ಇದ್ದರೆ ಅವರಿಗೆ ಆ ರೀತಿಯಾಗಿ ಹೇಳುವ ಹಕ್ಕೂ ಇಲ್ಲ ಮತ್ತು ಅದು ನ್ಯಾಯವಾದದ್ದಲ್ಲ. ಈ ರೀತಿ ಯಾವ ಯಾವ ವಿಚಾರಗಳಲ್ಲಿ ಲೋಪ ದೋಷಗಳನ್ನು ಎತ್ತಿತೋರಿಸಿದರೋ ಆ ಲೋಪ ದೋಷಗಳನ್ನು ಸರಿಪಡಿಸಬೇಕಾದದ್ದು ಪ್ರಜಾಪ್ರಭುತ್ವದ ಆಡಳಿತದ ಕರ್ತವ್ಯ. ಆಡಳಿತ ಪಕ್ಷದಲ್ಲಿರತಕ್ಕವರು ನೂರಾರು ಖೋತಾ ಸೂಚನೆಗಳನ್ನು (Cut motions) ಕಳುಹಿಸಿ ಅವುಗಳಲ್ಲಿ ಒಂದಕ್ಕೂ ಕೂಡ ಸರಿಯಾದ ದಾರಿಯನ್ನು ತೋರಿಸದೆ ಇದ್ದರೆ ಅವರೂ ಸಹ ಈ ಡಿಮ್ಯಾಂಡಿಗೆ ಓಟುಮಾಡತಕ್ಕದ್ದು ಅವರ ಧರ್ಮಕ್ಕೆ ಸರಿಯಾದದ್ದಲ್ಲ. ಮತ್ತು ಅವರು ಯಾವ ಕ್ಷೇತ್ರದ, ಜನಗಳ ಪರವಾಗಿ ಚುನಾಯಿತರಾಗಿ ಬಂದಿದ್ದಾರೆಯೋ ಅವರ ಇಷ್ಟವನ್ನು ನೆರವೇರಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಮೊದಲನೆಯದಾಗಿ ಈ ಸರ್ಕಾರ ಬಂದಮೇಲೆ ಆಫೀಸರುಗಳಿಗೆ ಎಕ್ಸ್‌ಟೆನ್‌ಷನ್ ಕೊಡುವ ವಿಚಾರದಲ್ಲಿ ಯಾರಿಗೂ ಕೊಡುವುದಿಲ್ಲವೆಂದರು. ಹೀಗೆ ಹೇಳಿದಾಗ ಇದೇ ತತ್ವವನ್ನು ಅವರು ಅನುಸರಿಸಬೇಕಾಗಿತ್ತು. ಆದರೆ ಇಷ್ಟಬಂದವರಿಗೆ ಕೊಟ್ಟಿದ್ದಾರೆ. ಹಾಗೆಯೇ ಇತರ ವಿಚಾರಗಳಲ್ಲಿಯೂ ಮಾಡಿದ್ದಾರೆ. ಎಕ್‌ಟೆನ್‌ಷನ್ ಕೊಡುವುದಿಲ್ಲವೆಂದರೆ ಆ ವಿಚಾರದಲ್ಲಿ ಒಂದು ನಿರ್ಧಾರವೇ ಇಲ್ಲ. ಆದರೆ ಯಾರು ಯಾರಿಗೆ ಕುಂಭಕೋಣ ಮಾಡುವುದಕ್ಕೆ ಸಾಧ್ಯ ಅವರಿಗೆಲ್ಲ ಎಕ್ಸ್‌ಟೆನ್‌ಷನ್. ಕೆಲವರ ವಿಷಯದಲ್ಲಿ ಒಂದೆರಡು ಎಕ್ಸ್‌ಟೆನ್‌ಷನ್ ಸಹ ಕೊಟ್ಟಿದ್ದಾರೆ. ಕೆಲವರಿಗೆ ಎಕ್ಸ್‌ಟೆನ್‌ಷನ್, ಕೆಲವರಿಗೆ re-appointment, ಅಥವಾ ಇನ್ನೊಂದು ಈ ರೀತಿಯಾಗಿ ಕೊಡುವುದು ಸಾಮಾನ್ಯವಾಗಿದೆ.

ಇನ್ನೊಂದು. ಫಾರಿನ್ ಸ್ಕಾಲರ್‌ಷಿಪ್ ಕೊಡಬೇಕಾದರೆ ಅದಕ್ಕೆ ಒಂದು ನೀತಿ, ನಿಯಮ ಇರಬೇಕು. ಇದಕ್ಕೆ ಒಂದು ಸಮಿತಿ ಮಾಡಿದ್ದೇವೆ, ಅದರ ಸಲಹೆಯಂತೆ ನಡೆಯುತ್ತಿದೆ ಎಂದು ಹೇಳಬಹುದು. ಆದರೆ ಎರಡು ವರ್ಷಗಳಾದರೂ ಆ ಸಮಿತಿ ಸೇರುವುದಿಲ್ಲ, ಅದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಶಿಫಾರ್ಸಿನಿಂದ ಇನ್ನೊಂದು ವರ್ಷಕ್ಕೆ ರಿಟೈರ್ ಆಗುವವರನ್ನೂ ಸಹ ಫಾರಿನ್‌ಗೆ ಕಳುಹಿಸಿರುವುದುಂಟು. ಹಾಗೆ ಯಾರಾದರೂ ಶಿಫಾರ್ಸು ತರದಿದ್ದರೆ ಅವರ ಕೇಸ್ ಕೆಟ್ಟುಹೋಗುತ್ತದೆ ಎಂಬ ಭಾವನೆ ಬರುವ ಹಾಗೆ ಮಾಡುತ್ತಿದ್ದಾರೆ.

Sri T. MARIAPPA.—My Hon'ble friend forgets that it would have been more effective if he had disclosed the name of such persons. He has got as much right to criticise the Government as any other member here. But, it is better if he discloses the name so that the House may know what it is.

Sri B. HUTCHE GOWDA.—It is not my intension to disclose it at this stage, Sir.

Sri A. G. RAMACHANDRA RAO (Minister for Law and Education).—When the Hon'ble Member gives the name then we will reply to the point. Anyway, such cases have not come to our notice.

ಶ್ರೀ ಬಿ. ಹುಚ್ಚೇಗೌಡ.—ಮೆಡಿಕಲ್ ಇಲಾಖೆಯಲ್ಲಿ ಮಾತ್ರವಲ್ಲದೆ ಇಂಡಸ್ಟ್ರಿಯಲ್ ಇಲಾಖೆಯಲ್ಲೂ ಮೂರು ತಿಂಗಳಲ್ಲಿ ರಿಟೈರ್ ಆಗಲಿರುವವರನ್ನು ಜಪಾನಿಗೆ ಕಳುಹಿಸಿದ್ದಾರೆ. ಹೀಗಾದರೆ ಆಡಳಿತ ದಕ್ಷತೆ ಹೇಗೆ ಬರುತ್ತದೆ? ಅದು ಬರಬೇಕಾದರೆ ಹೇಗೆ ಮಾಡಬೇಕೆಂಬ ಬಗ್ಗೆ ಶ್ರೀ ಹುಚ್ಚಮಾಸ್ತಿಗೌಡರು ಕೆಲವು ವಿಚಾರ ಹೇಳಿದರು. ಶಿಫಾರ್ಸು ಮಾಡುವಾಗ

ಕರಪ್ಟ್ ಆಗಿರುವವನಿಗೆ, ಶಿಕ್ಷೆಯಾಗಿರುವವನಿಗೆ ಶಿಫಾರ್ಸುಮಾಡಿರುವ ಪ್ರಸಂಗಗಳನ್ನು ಅನೇಕವಾಗಿ ಮಂತ್ರಿಗಳಿಗೂ ಕೂಡ ಕೆಲವು ವೇಳೆ ತಿಳಿಸಿದ್ದೇವೆ. ರೆವೆನ್ಯೂ ಇಲಾಖೆಯಲ್ಲಿ ಲೋಪದೋಷಗಳಿವೆಯೆಂದು ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಮಂತ್ರಿಗಳ ದಕ್ಷತೆ ವಿಚಾರವನ್ನು ಹೋದ ವರ್ಷ ಈ ಸಭೆ ಗಮನಕ್ಕೆ ತಂದಿದೆ ; ಒಂದೇ ಒಂದು ಉದಾಹರಣೆ ಕೊಡುವುದಾದರೆ, ಸುಮಾರು $1\frac{1}{2}$ ಲಕ್ಷ ಎಕರೆಗಳನ್ನು ಮೂರು ವರ್ಷಗಳಲ್ಲಿ ಕೊಟ್ಟಿದೆಯೆಂದು ಹೇಳಿದರು. ಹತ್ತು ವರ್ಷದ ಹಿಂದೆ ಜಮೀನು ಕೊಡಬೇಕಾದರೆ ಒಂದು ದರ ನಿಗದಿ ಮಾಡಿಕೊಟ್ಟರು. ಈ ದಿವಸ ಅವರು ಸಾವಿರಾರು ರೂಪಾಯಿ ಖರ್ಚುಮಾಡಿ ಆಬಾದು ಮಾಡಿರುವಾಗ ಅವರಿಗೆ ಬೇರೆ ದರ ಹಾಕಿದ್ದಾರೆ. ಇದನ್ನು ಗಮನಕ್ಕೆ ತಂದಿದೆ. ಏನೂ ಹೆಚ್ಚು ಕಡಮೆ ಮಾಡಬಾರದು ಸಾಗುವಳಿ ಚೀಟಿಯಲ್ಲಿರುವ ದರ ಹಾಕಬೇಕೆಂದು ಹೇಳಿದೆ. ಅದನ್ನು ಜಾರಿಗೆ ತರದೆ ಎಕರೆಗೆ ಒಂದು ತಾಲ್ಲೂಕಿನಲ್ಲಿ 75 ರೂಪಾಯಿ ಹಾಕಿ ಇನ್ನೊಂದು ತಾಲ್ಲೂಕಿನಲ್ಲಿ 15 ರೂಪಾಯಿ ಹಾಕಿರುತ್ತಾರೆ. ತಿಪಟೂರು ತಾಲ್ಲೂಕಿಗೇ ಒಂದು ದರ ಅದರ ಪಕ್ಕದ ತುರುವೇಕೆರೆ ತಾಲ್ಲೂಕಿಗೇ ಒಂದು ದರ. ಜಮೀನು, ಸ್ಥಳ ಅಜಮಾಯಿಷಿ ಮಾಡಿ ರೆವಿನ್ಯೂ ಕಮೀಷನರು ವಗೈರೆಯವರು ಸರಿಯಾಗಿ ದರ ನಿಗದಿ ಮಾಡುತ್ತಿಲ್ಲ. ಮತ್ತೆ ಇದೇ ಸಭೆಯಲ್ಲಿ ಖೋತಾ ಸೂಚನೆ ತಂದಾಗ ಕಡ್ಡಾಯವಿಲ್ಲವೆಂದು ಹೇಳಿದೆ, ಅದರಂತೆ ಜಾರಿಗೆ ಬರುತ್ತಿದೆಯೆಂದು ಮಂತ್ರಿಗಳ ಹೇಳಿದರು, ಮುಂದಿನ ಸಲ ನಾವು ಹಿಂದೆ ನಿಗದಿ ಮಾಡಿರುವ ದರದಲ್ಲಿ ಸೇಕಡ 50 ಕಡಮೆ ಮಾಡುತ್ತೇನೆಂದು ಮಂತ್ರಿಗಳು ಹೇಳಿದರು. ಆದರೆ ತುರುವೇಕೆರೆ ತಾಲ್ಲೂಕಿನಲ್ಲಿ $37\frac{1}{2}$ ರೂಪಾಯಿಗಳಿದ್ದರೆ ಪಕ್ಕದ ತಾಲ್ಲೂಕುಗಳಾದ ಗುಬ್ಬಿ, ಚಿಕ್ಕನಾಯಕನಹಳ್ಳಿಗಳಲ್ಲಿ $7\frac{1}{2}$ ರೂಪಾಯಿಗಳಿಗೆ ಸಿಕ್ಕುತ್ತಿದೆ. ಸರ್ಕಾರಿ ಆರ್ಡರಿನ ಸ್ಪಿರಿಟ್ಟಿಗೇ ವಿರೋಧವಾಗಿ ನಡೆದುಕೊಳ್ಳುತ್ತಿದ್ದಾರೆ. ಇದನ್ನು ಕಂಟ್ರೋಲ್ ಮಾಡುವುದಕ್ಕೆ ಸರ್ಕಾರಕ್ಕೆ ದಕ್ಷತೆಯಿಲ್ಲ. ಹೀಗೆ ಬೇಕಾದಷ್ಟು ಹೇಳಬಹುದು. ಕರಪ್ಟ್ ಎಂದು ತಿಳಿದರೂ ಶಿಫಾರ್ಸಿನ ಮೇಲೆ ಬಿಡುಗಡೆಯಾಗಿದೆ. ತುಪ್ಪದಹಳ್ಳಿ ಮತ್ತು ಸಂಗೇನಹಳ್ಳಿ ಕೆರೆಗಳ ವಿಚಾರ ಏನಾಯಿತು ಎಂಬುದನ್ನು ಇದುವರೆಗೂ ಈ ಸಭೆ ಗಮನಕ್ಕೆ ತಂದಿಲ್ಲ. ಅನೇಕಸಲ ಸಮಿತಿಯಾಗಿ ವರದಿ ಬಂದರೂ ಏನೂ ಮಾಡಿಲ್ಲ.

ಆಮೇಲೆ ಪಂಚಾಯಿತಿ ವಿಚಾರ. ಅಮಲ್ದಾರರ ಕೈಲ ಕೆಲಸ ಮಾಡಿಸುತ್ತೇವೆ, ವಸೂಲು ಮಾಡುತ್ತಿದ್ದೇವೆ ಮತ್ತು ಸೆಕ್ರೆಟರಿ ಕೂಡ ನೇಮಕ ಮಾಡುತ್ತೇವೆ ಎಂದು ಹೇಳಿದರು. ಹಿಂದೆ ಗ್ರೂಪ್ ಇದ್ದಾಗಲೇ ಈ ಕೆಲಸ ನಡೆಯಲಿಲ್ಲ. ಈಗ ಒಂದು ಪಂಚಾಯಿತಿಗೆ 25 ರೂಪಾಯಿಗಳ ಉತ್ಪತ್ತಿಯಿದ್ದರೆ ಅದಕ್ಕೊಬ್ಬ ಪಂಚಾಯಿತಿ ಸೆಕ್ರೆಟರಿ ನೇಮಿಸುತ್ತೇನೆಂದರೆ ಹೇಗೆ? ಹೋದ ಅಸೆಂಬ್ಲಿಯಲ್ಲಿ ನಿದರ್ಶನವಾಗಿ ಚೆಳ್ಳಕೆರೆ ವಿಚಾರ ಮತ್ತು ಇತರ ವಿಚಾರ ಹೇಳಿದೆ. ಅಮಲ್ದಾರರು ಪಂಚಾಯಿತಿ ಅಭಿಪ್ರಾಯಕ್ಕೆ, ನಿರ್ಣಯಕ್ಕೆ ವಿರೋಧವಾಗಿ ಹಣ ಡ್ರಾ ಮಾಡಿ ಖರ್ಚುಮಾಡುತ್ತಿದ್ದಾರೆ ; ನ್ಯಾಯವಿಲ್ಲ, ಕಾನೂನು ಇಲ್ಲ, ಏನೂ ಇಲ್ಲ. ಪಂಚಾಯಿತಿಗೆ ಕೊಡುವ ಹಣ ಶೇಕಡ $12\frac{1}{2}$ ಯೆಂದು ನಿಗದಿಯಾಗಿದ್ದರೂ ಮನಸ್ಸಿಗೆ ತೋರಿದಷ್ಟು ಕೊಡುತ್ತಿದ್ದಾರೆ. ಇದನ್ನು ಸ್ಥಳೀಯ ಸಂಸ್ಥೆ ಸಚಿವರಿಗೆ ಎಷ್ಟೋ ವಿಧವಾಗಿ ಹೇಳಿದ್ದೇವೆ. ಭಾವಿಗಳಿಗೆ, ಕೆರೆಗಳಿಗೆ ಕೊಟ್ಟಿವೆ ಎಂದು ಹೇಳುತ್ತಾರೆ, ಹಣ ವಿಲೆಮಾಡುವುದಕ್ಕೆ ಸರ್ಕಾರಕ್ಕೆ ಯಾವ ಅಧಿಕಾರವಿದೆಯೆಂದು ಪ್ರಶ್ನೆಮಾಡಿದರೆ ಅದಕ್ಕೆ ಗಮನ ಕೊಡುತ್ತಿಲ್ಲ.

ಆಮೇಲೆ ಅಮಲ್ದಾರರಿಗೆ ಸರ್ವೆ ಟ್ರೈನಿಂಗ್ ಕೊಟ್ಟಿದೆ ಎಂದು ಹೇಳಿದರು. ಹಾಗಿದ್ದರೂ ಸರಿಯಾಗಿ ಕೆಲಸವಾಗುತ್ತಿಲ್ಲ. ಹತ್ತು ವರ್ಷಗಳಾದರೂ ಜಮೀನು ಮೂರು ನಾಲ್ಕು ಸಲ ಬದಲಾವಣೆಯಾದಾಗ ಒಂದೊಂದು ಸಲಕ್ಕೂ ಮೂರು ಮೂರು ರೂಪಾಯಿ ಕೊಟ್ಟರೂ ರಿಕಾರ್ಡ್ ಆಫ್ ರೈಟ್ಸ್ ಆಗಿಲ್ಲ, ಆಗಿದೆಯೆಂದು ಹೇಳಿವರೆ ಒಪ್ಪಿಕೊಳ್ಳಬಹುದು. ದಕ್ಷತೆಯಿದೆಯೇ, ಇಲ್ಲವೇ ಎಂಬುದಕ್ಕೆ ಇದೇ ಉದಾಹರಣೆ.

ಟೂರ್ ಮಾಡುವ ವಿಷಯದಲ್ಲಿ ಒಂದು ಆರ್ಡರಾಗಿದೆ. ಒಬ್ಬ ಮಂತ್ರಿಗಳು ಒಂದು ಡಿಸ್ಟ್ರಿಕ್ಟಿಗೆ ಒಂದು ತಿಂಗಳಲ್ಲಿ ಒಂದು ಸಲ ಒಬ್ಬರೇ ಹೋಗಬೇಕು. ಈಗ ಆಗುತ್ತಿರುವುದು ಒಬ್ಬರಲ್ಲದೆ ನಾಲ್ಕು ಮಂತ್ರಿಗಳೂ ಒಂದೇ ಸಲ ಹೊಗುತ್ತಾರೆ, ಒಂದೇ ದಿವಸದಲ್ಲಿ ಹೋಗುತ್ತಾರೆ. ಇದರಿಂದ ಅಧಿಕಾರಿಗಳಿಗೆ ಕಷ್ಟ. ಟೂರ್ ಮಾಡಬೇಡಿ ಎಂದು ಹೇಳುವುದಿಲ್ಲ. ಟೂರ್ ಮಾಡಬೇಕಾದರೆ ಸಾಕಾದಷ್ಟು ಕೆಲಸ ಮಾಡಬೇಡವೆ? ಒಬ್ಬ ಮಂತ್ರಿಗಳು ಹೋದರೆ ಸಾಲದೆ? ಅವರೇ ಎಲ್ಲವನ್ನೂ ನೋಡಬಾರದೆ? ಹೋಗಿ ಸ್ಥಳದಲ್ಲಿ ಕ್ಯಾಂಪು ಮಾಡಿ ಅಹವಾಲು ಕೇಳಬೇಕಾದ ಆವಶ್ಯಕತೆಯಿಲ್ಲವೇ? ಈಗಿನ ಕಾಲದ ಜಮಾಬಂದಿ ಮಾಡಿದ ಹಾಗೆ ರಾತ್ರಿ 12 ಗಂಟೆಗೆ ಹೋಗಿ ಸ್ಕೈನು ಮಾಡಿ ಹೋದರೆ ಹೇಗೆ? ತಕರಾರು ತಃಖ್ತೆ ಎಷ್ಟಿದೆ, ಸ್ಪಾಟ್ ಇನ್ಸ್ಪೆಕ್ಷನ್ ಮಾಡಿದ್ದಾರೆಯೆ ಎಂದು ಲಿಸ್ಟ್ ತರಿಸಿಕೊಂಡು ನೋಡಿ ಸೂಕ್ತ ಕ್ರಮ ಕೈಗೊಳ್ಳಬೇಡವೆ? ಇದೇ ರೀತಿ ಮೈನರ್ ಕೆರೆ ವಿಚಾರ. ಪ್ರತಿಯೊಂದು ಕೆರೆಯನ್ನೂ ಕೂಡ ಒಬ್ಬ ಅಸಿಸ್ಟೆಂಟ್ ಇಂಜನಿಯರಾದರೂ ವರ್ಷಕ್ಕೊಂದು ಸಲವಾದರೂ ಇನ್ಸ್ಪೆಕ್ಟ್ ಮಾಡಬೇಕೆಂದು ಹೇಳಿದರೂ ಅದನ್ನು ಇನ್ಸಿಸ್ಟ್ ಮಾಡುತ್ತಿಲ್ಲ. ಇದು ಈ ಸರ್ಕಾರದ ಅದಕ್ಷತೆಯನ್ನು ಸೂಚಿಸುತ್ತದೆ. ಎಳ್ಳಷ್ಟೂ ನಡೆಯುತ್ತಿಲ್ಲ, ಮಾಡಬೇಕೆಂದಿದ್ದರೂ ಯಾರ ಪ್ರಭಾವದಿಂದಲೋ ಏನೋ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದನ್ನು ಹೆಚ್ಚಾಗಿ ಎಲ್ಲ ಸ್ನೇಹಿತರೂ ಹೇಳುತ್ತಿದ್ದಾರೆ; ಮತ್ತೊಂದು ಸಾರಿ ನಾನು ಒತ್ತಾಯ ಮಾಡಿ ಹೇಳುತ್ತೇನೆ.

1 P.M.

ನಾನು ಹೇಳುತ್ತಿರುವುದು ಈ ರಿಕಾರ್ಡುಗಳು ಒಂದು ಆಫೀಸನ್ನು ಬಿಟ್ಟು ಇನ್ನೊಂದು ಆಫೀಸಿಗೆ ಸರಾಗವಾಗಿ ಹೋಗುತ್ತಲೇ ಇಲ್ಲ ಎಂದು. ಹೀಗೆಲ್ಲಾ ಆಗುವುದಕ್ಕೆ ಏನು ಕಾರಣ ಎಂದರೆ ಸರ್ಕಾರದಲ್ಲಿ ಆಡಳಿತ ನಡೆಸತಕ್ಕಂಥ ದಕ್ಷತೆ ಇಲ್ಲದಿರುವುದೇ ಆಗಿದೆ. ಈ ಹಿಂದೆ ನಾನೇ ಅನೇಕ ಸಲ ಇದೇ ಸಭೆಯಲ್ಲಿ ಸೆಸ್ಸುಗಳನ್ನು ವಸೂಲ್ಮಾಡುತ್ತಿರುವ ವಿಧಾನ ಸಕ್ರಮವಾಗಿಲ್ಲ ಎಂದು ದೂರುಗಳನ್ನಿತ್ತ ನಂತರ ಎಫಿಷಿಯನ್ಸಿ ಆಡಿಟನ್ನು ಮಾಡಿಸಿದರು. ಆಗ ಸರ್ಕಾರದವರು ರೈತರುಗಳಿಂದ ವಸೂಲ್ಮಾಡುತ್ತಿರುವ ಸ್ಪೆಷಲ್ ಸೆಸ್‌ಗಳ ಸಂಬಂಧದಲ್ಲಿ 2 ಆಣೆಗಳನ್ನು ಹೆಚ್ಚಾಗಿ-ಅವರ ಕಾನೂನಿಗೆ ವಿರೋಧವಾಗಿ ವಸೂಲ್ಮಾಡಿತಕ್ಕದ್ದು ಕಂಡುಬಂತು. ನಮ್ಮ ತುಮಕೂರು ಜಿಲ್ಲೆಯಲ್ಲಿ ಒಂದು ರೂಪಾಯಿಗೆ 5 ಆಣೆಗಳಂತೆ ಸೆಸ್ಸನ್ನು ವಸೂಲ್ಮಾಡಿದ್ದಾರೆ. ಈ ವಿಚಾರವನ್ನು ನಾನು ಹೋದ ಬಡ್ಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡಿದಾಗ ಸರ್ಕಾರದವರು ಈ ದುಬಾರಿಯಾಗಿ ವಸೂಲಾಗಿರತಕ್ಕಂಥ ಸೆಸ್ ಮೊಬಲಗನ್ನು ರೀ-ಫಂಡ್

(ಶ್ರೀ ಬಿ. ಹುಚ್ಚೇಗೌಡ).

ಮಾಡುವುದಾಗಿ ತಿಳಿಸಿದ್ದರು. ಆದರೆ ಈತಹಲ್
ವರೆಗೂ ಅದನ್ನು ರೀ-ಫಂಡ್ ಮಾಡಿಲ್ಲ. ಹೀಗೆ
ನ್ನೂರಾರು ಅಕ್ರಮಗಳ ನಡವಳಿಕೆಗಳನ್ನು ನಡೆಸಿರ
ತಕ್ಕ ಬಗ್ಗೆ ಯಾವುದಾದರೂ ಒಂದರ ವಿಚಾರದಲ್ಲಿ
ಯಾದರೂ ನಾನದನ್ನು ಸರಿಪಡಿಸಿದ್ದೇನೆ ಎನ್ನುವುದನ್ನು
ಸರ್ಕಾರದವರು ತಿಳಿಸಲಿ—ಅಥವಾ ಅಂಥ ಅಕ್ರಮ
ನಡವಳಿಕೆ ನಡೆಸಿರತಕ್ಕವರ ಮೇಲೆ ಸೂಕ್ತ ಕಾರ್ಯ
ಕ್ರಮಗಳನ್ನೇನಾದರೂ ಕೈಗೊಂಡಿರುತ್ತಾರೆಯೇ
ಎನ್ನುವುದನ್ನಾದರೂ ಹೇಳಲಿ. ಆಗ ನಾನು ಇವರಿಗೆ
ತಲೆಬಾಗಿಸುತ್ತೇನೆ. ಆದರೆ ಹಿಂದೆ ಹಾಗೆ ಈ ಹೆಚ್ಚು
ವರಿಯಾಗಿ ವಸೂಲ್ಮಾಡಿದ್ದಂಥ ತೆರಿಗೆಯನ್ನು
ವಾಪಸ್ಸು ಕೊಡುವುದಾಗಿ ತಿಳಿಸಿದ್ದ ಸರ್ಕಾರ, ಈ
ಹೊತ್ತು ಆ ಜನರು ಅದನ್ನು ಪ್ರಸ್ತಾಪ ಮಾಡಿದ್ದಕ್ಕೆ
ಕೆಲವು ಅಧಿಕಾರಿಗಳು ನೀವು ನಿಮಗೆ ಬರತಕ್ಕ
ಒಂದು ಆಣೆ ಎರಡು ಆಣೆ ರೀ-ಫಂಡಾಗತಕ್ಕ ಸಸ್
ಮೊಬಲಗಿಗೆ ಕೋರ್ಟಿಗೆ ಹೋಗಿ ಕ್ರಮ ದಾವ ತನ್ನಿ
ಅನಂತರ ನೋಡೋಣ' ಎಂಬುದಾಗಿ ಹೇಳುತ್ತಿದ್ದಾ
ರಂತೆ. ಇಂಥ ಆಡಳಿತ ನಡೆಸತಕ್ಕ ಸರ್ಕಾರದಲ್ಲಿ
ಆಡಿದ ಮಾತೇ ಇಲ್ಲ. ಸರ್ಕಾರದ ನಿಯತ್ತೇ ಹೀಗಿರು
ವುದರಿಂದ ಈ ಆಡಳಿತ ವರ್ಗದ ಜನರೂ ಸಹ ನಾವು
ಏನೇ ಮಾಡಿದರೂ ಅದನ್ನು ಯಾರೂ ಕೇಳತಕ್ಕ
ವರೇ ಇರುವುದಿಲ್ಲವೆಂಬ ಧೈರ್ಯದ ಮೇಲೆ ಅವರು
ತೀರ ಅಕ್ರಮ ನಡವಳಿಕೆಗಳನ್ನು ನಡೆಸುತ್ತಿದ್ದಾರೆ.
ಅಂಥವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಈ
ಸರ್ಕಾರಕ್ಕೆ ಶಕ್ತಿಯಿಲ್ಲ. ಈ ಸಕಾರಕ್ಕ ಅಂಥ ಆಡಳಿತ
ದಕ್ಷತೆಯಿಲ್ಲ. ಆದುದರಿಂದ ನಾನು ಈ ಡಿಮ್ಯಾಂಡ್
ಮನವಿಯನ್ನು ಒಪ್ಪಲು ಖಂಡಿತ ಸಾಧ್ಯವಿಲ್ಲವೆಂದು
ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ,
ನಮ್ಮ ಸರ್ಕಾರದವರು ಈ ಹೊತ್ತು ಈ ಆಡಳಿತವನ್ನು
ಯಾವ ವೈಖರಿಯಲ್ಲಿ ನಡೆಸುತ್ತಿದ್ದಾರೆ ಎನ್ನುವ ವಿಚಾರ
ವನ್ನು ನಿನ್ನೆಯ ದಿವಸ ನನ್ನ ಪರಮ ಮಿತ್ರರಾದಂಥ
ಶ್ರೀಮಾನ್ ಎಚ್. ಕೆ. ವೀರಣ್ಣಗೌಡರು ಬಹಳ ಸ್ವಾರ
ಸ್ಯವಾಗಿ ಹೇಳಿದ್ದಾರೆ. ಆದರೆ ಅವರು ಹಾಗೆ ಹೇಳಿರು
ವುದಕ್ಕಿಂತಲೂ ಇನ್ನೂ ಉತ್ತಮವಾಗಿ ಅಥವಾ ಇನ್ನೂ
ಹೆಚ್ಚಿನ ಪರಿಣಾಮಕಾರಿಯಾಗಿರತಕ್ಕ ರೀತಿಯಲ್ಲಿ
ಹೇಳುವುದು ಬಹಳ ಕಷ್ಟ. ಶ್ರೀಮಾನ್ ಟಿ. ಮರಿಯಪ್ಪ
ನವರು ಆರೀತಿಯಾಗಿ ಭಾಷಣ ಮಾಡಲು ನನ್ನ
ಕೈಲಂತೂ ಖಂಡಿತ ಆಗುತ್ತಲೇ ಇರಲಿಲ್ಲ ಎಂದು
ಹೇಳುತ್ತಿದ್ದಾರೆ. ನಾನೂ ಕೂಡ ಅಷ್ಟು ಮನದಟ್ಟು
ವಂತೆ ಹೇಳಲು ಸಾಧ್ಯವಿಲ್ಲವೆಂದೇ ಭಾವಿಸಿದ್ದೇನೆ.

ಸ್ವಾಮಿ ನಾವು ಈ ಹಿಂದೆ ದೇಶಕ್ಕೆ ಸ್ವಾತಂತ್ರ್ಯ
ವನ್ನು ಸಂಪಾದನೆ ಮಾಡಲು ಹೊರಟಿದ್ದೂ ಮತ್ತು
ಅಷ್ಟೊಂದು ಹೋರಾಟಗಳನ್ನು ನಡೆಸಿದ್ದೂ ಯಾವ
ಉದ್ದೇಶದಿಂದ ಎನ್ನುವುದನ್ನು ಈಗಿನ ಮಂತ್ರಿಮಂಡಲ
ನಡೆಸುತ್ತಿರುವವರು ಬಹುಶಃ ಮರೆತು ಹೋಗಿದ್ದಾ
ರೇನೋ ಎಂದು ನನಗೆ ಅನಿಸುತ್ತಿದೆ.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—
ಈಗಿನ ಮಂತ್ರಿಮಂಡಲದಲ್ಲಿ ಸ್ವಾತಂತ್ರ ಹೋರಾಟಕ್ಕೆ
ಸೇರದಿದ್ದ ಹೊಸಬರೂ ಇದ್ದಾರೆ.

ಶ್ರೀ ವಿ. ವೆಂಕಟಪ್ಪ.—ಹೌದು. ಈಗಿನ ಕಾಂಗ್ರೆಸ್
ಮಂತ್ರಿ ಮಂಡಲದಲ್ಲಿ ಹೊಸಬರೂ ಇದ್ದಾರೆ. ಈ
ದಿವಸ ನಮ್ಮ ರಾಜ್ಯಾಂಗದಲ್ಲಿ ಅಡಕವಾಗಿರತಕ್ಕಂಥ
ವಾಕ್ ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ ಮತ್ತು
ಪತ್ರಿಕಾ ಸ್ವಾತಂತ್ರ್ಯ ಇತ್ಯಾದಿಗಳೆಲ್ಲವೂ ಬಹಳ
ಮಟ್ಟಿಗೆ ಕುಂಠಿತಗೊಳಿಸಲ್ಪಟ್ಟಿವೆ. ದೇಶದಲ್ಲಿ ಮಾತ
ನಾಡುವುದೇ ಬಹಳ ಕಷ್ಟವಾಗಿದೆ ಎಂಬುದಾಗಿ ನಾವೆ
ಲ್ಲರೂ ಹೇಳುತ್ತಿದ್ದಂಥ ಒಂದು ಕಾಲ ಈ ದೇಶದಲ್ಲಿ ಈ
ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ಇತ್ತೆಂದು ಹೇಳು
ತ್ತಿದ್ದೆವು. ಆದರೆ ಈ ದಿವಸ ಕಾನೂನು ಮೂಲಕ
ವಾಗಿ ನಮ್ಮ ಈ ಹಕ್ಕುಗಳೆಲ್ಲಾ ಕಾದಿಡಲ್ಪಟ್ಟಿವೆ.
ಇಂಥ ಕಾಲದಲ್ಲಿಯೂ ಸಹ ನಾನು ಈ ನಮ್ಮ ಹಕ್ಕು
ಗಳು ಇಲ್ಲದಂತಾಗಿವೆ ಎಂದು ಹೇಳಲು ವಿಷಾದಿಸು
ತ್ತೇನೆ. ಈ ಹಿಂದೆ ನಾವೆಲ್ಲರೂ ನಮಗೆ ಈ
ಹಕ್ಕು ಬಾಧ್ಯತೆಗಳು ಒಂದೂ ಇರುವುದಿಲ್ಲವೆಂದು
ಹೇಳುತ್ತಿದ್ದಂಥ ಕಾಲ ಯಾವುದಿತ್ತೋ ಅಂಥ ದಿವಸ
ಗಳಲ್ಲಿ ಕೂಡ ನಮಗೆ ಈ ವಿಚಾರಗಳ ಬಗ್ಗೆ ಎಷ್ಟರ
ಮಟ್ಟಿಗೆ, ಎಂದರೆ, ಈ ವಾಕ್ ಸ್ವಾತಂತ್ರ್ಯ, ಸಭಾ
ಸ್ವಾತಂತ್ರ್ಯ ಇತ್ಯಾದಿ ವಿಚಾರಗಳ ಬಗ್ಗೆ, ಅವಕಾಶ
ವಿತ್ತೋ ಅಷ್ಟು ಕೂಡ ಈ ದಿವಸ ನಮಗೆ ಈ
ಸ್ವಾತಂತ್ರ್ಯಗಳ ಬಗ್ಗೆ ಅವಕಾಶವಿಲ್ಲವಲ್ಲ ಎಂಬ ಅಂಶ
ವನ್ನು ನಾನು ಬಹಳ ಖೇದದಿಂದ ಹೇಳಬೇಕಾಗಿದೆ.

ರಾಮನಗರಂ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿರು
ತ್ತವೆ, ಯಾವ ಯಾವ ಗ್ರಾಮಗಳ ವಿಚಾರ ಹೇಗಿರು
ತ್ತದೆ ಎನ್ನುವುದು, ಆ ರಾಮನಗರಂ ತಾಲ್ಲೂಕಿನಿಂದ
ಚುನಾವಣೆ ಹೊಂದಿ ಬಂದಿರತಕ್ಕ ಮಾನ್ಯ ಶ್ರೀ ಕೆ.
ಹನುಮಂತಯ್ಯನವರಿಗೆ (ಈ ದಿವಸ ಯಾರು ಮುಖ್ಯ
ಮಂತ್ರಿಗಳಾಗಿದ್ದಾರೋ ಅವರಿಗೆ) ಮತ್ತು ಯಾರು ಆ
ರಾಮನಗರಂ ತಾಲ್ಲೂಕು ನನ್ನ ಜಹಗಿರಿ ಎಂಬುದಾಗಿ
ಭಾವಿಸಿಕೊಂಡಿರುತ್ತಾರೋ ಅವರಿಗಿಂತ ಆ ತಾಲ್ಲೂಕಿನ
ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ನಾನು
ವಿದ್ಯಾರ್ಥಿ ದೆಶೆಯಲ್ಲಿದ್ದಾಗಲೇ ಸಮಾಜ ಸುಧಾರಣೆಯ
ವಿಷಯಗಳಲ್ಲಿ ಎಲ್ಲ ಗ್ರಾಮಗಳಲ್ಲೂ ಪ್ರಚಾರ ಭಾಷಣ
ಮಾಡಿದ್ದೇನೆ. ಆಗಿನಿಂದಲೂ ಆ ಪ್ರಾಂತ್ಯದಲ್ಲೆಲ್ಲಾ
ನಾನು ವಿಶೇಷವಾಗಿ ಪ್ರವಾಸ ಮಾಡಿ ಜನರ ಸಂಪರ್ಕ
ವನ್ನು ಬೆಳಸಿಕೊಂಡು ಬಂದಿದ್ದೇನೆ. ಆದರೆ ಇವರು ಆ
ಪ್ರಾಂತ್ಯಕ್ಕೆ ಈ ಸಮಾಜ ಸೇವೆ ಹೆಸರಿನಲ್ಲಿ ಕಾಲಿಟ್ಟದ್ದು
ಯಾವಾಗ? ವಾಸ್ತವಾಂಶಗಳು ಹೀಗಿದ್ದಾಗ್ಯೂ
ಈ ದಿವಸ ಪ್ರಜಾಪ್ರಭುತ್ವದ ಆಡಳಿತ ದೇಶದಲ್ಲಿ
ನೆಲೆಸಿರತಕ್ಕಂಥ ಕಾಲದಲ್ಲಿ, ಆ ಪ್ರಾಂತ್ಯದಲ್ಲಿ ನಮಗೆ
ವಾಕ್ ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ ಇತ್ಯಾದಿ
ಗಳು ಇಲ್ಲದಂತಾಗಿವೆ. ಹನುಮಂತಯ್ಯನವರ
ತಮ್ಮಂದಿರು ನನಗೂ ಮತ್ತು ನನ್ನ ಸ್ನೇಹಿತರಿಗೂ
"ನಮ್ಮ ತಾಲ್ಲೂಕಿನೊಳಕ್ಕೆ ಬರಲು ನೀವ್ಯಾರು?"
ಎಂಬುದಾಗಿ ಕೇಳಿದರು. ಈ ದಿವಸ ನನಗೆ ಆ
ತಾಲ್ಲೂಕಿನಲ್ಲಿ ಈ ಹನುಮಂತಯ್ಯನವರಿಗಾಗಲಿ
ಅಥವಾ ಇವರ ತಮ್ಮನಿಗಾಗಲಿ ಇರುವ ಹಕ್ಕಿಗಿಂತ
ಹೆಚ್ಚಾಗಿಯೇ ಇದೆ. ಇವರಿಗೆ ಆ ತಾಲ್ಲೂಕಿನಲ್ಲಿ ಇರ
ತಕ್ಕ ಜಮೀನಿನ ಹತ್ತರಷ್ಟು ಜಮೀನು ಅಲ್ಲಿ ನನಗಿದೆ.
ಹೀಗಿರುವಾಗ ಅವರು "ನೀವು ಇಲ್ಲಿಗೇಕೆ ಬರುತ್ತಿ
ದ್ದೀರಿ? ಇಲ್ಲಿ ನಿಮಗೇನು ಹಕ್ಕಿದೆ?" ಎಂದು ಕೇಳಿ
ದ್ದರ ಬಗ್ಗೆ ಈ ವಿಚಾರವನ್ನು ಮಾನ್ಯ ಸಭೆಯವರು
ಸ್ಥೂಲವಾಗಿ ಪರಿಶೀಲನೆ ಮಾಡಬೇಕಾದದ್ದು ಅಗತ್ಯ
ವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ಸಲ ನಾನೂ ಮತ್ತು ನನ್ನ ಸ್ನೇಹಿತರು
ಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರೂ, ಶ್ರೀ ಎನ್.
ಹುಚ್ಚಮಾಸ್ತಿಗೌಡರೂ ಅದೇ ತಾಲ್ಲೂಕಿನಲ್ಲಿ ಕೂಟಕಲ್
ಎಂಬ ಗ್ರಾಮಕ್ಕೆ ಒಂದು ಮೀಟಿಂಗ್ ಉದ್ದೇಶವಾಗಿ
ಹೊರಟಿದ್ದೆವು. ಆಗ ಆ ರಾಮನಗರಂ ಊರಿನ
ಕೆಲವು ಜನರು ರಸ್ತೆಯಲ್ಲಿ ಅಡ್ಡನಿಂತು "ನೀವು ನಮ್ಮ
ತಾಲ್ಲೂಕಿನಲ್ಲಿ ಬಂದು ಈ ರೀತಿಯಾಗಿ ಯಾವ ಸಭೆಗಳ
ನ್ನಾಗಲಿ ಅಥವಾ ಮೀಟಿಂಗುಗಳನ್ನಾಗಲಿ ಮಾಡ

ಕೂಡದು'' ಎಂಬುದಾಗಿ ನಮಗೆ ಅಡ್ಡಿಪಡಿಸಿದರು. ಆಗ ನಾನು ಆ ಜನರನ್ನು ಉದ್ದೇಶಿಸಿ ''ಏಕಪ್ಪಾ ನಾವು ಆ ರೀತಿ ಸಭೆ ಮಾಡಕೂಡದು ಎಂದು ಹೇಳುತ್ತೀರಿ? ನಿಮಗೆ ಇದರಿಂದ ಏನು ಕಷ್ಟವಾಗುತ್ತದೆ? ನೀವು ಕೂಡ ಆ ಸಭೆಗೆ ಬನ್ನಿ, ನೀವೂ ಕೂಡ ಆ ಸಭೆಯಲ್ಲಿ ಭಾಷಣ ಮಾಡಿ, ನಿಮಗೆ ತಿಳಿದಿದ್ದನ್ನು ನೀವು ಮಾತನಾಡಿ'' ಎಂದು ಹೇಳುತ್ತಿದ್ದೆನು. ಆಗ ಆ ಜನರು "ನೀವು ನಮ್ಮ ತಾಲ್ಲೂಕಿನೊಳಗೇ ಬರಕೂಡದೆಂದು ಹೇಳತಕ್ಕ ಅಧಿಕಾರ ನಮಗಿದೆ'' ಎಂಬುದಾಗಿ ವಾದ ಮಾಡುತ್ತಿದ್ದರು. ಅಷ್ಟು ಹೊತ್ತಿಗೆ ಸರಿಯಾಗಿ ಅಲ್ಲಿಗೆ ಶ್ರೀಮಾನ್ ವೀರಣ್ಣಗೌಡರ ಕಾರೂ ಸಹ ಬಂತು. ಆಗ ಈ ಜನರೆಲ್ಲರೂ ಅವರ ಕಾರಿನ ಹತ್ತಿರಕ್ಕೆ ಹೋದರು. ಆಗಲೂ ಸಹ ಇವರು ಆ ವೀರಣ್ಣಗೌಡರಿಗೂ ಇದೇ ರೀತಿ ಪ್ರಶ್ನೆ ಹಾಕಿದರು. ಆಗ ಶ್ರೀ ವೀರಣ್ಣಗೌಡರು "ನಮ್ಮನ್ನು ಈ ತಾಲ್ಲೂಕಿಗೆ ಬರಕೂಡದೆಂದು ಅಡ್ಡಿ ಮಾಡಲು ನೀವು ಯಾರು?'' ಎಂಬುದಾಗಿ ಅವರ ನೈಜವಾದ ರೀತಿಯಲ್ಲಿ ಅವರಿಗೆ ಹೇಳಿ, ಬಿಡೋ ಕಾರನ್ನು ಎಂಬುದಾಗಿ ಡ್ರೈವರಿಗೆ ಹೇಳಿ ಮುಂದಕ್ಕೆ ಹೊರಟೇ ಬಿಟ್ಟರು. ಶ್ರೀಮಾನ್ ಹುಚ್ಚಮಾಸ್ತಿಗೌಡರು ಸ್ವಲ್ಪ ತಡವಾಗಿ ಬಂದರು. ಅವರನ್ನೂ ಸುಮಾರು ಒಂದು ಘಂಟೆಯ ಕಾಲ ತಡೆದು ನಿಲ್ಲಿಸಿದರಂತೆ, ಬಿಡಲಿಲ್ಲ; ಇದಾದ 20 ದಿವಸಗಳ ಮೇಲೆ ಇಂಥದೇ ಮತ್ತೊಂದು ವಿಚಾರ ನಡೆಯಿತು. ಅದು ಆದದ್ದು ಜನವರಿ 12ನೆಯ ತಾರೀಖಿನಲ್ಲಿ. ಆ ಜನವರಿ 12ನೆಯ ತಾರೀಖಿನ ದಿವಸ ಆ ಕ್ಯಾಲಂಚ ಎಂಬ ಗ್ರಾಮದಲ್ಲಿ ಒಂದು ಸಭೆಯನ್ನು ನಡೆಸಬೇಕಾಗಿತ್ತು. ಅಲ್ಲಿಗೆ ಹೋಗುವಾಗ ನಡೆದ ವಿಚಾರವನ್ನೂ ತಿಳಿಸುತ್ತೇನೆ. ಶ್ರೀ ಹನುಮಂತಯ್ಯನವರು ಯಾವಾಗಲೂ ಸತ್ಯವನ್ನೇ ಹೇಳುತ್ತೇನೆಂದು ಹೇಳಿಕೊಳ್ಳುತ್ತಾರೋ ಹಾಗೆ ನಾನು ಹೇಳಿಕೊಳ್ಳದಿದ್ದರೂ ನನ್ನ ಮನಸ್ಸಿಗೆ ಧೃಡವಾಗಿದೆ ನಾನು ಹೇಳುವುದು ವಾಸ್ತವಾಂಶವೆಂದು. ಇದು ನಾವುಗಳು ಯಾರೂ ಶ್ರೀ ಹನುಮಂತಯ್ಯನವರ ಕ್ಷೇತ್ರಕ್ಕೆ ಹೋಗಿ ಜನರಿಗೆ ಅವರ ವಿಷಯದಲ್ಲಿ ತಪ್ಪು ಅಭಿಪ್ರಾಯ ಬರುವಂತೆ ಮಾಡಿಕೊಂಡ ಏರ್ಪಾಡೆಂದು ಶ್ರೀ ಹನುಮಂತಯ್ಯನವರು ತಿಳಿದುಕೊಂಡಿದ್ದರೆ ಅದು ಶುದ್ಧಾಂಗವಾಗಿ ತಪ್ಪು. ಅಲ್ಲಿಯ ಜನರು ಬಂದು ಮೂರು ನಾಲ್ಕು ದಿವಸ ಕಾದಿದ್ದರು. ಆಗ ನಾವು ನಮಗೆ ಬರಲು ವಿರಾಮವಿಲ್ಲವೆಂದು ಹೇಳಿದಾಗ್ಯೂ ಅಲ್ಲಿಯ ಜನರು ತಮಗೆ ಯಾವಾಗ ವಿರಾಮವಾಗುತ್ತೆಂದರೆ ಆಗಲೇ ನಾವು ಆ ಮೀಟಿಂಗನ್ನು ಇಟ್ಟುಕೊಳ್ಳುವುದಾಗಿ ಹೇಳಿದರು. ಅದಕ್ಕೂ ಕೂಡ ನಾನು ಖಂಡಿತ ಅವರಿಗೆ 'ಬರಲು ಸಾಧ್ಯವಿಲ್ಲ—ನಾವು ಅಲ್ಲಿಗೇನಾದರೂ ಬಂದರೆ ಆಗಿದ್ದ ಸಂದರ್ಭದಲ್ಲಿ ಒಂದು ತಪ್ಪು ಭಾವನೆ ಬರಬಹುದು, ಅದಕ್ಕೆಲ್ಲಾ ಏಕೆ ಅವಕಾಶಕೊಡಬೇಕು? ನೀವು ನಮ್ಮನ್ನು ಬಿಡಿ' ಎಂದು ಹೇಳಿದೆನು. ಆದಾಗ್ಯೂ ಅವರು ಒಂದೇ ಹಟ ಹಿಡಿದು ಬರಲೇ ಬೇಕೆಂದು ಹೇಳಿದರು. ಅಲ್ಲಿಯ ಜನರೆಲ್ಲಾ ಶ್ರೀ ಹನುಮಂತಯ್ಯನವರ ತಮ್ಮಂದಿರ ವಿಷಯದಲ್ಲಿ ಹೇಸಿ ಹೋಗಿದ್ದಾರೆ. ಯಾರಾದರೂ ಸರಿಯೇ ನಿಮ್ಮ ಪೈಕಿ ನಾಲ್ಕು ಜನರು ಬಂದು ಅಲ್ಲಿಯ ಜನರಿಗೆ ನಾಲ್ಕು ಮಾತುಗಳನ್ನು ಹೇಳಿ ಎಂಬುದಾಗಿ ಒತ್ತಾಯಪಡಿಸಿದರು. ಇದಕ್ಕಾಗಿ ನಾವು ಆ ಜನವರಿ 12ನೆಯ ತಾರೀಖು ಅಲ್ಲಿಗೆ ಹೋಗಲೇ ಬೇಕಾಗಿತ್ತು.

ಜನವರಿ 12 ನೇ ತಾರೀಖಿನ ದಿವಸ ನಾನು ಬೆಂಗಳೂರಿನಿಂದ ಹೋದೆ, ಹುಚ್ಚಮಾಸ್ತಿಗೌಡರು ಬಸ್ಸಿನಲ್ಲಿ ಹೋಗಿ ಶ್ರೀಮಾನ್ ಮಾದಯ್ಯಗೌಡರ ಮನೆಯಲ್ಲಿದ್ದರು. ಶ್ರೀ ಮಾದಯ್ಯಗೌಡರೂ ನಾನೂ, ಹುಚ್ಚಮಾಸ್ತಿಗೌಡರೂ ಇನ್ನಿಬ್ಬರು ಸ್ನೇಹಿತರೂ, ನನ್ನ ಕಾರಿನಲ್ಲಿ ಹೊರಟು ಕಾನ್‌ಕಾನ್‌ಹಳ್ಳಿ ರಸ್ತೆಯ ರೈಲ್ವೆ ಗೇಟಿನ ಬಳಿ ಹೋದೆವು. ಕೆಲವು ಜನ ಗೇಟಿನಬಳಿ ರಸ್ತೆಗೆ ಅಡ್ಡಲಾಗಿ ನಿಂತುಕೊಂಡಿದ್ದರು. ದಾರಿ ಬಿಡಿರಿ, ಇದೇಕೆ ಈ ರೀತಿ ನಿಂತಿದ್ದೀರಿ ಎಂದರೆ 'ದಾರಿ ಬಿಡುವುದಿಲ್ಲ' ಎಂದರು. ಏನಯ್ಯ ಏಕೆ ಬಿಡುವುದಿಲ್ಲ ಎಂದರೆ, ನೀವು ನಮ್ಮ ತಾಲ್ಲೂಕಿನಲ್ಲಿ ಬಂದು ಇದೆಲ್ಲಾ ಹೇಳಬಾರದು ಎಂದರು. ಅದಕ್ಕೆ ನಾವು "ಬನ್ನಿ, ನೀವೂ ಮಾತನಾಡಿ, ನಿಮಗೆ ಏನು ತೋರುತ್ತದೆಯೋ ಅದನ್ನು ಹೇಳಿ' ಎಂದು ಬಹಳವಾಗಿ ಹೇಳಿದೆವು. ಶ್ರೀ ಮಾದಯ್ಯಗೌಡರು ಬಹಳವಾಗಿ ಪೇಚಾಡಿಕೊಂಡರು. ಬೇಡಿ, ಇದು ಸರಿಯಾದ ಕಾರ್ಯವಲ್ಲ ಎಂದು ಹೇಳಿದರು. ಕೇಳಲಿಲ್ಲ. ನಾನು ಹಿಂದಕ್ಕೆ ಕಾರು ತೆಗೆದುಕೊಂಡು ಹೋಗಿ ಪೋಲೀಸ್ ಇನ್‌ಸ್ಪೆಕ್ಟರಿಗೆ, ಈ ರೀತಿ ಆಗಿದೆ ಇನ್ನು ಅದರಿಂದ ಘರ್ಷಣೆಗಳಿಗೆ ಅವಕಾಶವಾಗಿ ಕೆಡಕಾಗುತ್ತದೆ, ಅದಕ್ಕೆ ಅವಕಾಶ ಕೊಡದೇ ಇರುವುದು ಒಳ್ಳೆಯದು ಎಂದು ಹೇಳಿದೆ. ಒಬ್ಬ ಸಬ್ ಇನ್‌ಸ್ಪೆಕ್ಟರು ಮೊದಲು ಬಂದರು. ಆ ಮೇಲೆ ಇನ್‌ಸ್ಪೆಕ್ಟರು ಬಂದರು. ಅವರಿಗೆ ಏನೇನು ಹೇಳುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಹೇಳಿ ಸಮಾಧಾನಪಡಿಸಲು ಪ್ರಯತ್ನಪಟ್ಟರು. ಗೇಟು ತೆಗೆಯುವುದಿಲ್ಲ ಎಂದು ಷುರು ಮಾಡಿದರು. ಕೊನೆಗೆ ಪೋಲೀಸ್ ಇನ್‌ಸ್ಪೆಕ್ಟರು 'ತಡೆ ಗಟ್ಟಬಾರದು, ತಡೆ ಗಟ್ಟಿದರೆ ನಾವೇನಾದರು ಕಾರ್ಯ ಕೈಕೊಳ್ಳುತ್ತೇವೆ' ಎಂದು ಹೇಳಿದರು. ಆಮೇಲೆ ದಾರಿಬಿಟ್ಟರು. ಮುಂದೆ ಹೋದೆವು. ಮುಂದೆ ಹೋದರೆ ಅಲ್ಲಿ ಒಂದು ಮೈನರ್ ಫಾರೆಸ್ಟು ಇದೆ. ಅಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಒಂದಷ್ಟು ಜನ ಎದುರಿಗೆ ಬಂದರು. ಶ್ರೀಮಾನ್ ಹನುಮಂತಯ್ಯನವರ ತಮ್ಮ ಕಲ್ಲು ಹಿಡಿದುಕೊಂಡು ಕಾರಿನ ಮುಂದುಗಡೆ ಬಂದು ನಿಂತರು. ನಾವು ಕಾರು ಇಳಿದು, 'ಅಯ್ಯಾ ಇಂಥ ತುಂಟತನ ಮಾಡುವುದು ಸರಿಯಲ್ಲ' ಎಂಬುದಾಗಿ ಬಹಳವಾಗಿ ಹೇಳಿದೆವು. 'ಸ್ವಾಮಿ ಇಂತಹ ತುಂಟತನಕ್ಕೆ ನಾವೇನೂ ಹೆದರುವವರಲ್ಲ: ನಮ್ಮಿಂದಲೂ ಇಂಥ ಕೆಲಸ ಮಾಡಲು ಸಾಧ್ಯ. ಆದರೆ ಈಗ ಗಾಂಧಿಯ ಹೆಸರನ್ನು ಹೇಳಿಕೊಂಡು ಹೀಗೆಲ್ಲಾ ಮಾಡುವುದು ಸರಿಯಲ್ಲ. ಏನಾದರೂ ಸ್ವಲ್ಪ ಕೈಮೀರಿದರೆ ನಮಗೆಲ್ಲಾ ಕೆಟ್ಟ ಹೆಸರು ಬರುತ್ತದೆ, ಹೀಗೆಲ್ಲಾ ಮಾಡಬಾರದು, ಇದು ಸರಿಯಾದ ಮಾರ್ಗವಲ್ಲ. ಯಾರು ಬೇಕಾದರೂ ಸಭೆಗೆ ಬಂದು ಭಾಷಣಮಾಡಬಹುದು ಅಥವಾ ಬೇರೆ ಕಾನ್‌ಫರೆನ್ಸ್ ಮಾಡಬಹುದು' ಎಂದು ಬಹಳವಾಗಿ ಸಮಾಧಾನ ಹೇಳಿದರೂ ಕೇಳಲಿಲ್ಲ. ಶ್ರೀಮಾನ್ ಮಾದಯ್ಯಗೌಡರು ಕೆಳಗೆ ಇಳಿದು 'ಏನಯ್ಯ ಪುಟ್ಟಸ್ವಾಮಿ, ನಿನ್ನನ್ನೂ, ನನ್ನ ತಮ್ಮ ಎಂದು ತಿಳಿದುಕೊಂಡಿದ್ದೇನೆ, ನೀನು ನನ್ನನ್ನು ತಡೆಯುವುದಕ್ಕೆ ಬರಬಹುದೆ? ಇದೇಕೆ ಕೈಯಲ್ಲಿ ಕಲ್ಲು ಹಿಡಿದಿದ್ದೀಯಲ್ಲ?' ಎಂದು ಕೇಳಿದರು. ಅದಕ್ಕೆ ಆತ 'ನೀವು ಒಂದು ಹೆಜ್ಜೆ ಮುಂದಕ್ಕೆ ಇಟ್ಟರೆ ಕಲ್ಲಿಂದ ಹೊಡೆಯುತ್ತೇನೆ, ಸಾರ್' ಎಂದ. ಸರಿ, ಅಷ್ಟರಲ್ಲಿ ಸ್ವಲ್ಪ ಜನ ಸೇರಿದರು, ಅವರನ್ನು ಬೇರೆ ಕಡೆಗೆ ಕರೆದುಕೊಂಡು ಹೋದರು. ನಾವು ಮುಂದಕ್ಕೆ ಹೋದೆವು. ಮೀಟಿಂಗ್ ಆಗಬೇಕಾಗಿದ್ದ ಸ್ಥಳಕ್ಕೆ ಇನ್ನೂ ಎರಡು ಫರ್ಲಾಂಗು ಇತ್ತು. 2 ಘಂಟೆಗೆ ಮೀಟಿಂಗ್ ನಡೆಯಬೇಕಾಗಿತ್ತು. ಮೀಟಿಂಗ್ ಆಗಬೇಕಾಗಿದ್ದ ಸ್ಥಳಕ್ಕೆ ಸುಮಾರು 200 ಗಜ ದೂರದಲ್ಲಿ ಇದ್ದ ಗೌಡಯ್ಯನ ದೊಡ್ಡಿಯಲ್ಲಿ ಊಟಕ್ಕೆ ಏರ್ಪಾಟಾಗಿತ್ತು. ಅಲ್ಲಿ ಊಟಕ್ಕೆ ಕುಳಿತುಕೊಂಡೆವು. ಹನುಮಂತಯ್ಯನವರ ಇನ್ನೊಬ್ಬ ತಮ್ಮ ಒಂದಷ್ಟು ಜನರನ್ನು ಕಟ್ಟಿ

(ಶ್ರೀ ವಿ. ವೆಂಕಟಪ್ಪ).

ಕೊಂಡು ಬಂದು ಚಪ್ಪರದಲ್ಲಿದ್ದ ಮಹಾತ್ಮಾ ಗಾಂಧೀಯವರ ಫೋಟೋ, ಮಹಾರಾಜರವರ ಫೋಟೋ, ಜವಹರಲಾಲ್ ನೆಹರೂಅವರ ಫೋಟೋ ಇವುಗಳನ್ನೆಲ್ಲಾ ಕಿತ್ತು ಎಸೆದು ಚಪ್ಪರ ಉರುಳಿಸಬೇಕೆಂದು ಪ್ರಯತ್ನ ಮಾಡಿದರು. ಊಟ ಮಾಡುತ್ತಾ ನಾವು ಕುಳಿತುಕೊಂಡಿದ್ದೆವು. ಜನಗಳು ಏನು ನಡೆಯುತ್ತದೆಯೋ ಎಂದು ವಿಪರೀತ ಗಾಬರಿ ಆಗಿದ್ದರು. ನಾನೂ ಮಾದಯ್ಯಗೌಡರೂ ಎದ್ದು ಬಂದು 'ಪರಿಸ್ಥಿತಿ ಹೀಗಿದೆ, ಹದಗೆಟ್ಟೀತು, ಅದಕ್ಕೆ ಅವಕಾಶ ಕೊಡಬಾರದು' ಎಂದು ಹೇಳಿ ಒಂದು ಕಾಗದ ಬರೆದು ಪೋಲೀಸ್ ಇನ್ಸ್‌ಪೆಕ್ಟರಿಗೆ ಕಳುಹಿಸಿದೆವು. ಪೋಲೀಸ್ ಇನ್ಸ್‌ಪೆಕ್ಟರು ಗೇಟಿನ ಹತ್ತಿರ ಬಂದಿದ್ದವರು ನನ್ನ ಜೊತೆಯಲ್ಲೇ ಬರುತ್ತೇನೆ ಎಂದು ಹೇಳಿದವರು ಬರಲೇ ಇಲ್ಲ. ಕಾರಣ ಶ್ರೀಮಾನ್ ನಂಜಪ್ಪನವರು ಪೋಲೀಸ್ ಇನ್ಸ್‌ಪೆಕ್ಟರವರನ್ನು ವಾಚಾಮಗೋಚರವಾಗಿ ಬೈದು 'ನೀವೂ ಅವರ ಜೊತೆ ಸೇರಿಕೊಂಡು ಪ್ರೊಪಗ್ಯಾಂಡಾ ಮಾಡುವುದಕ್ಕೆ ಹೋಗಿರಿ. ನೀವು ಕಾಕಿ ಬಟ್ಟೆ ಏಕೆ ಹಾಕಿಕೊಂಡಿದ್ದೀರಿ ! ಅವರಂತೆಯೇ ಬಟ್ಟೆ ಹಾಕಿಕೊಂಡು ಹೋಗಿ', ಎಂದು ನೂರಾರು ಜನರ ಎದುರಿನಲ್ಲಿ ಗದರಿಸಿಕೊಂಡರಂತೆ. ಹೀಗಾಗಿ ಸರ್ಕಾರದ ಅಧಿಕಾರಿಗಳಿಗೆ ತಮ್ಮ ಕರ್ತವ್ಯವನ್ನು ಮಾಡಲು ಅವಕಾಶವಿಲ್ಲದಂತಾಗಿದೆ. ಕಾಗದ ಬರೆದು ಕಳುಹಿಸಿದ ಒಬ್ಬ ಪಾರ್ಲಿಮೆಂಟಿನ ಸದಸ್ಯರ ಮತ್ತು ಒಬ್ಬ ಮೈಸೂರು ಲೆಜಿಸ್ಲೇಟೀವ್ ಅಸೆಂಬ್ಲಿ ಸದಸ್ಯರ ಪ್ರೊಟೆಕ್ಷನ್ ಇಲ್ಲ. ಶ್ರೀಮಾನ್ ಹನುಮಂತಯ್ಯನವರು ಅವರಿಗೆ ಎಷ್ಟು ಪ್ರೊಟೆಕ್ಷನ್ ಬೇಕು, ಅವರ ಪ್ರಾಣ ಎಷ್ಟು ಮುಖ್ಯ ಎಂದು ತಿಳಿದು ಕೊಂಡಿದ್ದಾರೋ ಅಷ್ಟೇ ಮುಖ್ಯ ನಮ್ಮ ಪ್ರಾಣ, ಅಷ್ಟೇ ಪ್ರೊಟೆಕ್ಷನ್ ನಮಗೂ ಕೊಡಬೇಕು ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಅದನ್ನು ಕೊಡತಕ್ಕ ಭಾರವನ್ನು ಈ ಸರ್ಕಾರ ಹೊತ್ತಿದೆ. ಆದರೆ ಅವೊತ್ತಿನ ದಿವಸ ಸರ್ಕಾರ ಇಲ್ಲದಂತಾಯಿತು. ನಾವು ಕಾಗದ ಬರೆದು ಕಳುಹಿಸಿದರೂ ಕೂಡ ಅವರು ಬರಲಿಲ್ಲ. ನಿನ್ನೆತಾನೆ ಶ್ರೀಮಾನ್ ವೀರಣ್ಣಗೌಡರು ಹೇಳಿದರು, ಹನುಮಂತರಾಯನ ಗುಡಿಯ ಹತ್ತಿರ ದನಗಳ ಪರಿಷೆ ಎಲ್ಲಾ ಮುಗಿದ ಮೇಲೆ ಪ್ರೈಸ್ ಡಿಸ್ಟ್ರಿಬ್ಯೂಷನ್ ಮಾಡಬೇಕಾದರೆ ಡಿ.ಐ.ಜಿ. ವ್ಯಾನ್‌ಗಳಲ್ಲಿ ಪೋಲೀಸ್‌ನವರು ಬಂದು ಕಾದುಕೊಂಡಿದ್ದರು. ಮಂಡ್ಯದಲ್ಲಿ ಒಂದು ಪತ್ರಿಕೆಯ ಪ್ರಕಟಣೆಯ ಉದ್ಘಾಟನೆ ಮಾಡುವುದಕ್ಕೆ ಶ್ರೀಮಾನ್ ಹನುಮಂತಯ್ಯನವರು ದಯಮಾಡಿಸಿದ್ದರು. ಅಲ್ಲಿ ನೋಡಿದರೆ, ಐ.ಜಿ.ಆಫ್. ಪೋಲೀಸ್, ನೂರಾರು ಜನ ಪೋಲೀಸ್‌ನವರು, ಬಾಗಿಲಿನಲ್ಲಿ ಬಂದೂಕ ಹಿಡಿದುಕೊಂಡು ನಿಂತುಕೊಂಡಿರುವ ಶಿಪಾಯಿಗಳು. ಈ ರೀತಿ ಸರ್ಕಾರವನ್ನು ನಡೆಸುತ್ತೇನೆ ಎನ್ನುವುದು ನಿಜವಾಗಿಯೂ ಗೌರವಾರ್ಹವಾದುದಲ್ಲ. ನನ್ನಂತಹವನಾಗಿದ್ದಿದ್ದರೆ ಪ್ರಾಣ ಹೋದರೂ ಪರವಾಗಿಲ್ಲ ಪೋಲೀಸ್‌ನವರ ಸಹಾಯ ಬೇಕಿಲ್ಲ ಎಂದು ಹೇಳುತ್ತ ಇದ್ದೆ. ಪೋಲೀಸ್‌ನವರ ಸಹಾಯದಿಂದ ರಾಜ್ಯಾಡಳಿತ ನಡೆಸತಕ್ಕ ಪರಿಸ್ಥಿತಿಯಲ್ಲಿ ನಾಯಕರು ಇದ್ದರೆ, ಅವರು ನಿಜವಾಗಿಯೂ ದೇಶದ ನಾಯಕರು ಎಂದು ಹೇಳಿಕೊಳ್ಳುವುದು ಯೋಗ್ಯವೇ' ಎಂಬುದನ್ನು ಈ ಸಭೆ ಪರಿಶೀಲನೆ ಮಾಡಬೇಕು.

ಶ್ರೀ ಬಿ. ಹುಚ್ಚೇಗೌಡ.—ಅದಕ್ಕೆ ನೀವೇ ಜವಾಬ್ದಾರರು.

ಶ್ರೀ ವಿ. ವೆಂಕಟಪ್ಪ.—ಅದಕ್ಕೇ ಈ ಪ್ರತಿಫಲವನ್ನು ಅನುಭವಿಸುತ್ತಾ ಇದ್ದೇವೆ. ಇನ್ನೂ ಒಂದು ಸ್ವಾರಸ್ಯ ಇದೆ. ಈ ಮಂತ್ರಿಗಳಿಗೆ ಈ ರೀತಿ ನಡೆದಿದೆ ಸರಿಯಾದ ಕಾರ್ಯಕ್ರಮ ಕೈಗೊಳ್ಳಬೇಕೆಂದು ಬರೆದರೆ ಇಬ್ಬರು ಮಂತ್ರಿಗಳು ಉತ್ತರಕೊಡಲೇ ಇಲ್ಲ. ಇವರು ಜವಾಬ್ದಾರಿ ಸರ್ಕಾರದಲ್ಲಿ ನಮ್ಮಿಂದ ಚುನಾಯಿತರಾದ ಮಂತ್ರಿಗಳು, ಆದರೂ ನಮ್ಮ ಮಾತಿಗೇ ಬೆಲೆಯಿಲ್ಲ. ಶ್ರೀ ಚನ್ನಬಸಪ್ಪನವರು ಮಂತ್ರಿಗಳಾದ ಮೇಲೆ ಮೊದಲನೆಯ ಸಲ ನಮ್ಮ ಊರಿಗೆ ಬಂದ ದಿವಸ ನಾನು ಒಂದು ಪ್ರಾರ್ಥನೆ ಮಾಡಿಕೊಂಡೆ. "ಸ್ವಾಮಿ, ನಮ್ಮ ತಾಲ್ಲೂಕಿನಲ್ಲಿ ಯಾವ ಕೆಲಸವೂ ಆಗಿಲ್ಲ. ಆದರೂ ಚಿಂತೆ ಇಲ್ಲ; ಅದು ಎಂದಾದರೂ ಆಗಿಯೇ ಆಗುತ್ತದೆ. ನೀವು ಏನು ಮಾಡದಿದ್ದರೂ ಪರವಾಗಿಲ್ಲ. ಈ Rule of law ಜಾರಿಯಲ್ಲಿದೆ ಎನ್ನುವ ಮಟ್ಟಿಗೆ ನಮ್ಮ ಸರ್ಕಾರವನ್ನು ನಡೆಸಿದರೆ ಸಾಕು" ಎಂದು ಹೇಳಿದೆ. ಈಗ ಬಹು ಮಟ್ಟಿಗೆ ತಮಗೆ ಬೇಕಾದವರಿಗೆ ಬೇಕಾದ ಕೆಲಸ ಮಾಡಿಕೊಡುವುದು ತಮಗೆ ಬೇಡದವರಿಗೆ ತೊಂದರೆ ಕೊಡುವುದು ಈ ರೀತಿ ಪಕ್ಷಪಾತ ಈ ಸರಕಾರ ಮಾಡುತ್ತಿದೆ ಎಂದು ನಿನ್ನೆ ಶ್ರೀ ವೀರಣ್ಣಗೌಡರು ಏನು ಹೇಳಿದರೋ ಆ ದೃಷ್ಟಿಯಿಂದಲೇ ಎಲ್ಲಾ ಕೆಲಸವೂ ನಡೆಯುತ್ತಿದೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಶ್ರೀ ಹನುಮಂತಯ್ಯನವರು ಕಳೆದ ವರ್ಷ ಕಣ್ವ ಅಚ್ಚುಕಟ್ಟಿಗೆ ನೀರು ಸಾಲದು, ಬೇರೆ ಒಂದು ಕಾಲುವೆ ಮಾಡಿ ನೀರು ಒದಗಿಸಬೇಕೆಂದು ಹೇಳಿದ್ದಕ್ಕೆ, 'ಐದು ಲಕ್ಷ ರೂಪಾಯಿ ಮಂಜೂರಾಗಿದೆ, ಕೆಲಸ ಕೈಗೊಳ್ಳುತ್ತೇವೆ' ಎಂದು ಹೇಳಿದರು. ಅದಕ್ಕೆ ಒಂದು ಅಂದಾಜು ತಯಾರಾಗಿ ಕಾಂಟ್ರಿಬ್ಯೂಷನ್, ವಾಟರ್‌ರೇಟು ಹೆಚ್ಚಿಗೆ ಕೊಡಬೇಕೆಂದೂ, ಅದಕ್ಕೆ ಮುಚ್ಚಳಿಕೆ ಬರೆದು ಕೊಡಬೇಕೆಂದೂ ಮರಾಮತ್ ಇಲಾಖೆಯವರು ಕೇಳಿದರು. ಕಾಂಟ್ರಿಬ್ಯೂಷನ್, ವಾಟರ್ ರೇಟ್ ಎಷ್ಟು ಕೊಡಬೇಕೆಂದು ನಿರ್ಧರಿಸಲು ಮರಾಮತ್ ಇಲಾಖಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರನ್ನು ಆ ಪ್ರಾಂತದ ಜನರು ಬಂದು ನೋಡಿದೆವು. ಶ್ರೀ ಮಂಜಪ್ಪನವರು "ಈಗ ಆಖೈರು ಅಂದಾಜು ತಯಾರಾಗಿಲ್ಲ, ಒಟ್ಟು ಮೊಬಲಗು ಎಷ್ಟೆಂಬುದು ಖರಾರುವಾಕ್ಕಾಗಿ ಗೊತ್ತಾದ ಮೇಲೆ ಕಾಂಟ್ರಿಬ್ಯೂಷನ್, ವಾಟರ್ ರೇಟುಗಳನ್ನು ಸರ್ಕಾರದವರು ನಿರ್ಧರಿಸುತ್ತೇವೆ. ನೀವು ಅಂದಾಜು ತಯಾರು ಮಾಡಿರಿ ಎಂದು ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು. ಈ ಮಧ್ಯೆ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಮರಾಮತ್ ಇಲಾಖೆಯ ಮುಖ್ಯಾಧಿಕಾರಿಗಳನ್ನು ಕರೆಸಿ, ಆ ಹಳ್ಳ ಯಾವ ತಾಲ್ಲೂಕಿನಲ್ಲಿ ಹರಿಯುತ್ತದೆಯೋ ಆ ಪ್ರಾಂತದ ಜನರಿಗೇ ಅದರ ಪ್ರಯೋಜನವಾಗಬೇಕು, ಆದುದರಿಂದ ಈ ಕೆಲಸವನ್ನು ಕೈಗೊಳ್ಳಬೇಡಿರೆಂದು ತಿಳಿಸಿದ್ದಾರಂತೆ. ವಿಶಾಲಮನೋಭಾವವನ್ನು ಇತರರಿಗೆ ಬೋಧಿಸಿ ತಾವು ಈ ರೀತಿ ಸಂಕುಚಿತ ಮತ್ತು ಹೊಟ್ಟೆಕಿಚ್ಚಿನ ಮನೋಭಾವದಿಂದ ಕೂಡಿದ್ದರೆ ಅಂಥವರು ನಮ್ಮ ದೇಶದ ಸರಕಾರವನ್ನು ನಡೆಸಲು ಯೋಗ್ಯರಾಗುತ್ತಾರೆಯೆ ಎಂಬ ಅನುಮಾನವು ವಾಸ್ತವವಾಗಿ ಉಂಟಾಗುವುದರಲ್ಲಿ ತಪ್ಪೇನು ?

ಶ್ರೀ ಹನುಮಂತಯ್ಯನವರು ತಮ್ಮ ಕ್ಷೇತ್ರವಾದ ರಾಮನಗರಕ್ಕೆ ಎಷ್ಟು ಸಲ ಹೋದರೂ ಕೂಡ ಚಪ್ಪರಗಳನ್ನು ಹಾಕಿಕೊಂಡು ಕಾದುಕೊಂಡಿರಬೇಕೆ ? ಇಂತಹ ಆಡಂಬರಗಳನ್ನು ಹಿಂದಿನ ಸರ್ಕಾರದವರು ಮಾಡಿದ್ದರೆ ಇದನ್ನು ನಾವುಗಳೇ ಕಟುವಾಗಿ ಟೀಕಿಸುತ್ತಿದ್ದೆವು. ಈಗ ನಾವೇ ಈ ಕೆಲಸವನ್ನು ಮಾಡಿದರೆ ಜನರು ಏನೆಂದುಕೊಂಡಾರೆಂಬ ಯೋಚನೆಯೇ ಇಲ್ಲದಿರುವುದು ವಿಷಾದಕರ. ಪ್ರವಾಸ ಹೊರಡುತ್ತಾರಲ್ಲ ಆ ಓಡಾಟ, ಆ ಭರಾಟೆ ಏನು ಹೇಳೋಣ ? ಇದರಿಂದ ಒಂದು

ಕಾಸಿನ ಕೆಲಸವೇನಾದರೂ ಆಗುತ್ತಿದೆಯೇ? ಹೋದ ಕಡೆಗಳಲ್ಲೆಲ್ಲ ಮಾನಪತ್ರವನ್ನು ತೆಗೆದುಕೊಂಡು ಅದಕ್ಕೆ ಉತ್ತರವನ್ನು ಹೇಳುವುದು ಇಷ್ಟರಲ್ಲಿ ಆಗಿದೆಯೇ ಹೊರತು ಒಂದು ಆಫೀಸನ್ನೂ ಸಹ ತನಿಖೆ ಮಾಡುವುದಿಲ್ಲ. ಆಫೀಸುಗಳಲ್ಲಿ ಏನು ತೊಂದರೆಗಳಿವೆ, ಜನಗಳಿಗೆ ಅಧಿಕಾರಿಗಳಿಂದ ಏನು ತೊಂದರೆಗಳಿವೆ, ಒಂದು ಸಮಾಜಕ್ಕೆ ಜನತೆಗೆ ಪರಿಹಾರ ಮಾಡಿಕೊಡುವ ಅಥವಾ ಇನ್ನು ಯಾವುದಾದರೂ ಕಾಗದಗಳು ನಿಂತುಹೋಗಿದ್ದಲ್ಲಿ ಅದಕ್ಕೆ ಕಾರಣವೇನು, ಸಿಬ್ಬಂದಿ ಬೇಕಾದಷ್ಟು ಇಲ್ಲದೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೇ ಎಂಬುದನ್ನು ವಿಚಾರಿಸುತ್ತಿಲ್ಲ. ಇವರುಗಳ ಟೀಪಾರ್ಟಿ ಇವುಗಳ ಸಂತೋಷದಲ್ಲಿ ಕಾಲ ಕಳೆದು ಹೋಗುತ್ತಿದೆಯೇ ಹೊರತು ನಾಲ್ಕು ನಿಮಿಷ ನಿಂತುಕೊಂಡು ಜನರು ಹೇಳುವ ತಮ್ಮ ಕುಂದು ಕೊರತೆಗಳನ್ನು ಕೇಳುವುದಕ್ಕೂ ಪುರಸೊತ್ತೇ ಇಲ್ಲ. ಇಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದ ಪ್ರಯೋಜನವೇನು? ಒಂದು ದಿವಸವಾದರೂ ಒಂದು ತಾಲ್ಲೂಕಿನಲ್ಲಿದ್ದು ಯಾವ ಯಾವ ಸ್ಥಳಗಳನ್ನು ನೋಡಬೇಕೋ, ಯಾವ ಯಾವ ವಿಷಯಗಳನ್ನು ನೋಡಬೇಕೋ ಅದನ್ನು ಪರಿಶೀಲನೆ ಮಾಡಿ, ಅವು ಉತ್ತಮ ಸ್ಥಿತಿಗೆ ಬರುವುದಕ್ಕೆ ಏನು ಮಾಡಬೇಕು, ಹಳ್ಳಿಯ ರೈತನಿಗೆ ಜಾಗ್ರತೆ ಏನಾದರೂ relief ದೊರೆಯಬೇಕಾದರೆ ಯಾವ ರೀತಿ ಮಾಡಿದರೆ ದೊರೆಯುತ್ತದೆ ಎನ್ನುವುದರ ಕಡೆ ದೃಷ್ಟಿ ಇಲ್ಲದೆ ಇದ್ದರೆ ಇನ್ನೂ ಕೆಲವು ಕಾಲ ಕಾಂಗ್ರೆಸ್ಸನ್ನು ಹೇಗೆ ಉಳಿಸಿಕೊಂಡು ಬರುವುದು? ಮುಂದೆಯೂ ಸಹ ಉಳಿಸಿಕೊಂಡು ಬರಬೇಕಾದರೆ ಏನು ಕಾರ್ಯ ಮಾಡಬೇಕು ಎಂದು ದೃಷ್ಟಿಯಲ್ಲಿದ್ದರೆ ಮಾತ್ರ ದೇಶ ಉತ್ತಮ ಸ್ಥಿತಿಗೆ ಬರುತ್ತದೆ; ಕಾಂಗ್ರೆಸ್ಸಿನವರಿಗೆ ಸರ್ಕಾರವನ್ನು ವಹಿಸಿದ್ದರಿಂದ ಒಂದು ಒಳ್ಳೆಯ ಕೆಲಸವಾಯಿತು ಎಂದು ಹೇಳತಕ್ಕ ಪರಿಸ್ಥಿತಿ ಬರುತ್ತದೆ. ಬೇಕು ಬೇಕಾದ ಕಡೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿರಬಹುದು. ಆದರೆ ಜನರ ಮನಸ್ಸಿನ ಮೇಲೆ ಆಗಿರುವ ಪರಿಣಾಮ, ಯಾವ ವಿಧದಲ್ಲಿ ಸರ್ಕಾರ ನಡೆಯುತ್ತಿದೆ ಎನ್ನುವುದರ ವಿಷಯದಲ್ಲಿ ಜನರಲ್ಲಿ ಒಂದು ಒಳ್ಳೆಯ ಅಭಿಪ್ರಾಯ ಬಾರದೆ ಇದ್ದರೆ ನಿಜವಾಗಿ ಮುಂದೆ ನಮಗೆ ಬಹಳ ಕೆಟ್ಟ ಕಾಲ ಇದೆ ಎಂದು ನಾನು ಬಹಳ ವಿಷಾದದಿಂದ ಹೇಳುತ್ತೇನೆ.

ಸ್ವಾಮಿ, ಇನ್ನು ಹೆಚ್ಚು ಹೇಳುವುದಕ್ಕೆ ಪ್ರಯತ್ನ ಪಡುವುದಿಲ್ಲ. ನನ್ನ ಮಿತ್ರರು ಮಾತನಾಡಲು ಕಾತರರಾಗಿ ಇದ್ದಾರೆ. ಆದರೆ ಈ ಒಬ್ಬರಿಗೊಂದು ಒಬ್ಬರಿಗೊಂದು ಕಾರ್ಯ ಮಾಡಬಾರದು. ಕೈಲಂಚದಲ್ಲಿ ಮೀಟಿಂಗ್ನುನಡೆದ ಮಾರನೆದಿನ ಮೆಟ್ಟಿದೊಡ್ಡಿಯ ಕೆಲವು ಬಡವರ ಮೆದೆಗೆ ಬೆಂಕಿ ಹಾಕಿದ್ದಾರೆ. ಆ ಬಡವರಿಗೆ ಏನೂ ತಿನ್ನುವುದಕ್ಕಿಲ್ಲದಂತಾಗಿದೆ. ಅಂಥವರಿಗೆ ಏನಾದರೂ ಪರಿಹಾರ ಕೊಟ್ಟಿದ್ದಾರೆಯೇ? ಮೆಟ್ಟಿದೊಡ್ಡಿ ರೈತರಮೇಲೆ ಖಾರ ಇದೆ. ಯಾಕೆ ಖಾರವಿದೆ ಎನ್ನುವುದು ಜನರಿಗೆ ಅರ್ಥವಾಗುತ್ತದೆ.

ಆಮೇಲೆ ನಮ್ಮ ತಾಲ್ಲೂಕಿನಲ್ಲಿ ಈಗ ಕೆಲವು ದಿವಸಗಳ ಹಿಂದೆ ಏಳೆಂಟು ಮನೆಗಳು ಬೆಂದುಹೋದವು. ಇದು ನಡೆದದ್ದು ಕುಂತೂ ದೊಡ್ಡಿಯಲ್ಲಿ. ಅಲ್ಲಿ ಆದಿಕರ್ಣಾಟಕರ ಮನೆಗಳು, ಸುಮಾರು 50-60 ಖಂಡುಗ ರಾಗಿ, ಅವರು ಸಂಪಾದಿಸಿದುದೆಲ್ಲಾ ಬೆಂದುಹೋಯಿತು. ಇದಾಗಿ ಆಗಲೇ 15 ದಿವಸದ ಮೇಲಾಯಿತು. ಇದುವರೆಗೂ ಯಾವ ಪರಿಹಾರವನ್ನೂ ಕೊಟ್ಟಿಲ್ಲ. Fire accident ಆದರೆ ಅದರಿಂದ ನಷ್ಟಪಟ್ಟವರಿಗೆ ಕೊಡುವುದಕ್ಕೆಂದು ಇಲ್ಲಿ ನಾವು ಹಣ ಕೊಡುತ್ತೇವೆ. ತಮಗೆ ಬೇಕಾದಂಥವರಿಗೆ ಮಾತ್ರ ಕೊಡುತ್ತಾರೆ. ಈ ಅನ್ಯಾಯ ನಡೆಯಬಾರದು. ಇದನ್ನು ವಿಚಾರಮಾಡಿ ಅವರಿಗೆ ಆದಷ್ಟು ಜಾಗ್ರತೆ ಪರಿಹಾರ ದೊರಕಿಸಿಕೊಡಬೇಕು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಸ್ವಾಮಿ, ನಾನು General Administration ಮೇಲೆ ಮಾತನಾಡುತ್ತ ದೇಶಕ್ಕೆ ಆಗಿರತಕ್ಕ ಅಪಘಾತವನ್ನು ಇಲ್ಲಿ ಹೇಳಬೇಕು ಎಂದು ಇದ್ದೇನೆ. ಅದೇನೆಂದರೆ, ಕೋಲಾರ ಚಿನ್ನದ ಗಣಿಗಳ ರಾಷ್ಟ್ರೀಕರಣ ವಿಷಯ. ಅದನ್ನು ನಮ್ಮ ರಾಜಪ್ರಮುಖರು ಭಾಷಣದಲ್ಲಿ ಹೇಳಿದ್ದಾರೆ, Bill is being drafted ಎಂದು. ಅದನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳಿಲ್ಲ. ಆದರೆ ಎರಡನೆ ಪಾಂಚವಾರ್ಷಿಕ ಯೋಜನೆಯಲ್ಲಾಗಲಿ, ಬಡ್ಜೆಟ್ಟಿನಲ್ಲಾಗಲಿ ಇದಕ್ಕೆ ಒಂದು ಕಾಸನ್ನೂ ತೆಗೆದಿಲ್ಲ. ಇದನ್ನು ನೋಡಿದರೆ ಯಾಕೆ ತೆಗೆಯಲಿಲ್ಲವೆಂದು ನನಗೆ ಅರ್ಥವಾಗುತ್ತಿಲ್ಲ. ಈಗ ಎರಡು ವರ್ಷಗಳ ಕೆಳಗೆ, 1949ನೆಯ ಇಸವಿಯ ಅಗ್ರಿಮೆಂಟ್ ಪ್ರಕಾರ ನಮಗೆ ಯಾವ ವಿಧವಾದ ಆದಾಯವೂ ಸಲ್ಲುತ್ತಿಲ್ಲವಾದುದರಿಂದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವುದು ಅಗತ್ಯವೆಂದು ಆಗ ನಮ್ಮ ಅಸೆಂಬ್ಲಿಯ ಮುಂದೆ ತಂದರು. ನಾವುಗಳು agreementನ್ನು implement ಮಾಡಿದರೆ ಚೆನ್ನಾಗಿರುತ್ತದೆ ಮತ್ತು ಇದರಿಂದ 30-40 ಲಕ್ಷ ರೂಪಾಯಿ ತೆರಿಗೆ ಬರಬಹುದು ಎಂದು ಸಲಹೆಗಳನ್ನು ಕೊಟ್ಟರೆ, ಅಗ್ರಿಮೆಂಟಿಗೆ ಅಷ್ಟು ಗಮನಕೊಟ್ಟು enforce ಮಾಡುವುದಕ್ಕೆ ಬದಲು ಗಣಿಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ನಮ್ಮ ಮುಂದೆ ತಂದರು. ಅದನ್ನು ಒಪ್ಪಿಕೊಂಡೆವು. ಆ ದಿವಸ ನಾನು ಭಾಷಣ ಮಾಡುವಾಗ 'ಇವರು ಬ್ರಿಟಿಷರು; ಖಂಡಿತ ಅವರೇನಾದರೂ sabotage ಮಾಡುತ್ತಾರೆ. ನೀವೇನಾದರೂ ಮಾಡುವಹಾಗಿದ್ದರೆ ಜಾಗ್ರತೆ ಮಾಡಬೇಕು, ಇಲ್ಲದೆ ಇದ್ದರೆ ದೇಶಕ್ಕೆ ಅನ್ಯಾಯವಾಗುತ್ತದೆ' ಎಂದು ಹೇಳಿದೆ. ಆಗ ಹನುಮಂತಯ್ಯನವರು ದೆಹಲಿಗೆ ಟ್ರಂಕ್'ಕಾಲ್' ಹಾಕಿ, ಅಲ್ಲಿಂದ ಆರ್ಡರ್ ತರಿಸಿ, ತಕ್ಷಣ ಮಾಡುತ್ತೇವೆಂದು ಹೇಳಿದರು. ಎಷ್ಟು ದಿವಸವಾಯಿತು? ಈ ಒಳಗಾಗಿ ಗಣಿಗಳಲ್ಲಿ ಏನಾಗಿದೆ ಎಂದರೆ ಅಲ್ಲಿ ಒಂದು rock burst ಆಗಿದೆಯಂತೆ! ಇದು ನಮ್ಮ ಗ್ರಹಚಾರ. ಅಲ್ಲಿಯ ವ್ಯವಸ್ಥೆಯಲ್ಲಿ ಒಂದು ಭಾಗ ಉತ್ಪತ್ತಿ ಕಡಿಮೆಯಾಗಿದೆ. Rock burst ಆಗಿರುವುದನ್ನು ತೆಗೆಸಬೇಕಾದರೆ ಸುಮಾರು ಐದು ಲಕ್ಷ ರೂಪಾಯಿ ಖರ್ಚಾಗುತ್ತದೆಯಂತೆ. ಗಣಿಗಳನ್ನು ರಾಷ್ಟ್ರೀಕರಣ ಮಾಡುತ್ತೇವೆ ಎನ್ನುವ ಕೋಪದಮೇಲೆ ಆ ಕಂಪೆನಿಯವರು ಇದನ್ನು ತೆಗೆಯುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಇನ್ನೊಂದು rock burst ಆದರೆ ಆಯಿತು. ಹೀಗಿರುವ ಪರಿಸ್ಥಿತಿಯಲ್ಲಿ ಸರ್ಕಾರದವರಿಗೆ ಸ್ವಲ್ಪವಾದರೂ seriousness ಬೇಡವೇ? ಇದನ್ನು ಯಾವುದಕ್ಕೆ ಉಪಯೋಗಿಸಿಕೊಳ್ಳಬೇಕೆಂದು ಮಾಡಿದ್ದಾರೆಂದು ನಾನಾಗಲೇ ಹೇಳಿದೆ. ಎಲ್ಲೆಲ್ಲಿ ದುಡ್ಡು ಯಥೇಷ್ಟವಾಗಿದೆಯೋ ಅಲ್ಲೆಲ್ಲ ಬಾಯಿ ಹಾಕುವುದಕ್ಕೆ ಶುರುಮಾಡುತ್ತಾರೆಂದು ಹೇಳಿದೆ. ಇದೇನೂ ಹೊಸ ವಿಷಯವಲ್ಲ. ಮೊನ್ನೆ ಭಾಷಣದಲ್ಲಿ ಕೂಡ ಈ ರಾಷ್ಟ್ರೀಕರಣ (nationalization) ವಿಷಯದಲ್ಲಿ ಹೇಗೆ ಮಾಡುತ್ತಾರೆ, ಇಂಡಿಯಾ ಸರ್ಕಾರದವರು ಏನು ಹೇಳಿದ್ದಾರೆ ಎನ್ನುವುದೇನೂ ಇಲ್ಲ. ಈ ಗಣಿಯಿಂದ ದೇಶಕ್ಕೆ ನಾಲ್ಕು ಕೋಟಿ ರೂಪಾಯಿಗಳ ಉತ್ಪತ್ತಿಯ ಭಂಗಾರವಾಗುವುದು. ಇದು ಇಂಡಿಯಾ ದೇಶದಲ್ಲೆಲ್ಲ ಭಂಗಾರದಲ್ಲಿ ಒಂದು ದೊಡ್ಡ ಕೈಗಾರಿಕೆ. ಇಂಡಿಯಾದಲ್ಲಿ

(ಶ್ರೀ ಎಚ್. ಸಿ. ನಾಗಯ್ಯರೆಡ್ಡಿ)

ಆಗತಕ್ಕ ಉತ್ಪತ್ತಿಯಲ್ಲಿ ನೂರಕ್ಕೆ 98 ಭಾಗ ಭಂಗಾರ ಇಲ್ಲಿ ದೊರೆಯುತ್ತಿದೆ. ಇದನ್ನು ಯಾವ ರೀತಿ ಮಾಡುತ್ತಿದ್ದಾರೆಂದು ನೋಡಿದರೆ ಖಂಡಿತ ಸರ್ಕಾರದವರಿಗೆ ಅಲ್ಲಿ ಕಲಿತುಕೊಳ್ಳುವುದಕ್ಕೆ ಅರ್ಹತೆ ಇಲ್ಲವೆಂದು ನಾನು ಬಹಳ ಎಚ್ಚರಿಕೆಯಿಂದ ಹೇಳುತ್ತೇನೆ. ಇದು ಇಷ್ಟು ಪ್ರಾಮುಖ್ಯವಾದ ಕೈಗಾರಿಕೆ ಎನ್ನುವುದು ಗೊತ್ತಾಗಿದೆ. ಆದರೂ ಏತಕ್ಕೆ ಹೀಗೆ ಮಾಡಿದರು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಏಕೆ ಈ ಕೈಗಾರಿಕೆಯನ್ನು ರಾಷ್ಟ್ರೀಕರಣ ಮಾಡಲಿಲ್ಲವೆಂದರೆ ಇಂಡಿಯಾ ಸರ್ಕಾರದವರು ಒಂದು Expert Committee ಮಾಡಿದರು. ಅವರು ಪರಿಶೀಲನೆಮಾಡಿ 'ರಾಷ್ಟ್ರೀಕರಣ ಮಾಡುವುದಕ್ಕೆ ಅಷ್ಟು ಅನುಕೂಲವಾಗಿಲ್ಲ; ಸ್ವಲ್ಪ ಕಾಲ ಕಾದು ನೋಡಿ, ಎಂದರು. ಇಲ್ಲಿ ಏನು ಮಾಡಿದರೆಂದರೆ ಬಿಲ್ ತಂದರು. ನಾವು carry ಮಾಡದೆ ಇದ್ದರೆ the Assembly is not worth its salt ಎಂದು ಶ್ರೀ ಸಿದ್ದವೀರಪ್ಪನವರು ಹೇಳಿದ ಹಾಗೆ ಜ್ಞಾಪಕವಿದೆ. ಈಗ ಆ ಬಿಲ್ಲಿನ ವಿಷಯವೂ ಇಲ್ಲ, ನ್ಯಾಷನಲೈಸ್ ಮಾಡುವ ವಿಷಯವೂ ಇಲ್ಲ, ಅದೇನಾಯಿತೆಂಬುದೂ ಗೊತ್ತಿಲ್ಲ. ಇದು ದೇಶಕ್ಕೆ ಬಹಳ ಅಪಕೀರ್ತಿಯನ್ನು ತರುವ ವಿಷಯ. ಏಕೆ ರಾಷ್ಟ್ರೀಕರಣ ಮಾಡಲಿಲ್ಲವೆಂಬುದೂ ಗೊತ್ತಾಗಲಿಲ್ಲ. ಈ ವಿಷಯವಾಗಿ ಕಂಪೆನಿಯವರನ್ನು ಬೆದರಿಸಿ ಏನಾದರೂ ಉಪಯೋಗ ಪಡೆಯಬೇಕೆಂದು ಹೀಗೆ ಮಾಡಿದ್ದಾರೆಂಬ ವರ್ತಮಾನವಿದೆ. ಏಕೆ, ಸ್ವಾಮಿ, ಹಿಂದೆ ಹೇಳಿದಂತೆ ರಾಷ್ಟ್ರೀಕರಣ ಮಾಡಲಿಲ್ಲ? ಶ್ರೀ ಹನುಮಂತಯ್ಯನವರ ತಮ್ಮಂದಿರು ಗಣಿ ಪ್ರದೇಶಕ್ಕೆ ಹೋಗಿ ನೆಗೋಷಿಯೇಟ್ ಮಾಡುತ್ತಿದ್ದಾರೆ. ನಾನೇ ಖುದ್ದಾಗಿ ನೋಡಿದ್ದೇನೆ. ಇವರಿರುವಾಗ ಇವರ ತಮ್ಮಂದಿರೇಕೆ ಅಲ್ಲಿಗೆ ಹೋಗಿ ನೆಗೋಷಿಯೇಟ್ ಮಾಡಬೇಕು? ಅವರಿಗೂ ಇದಕ್ಕೂ ಸಂಬಂಧವೇನು? ಇಂಥ ಸಂದರ್ಭಗಳಲ್ಲಿ ದೇಶದ ಆಗುಹೋಗುಗಳಿಗೆ ಸಂಬಂಧಪಟ್ಟ ದೊಡ್ಡ ಕೈಗಾರಿಕೆಯ ವಿಷಯದಲ್ಲಿ ಹೀಗೆ ಚಿಲ್ಲರೆ ಪಲ್ಲರೆ ಕೆಲಸ ಮಾಡುತ್ತಿದ್ದರೆ ಹೇಗೆ?

1-30 P.M.

ರೇಸ್‌ಕ್ಲಬ್ಬಿನ ವಿಷಯದಲ್ಲಿ ಕೂಡ ನಿನ್ನೆ ಕೆಲವು ವಿಚಾರ ಹೇಳಿದರು. ಅದನ್ನೆಲ್ಲಾ ನೋಡಿದರೆ ಖಂಡಿತ ಯಾವ ಸರ್ಕಾರಕ್ಕೂ ಯಾವ ಕಾಂಗ್ರೆಸ್ ಸಂಸ್ಥೆಗೂ ಮಾನ ಉಳಿಯುವಹಾಗಿಲ್ಲ. ಸರ್ಕಾರಕ್ಕೂ ರೇಸ್ ಕ್ಲಬ್‌ನವರಿಗೂ ನಡೆದಿರುವ ಕರೆಸ್ಪಾಂಡೆನ್ಸ್ ನಾನು ನೋಡಿದ್ದೇನೆ. ಕ್ಲಬ್ಬಿನಲ್ಲಿ ಒಂದು ಸಮಿತಿ ಮಾಡಿದ್ದಾರೆ. ಅದಕ್ಕೆ ಒಬ್ಬ ಅಬ್ಸರ್ವರ್ ಕೇಳಿದ್ದಾರೆ. ಆ ಜಾಗಕ್ಕೆ ಐನೂರು ರೂಪಾಯಿ ಸಂಬಳ ಬರುವವರನ್ನು ಹಾಕಬೇಕೆಂದಿದ್ದಾರೆ. ಆ ಅಬ್ಸರ್ವರ್‌ಗೆ 950 ರೂಪಾಯಿ ಸಂಬಳ ಕೊಡಬೇಕಂತೆ. ಏಕೆ ಹೀಗೆ ಮಾಡುತ್ತಿದ್ದಾರೆಂದು ನಾನು ಯೋಚನೆ ಮಾಡಿದೆ. ಈಗ ಅಬ್ಸರ್ವರಾಗಿ ಹಾಕಬೇಕೆಂದು ಯಾರ ಹೆಸರನ್ನು ಸೂಚಿಸಲಾಗಿದೆಯೋ ಆ ಅಧಿಕಾರಿಯು ಯಾರೆಂದರೆ, ಶ್ರೀ ನಂಜಪ್ಪನವರಿಗೆ 37 ಸಾವಿರ ರೂಪಾಯಿಗಳ ಅವಾರ್ಡ್ ಕೊಟ್ಟವರು. ಅವರಿಗೆ ಮೆಜಾರಿಟಿ ಬೇಕಾಯಿತು. ಇದರಮೇಲೆ ಮುಖ್ಯ ಮಂತ್ರಿಗಳನ್ನು ಕ್ಲಬ್ಬಿಗೆ ವೈಸ್ ಪೇಟ್ರನ್ ಆಗಿ ಮಾಡಬೇಕಂತೆ. ಅವರಿಗೆ ನಷ್ಟವಾಗುತ್ತಿದ್ದರೆ ಕಂಡೀಷನ್ ಹಾಕಿ ಲೈಸೆನ್ಸ್ ಹಾಕುತ್ತಾರೆ. ರೇಸ್‌ಕ್ಲಬ್ಬಿನಿಂದ ಸರ್ಕಾರಕ್ಕೆ 15 ಲಕ್ಷ ರೂಪಾಯಿ ಉತ್ಪತ್ತಿಯಿದೆ, ಮುನಿಸಿಪಾಲಿಟಿಗೆ ಸುಮಾರು ಎರಡು ಲಕ್ಷ ರೂಪಾಯಿ ಸಿಕ್ಕುತ್ತದೆ, ಹೋಟಲುಗಳಿಗೆ ಮೂರು ತಿಂಗಳು ವ್ಯಾಪಾರವಿರುತ್ತದೆ, ಓದುವ ಹುಡುಗರು ಸುಮಾರು ಒಂದು ಸಾವಿರ ಜನರಿಗೆ 150 ರೂಪಾಯಿ ಸಿಕ್ಕುತ್ತದೆ, ಮೂರು ನಾಲ್ಕು ತಿಂಗಳು ಟೆಂಪೊರರಿಯಾಗಿ ದಿನಕ್ಕೆ ನಾಲ್ಕರಿಂದ ಹತ್ತು ರೂಪಾಯಿವರೆಗೆ ಸಂಬಳ ಕೊಡುತ್ತಾರೆ. ಆದಕ್ಕೆ ಬಿ.ಎ., ಎಂ.ಎ. ಪಾಸು ಮಾಡಿದವರೆಲ್ಲಾ ಹೋಗುತ್ತಾರೆ. ಅಲ್ಲಿ ಆರುನೂರು ಕುದುರೆಗಳಿವೆ. ಕುದುರೆಯೊಂದಕ್ಕೆ ಐನೂರು ರೂಪಾಯಿಗಳಂತೆ ಖರ್ಚಾಗುತ್ತಿತ್ತು. ಈಗ ಲಕ್ಷ ರೂಪಾಯಿ ಕೇಳಿದರು ಎಂದು ಏನೋ ಕ್ಷುಲ್ಲಕ ಕಾರಣ ಹೇಳಿದರು. ರೇಸ್‌ಗೆ ಲೈಸೆನ್ಸ್ ಕೊಡದಿರುವುದಕ್ಕೆ ಹೇಳಿರುವ ಕಾರಣ ಅರ್ಥವಾಗುವುದಿಲ್ಲ. ಈ ಬಾಬಿನ ನಷ್ಟ ನೋಡಿದರೆ ಗಾಬರಿಯಾಗುತ್ತದೆ. ಶ್ರೀ ನಂಜಪ್ಪನವರಿಗೆ 37 ಸಾವಿರ ರೂಪಾಯಿ ಅವಾರ್ಡ್ ಕೊಟ್ಟವರಿಗೆ 950 ರೂಪಾಯಿ ಸಂಬಳ ಕೊಡಲು ಶಿಫಾರ್ಸು ಮಾಡಿದ್ದಾರೆ. ಏಕೆಂದರೆ, ಅವಾರ್ಡ್ ಕೊಡುವಾಗ ಆ ವ್ಯಕ್ತಿ ಸರ್ಕಾರದ ಪರವಾಗಿ ಅನುಕೂಲ ಮಾಡಿದರು.

Sri A. G. RAMACHANDRA RAO.—Sir, that matter is *sub judice*.

Mr. SPEAKER.—The Hon'ble Minister says that the matter is *sub judice*. Therefore, it is better to drop that point.

ಶ್ರೀ ಎಚ್. ಸಿ. ನಾಗಯ್ಯರೆಡ್ಡಿ.—ಅದು ಸಬ್ ಜುಡಿಸ್ ಅಲ್ಲ, ತೀರ್ಮಾನವಾಗಿಲ್ಲ. ಶ್ರೀ ನಂಜಪ್ಪನವರಿಗೆ ಎಕರೆಗೆ 20 ರೂಪಾಯಿನಂತೆ ಕೊಟ್ಟು 50 ಎಕರೆ ಜಮೀನಿಗೆ ಒಂದು ಸಾವಿರ ರೂಪಾಯಿ ಬೆಲೆಯಾದರೆ ಅದಕ್ಕೆ ಅಲ್ಲಿರುವ ಖುಷ್ಕಿ ಜಮೀನಿನ ಸುತ್ತಲೂ ಗಾರ್ಡನ್ ಲ್ಯಾಂಡ್ಸ್ ಸಹ ಇವೆಯೆಂದು ಈ ದಿವಸ ಅದಕ್ಕೆ ಒಂದು ಲಕ್ಷ 7 ಸಾವಿರ ರೂಪಾಯಿ ಕೊಡಬೇಕೆಂದು ತೀರ್ಮಾನ ಮಾಡಿದರೆ ಅದು ನಿಲ್ಲುತ್ತದೆಯೆ? ಈ ಪ್ರಶ್ನೆ ಸಾರ್ವಜನಿಕವಾಗಿ ಅಸೆಂಬ್ಲಿಯಲ್ಲಿ ಚರ್ಚೆಯಾಗಿದೆ. ಎರಡು ವರ್ಷಗಳ ಕೆಳಗೆ ಸಾವಿರ ರೂಪಾಯಿ ಕೊಟ್ಟ ಜಮೀನಿಗೆ ಈ ದಿವಸ ಒಂದು ಲಕ್ಷ 7 ಸಾವಿರ ರೂಪಾಯಿ ಕೊಡುವುದಾದರೆ ಕಾಂಗ್ರೆಸ್ಸಿಗೆ ಮಾನ ಬರುತ್ತದೆಯೆ? ಇದಕ್ಕೆ ಅಪೀಲು ಮಾಡುತ್ತಾರಂತೆ. ಇಂಥ ಎವಿಡೆನ್ಸ್ ಇರುವಾಗ ಅವಾರ್ಡ್ ಅನುಕೂಲವಾಗಿ ಕೊಟ್ಟಿದ್ದಕ್ಕಾಗಿ ಕೊಟ್ಟವರಿಗೆ ಹೈಕೋರ್ಟ್ ಜಡ್ಜಿ ಶಿಫಾರಸು ಮಾಡಿಸಲಾಗಿದೆ. ರಿಕಾರ್ಡು ಜಾಗ್ರತೆ ಬರಲು ಸಹಾಯ ಮಾಡಿದ ವ್ಯಕ್ತಿಯನ್ನು ಕೂಡಲೆ ಪರ್ಸನಲ್ ಅಸಿಸ್ಟೆಂಟ್ ಮಾಡಿದರು. ಆಮೇಲೆ ಡಿಸ್ಟ್ರಿಕ್ಟ್ ಜಡ್ಜ್ ಯಾರಿದ್ದರೋ ಅವರಿಂದ ಸರಿಯಾದ ಅನುಕೂಲವಾಗುವುದಿಲ್ಲವೆಂದು ತಿಳಿಸಿ ಅವರನ್ನು ಇನ್ನೊಂದು ಕಡೆಗೆ ವರ್ಗಾಯಿಸಿ ಅವರಿದ್ದ ಜಾಗಕ್ಕೆ ಬೇರೆಯವರನ್ನು ಹಾಕಿದರು. ಆಮೇಲೆ ನಂಜಪ್ಪನವರಿಂದ ಅಪ್ಲಿಕೇಷನ್ ಹಾಕಿಸಿ ಕೇಸಿನ ಫೈಲನ್ನು ತರಿಸಿಕೊಂಡು ಕೇಸ್ ನಡೆಸಿದರು. ಐದು ವರ್ಷಗಳಿಂದ ಫೈಸಲಾಗದಿರುವ ರಿಕಾರ್ಡುಗಳಿದ್ದರೂ ಅವನ್ನೆಲ್ಲಾ ಬಿಟ್ಟು ನಂಜಪ್ಪನವರ ಕೇಸನ್ನು ತೆಗೆದುಕೊಂಡು ಒಂದು ಲಕ್ಷ 7 ಸಾವಿರ ರೂಪಾಯಿ ಕೊಡಬೇಕೆಂದು ಜಡ್ಜ್‌ಮೆಂಟ್ ಕೊಟ್ಟರು. ಇದು ನ್ಯಾಯವೆ? ಹಣ ಪಡೆಯಲು ಯಾವರೀತಿ ಮಾಡುತ್ತಾರೆ, ಈ ಸರ್ಕಾರ ಅನುಸರಿಸುತ್ತಿರುವ ನೀತಿಯೇನು ಎಂದು ನೋಡಿದರೆ ಎದೆ ಒಡೆದುಹೋಗುತ್ತದೆ. ಇದು ಎಲ್ಲಾದರೂ ಉಂಟೆ? ಡಿಸ್ಟ್ರಿಕ್ಟ್ ಜಡ್ಜಿಗಳನ್ನು ಇನ್‌ಫ್ಲೂಯೆನ್ಸ್ ಮಾಡುವ ನೀತಿ ಎಲ್ಲಾದರೂ ಉಂಟೆ? ಸೇಫ್ಟಿ, ಸೆಕ್ಯೂರಿಟಿ ಇದೆಯೆ? ನಮಗೆ ಬಹಳ ಗಾಭರಿ

ಯಾಗಿದೆ. ಯಾವಾಗ ಏನು ಮಾಡುತ್ತಾರೋ ಎಂದು ಗಾಬರಿಯಾಗಿದೆ. ನಾನು ಈಗ ಮಾತನಾಡಬಾರದೆಂದಿದ್ದೆ. ನಾನು ಈ ಸಲ ಅಸೆಂಬ್ಲಿಯಲ್ಲಿ ಮಾತನಾಡಿದರೆ ಮರ್ಡರ್ ಮಾಡುತ್ತೇವೆಂದು ಬೆದರಿಸಿ ಪತ್ರ ಬರೆದಿದ್ದಾರೆ: ನಾನು ವರ್ಷಕ್ಕೆ ಒಂದೇಸಲ ಮಾತನಾಡುವುದು. ಮೊನ್ನೆ ರಾಜಪ್ರಮುಖರ ಭಾಷಣದ ಮೇಲೆ ಮಾತನಾಡಿದರೆ ಸಾಕು ಈಗ ಮಾತನಾಡುವುದು ಬೇಡ ಎಂದಿದ್ದೆ. ಮೂರು ಸಾರಿ ನಿಂತೆ, ಆದರೂ ಅವಕಾಶ ಸಿಕ್ಕಲಿಲ್ಲ. ನನಗೆ ಪತ್ರ ಬಂದುದರಿಂದ ಮಾತನಾಡಲೇಬೇಕೆಂದು ನಿಂತೆ, ಅದು ಬರದಿದ್ದರೆ ನಾನು ಮಾತನಾಡುತ್ತಿರಲಿಲ್ಲ. ಆ ದಿನ ಮಾಡಿದ ಭಾಷಣವೇ ಈ ಅಧಿವೇಶನಕ್ಕೆಲ್ಲಾ ಸಾಕೆಂದು ಸುಮ್ಮನಿರುತ್ತಿದ್ದೆ. ಪೋಲೀಸಿನವರಿಗೇಕೆ ಈ ಪತ್ರ ಕೊಡಲಿಲ್ಲವೆಂದು ನನ್ನ ಸ್ನೇಹಿತರು ಕೇಳಿದರು. ಅದಕ್ಕೆ ನಾನು ಪೋಲೀಸಿನವರಲ್ಲಿ ನಂಬಿಕೆ ಹೋಗಿದೆಯೆಂದು ಹೇಳಿ ಈ ಪತ್ರವನ್ನು ಶ್ರೀ ನರಸಿಂಹರೆಡ್ಡಿಯವರ ಕೈಗೆ ಕೊಟ್ಟೆ. ಉದಾಹರಣೆಗಾಗಿ, ಪೋಲೀಸಿನವರ ದಕ್ಷತೆಯಬಗ್ಗೆ ಒಂದು ವಿಚಾರ ಹೇಳುತ್ತೇನೆ. ನನ್ನ ಜಮೀನುಪಕ್ಕದ ರೈತ ಮದುವೆ ಮಾಡಿಕೊಂಡ ಹತ್ತು ದಿವಸಗಳಲ್ಲೇ ಅವನ ಹೆಂಡತಿಯ ಒಡವೆಯನ್ನೆಲ್ಲಾ ಕಳೆದುಕೊಂಡ. ನಾನು ಏನಾದರೂ ಮಾಡಿ ಅದನ್ನು ಬರಮಾಡಿ ಕೊಡುತ್ತೇನೆಂದು ಹೇಳಿ ಪೋಲೀಸ್ ಇನ್ಸ್ಪೆಕ್ಟರಿಗೆ ಬರೆದೆ. ಅವರು ತನಿಖೆ ನಡೆಸುವುದಾಗಿ ಹೇಳಿದರು. ಪೋಲೀಸ್ ದಫೇದಾರರು, ಕಾನ್ಸ್ಟೇಬಲ್ಲುಗಳ ವಿಚಾದಲ್ಲಿ ನನಗೆ ಅಷ್ಟು ನಂಬಿಕೆಯಿಲ್ಲ. ಇನ್ನು ಮಿಕ್ಕವರಾರಾದರೂ ಹೋದರೆ ಅವರ ಪಾಡೇನಾಗಿರುತ್ತದೆ, ಸ್ವಾಮಿ ! ಆ ಪೋಲೀಸ್ ಇನ್ಸ್ಪೆಕ್ಟರೇ ಆತನಿಗೆ ಹೀಗೆ ಉತ್ತರ ಹೇಳಿದ್ದಾರೆ. ಅಂದಮೇಲೆ ಇವರು ದೇಶವನ್ನು ಉತ್ತಮ ರೀತಿಯಲ್ಲಿಟ್ಟುಕೊಳ್ಳುವುದು ಎಂದರೆ ಅದು ಹೀಗೆ ತಾನೆ ! ಇವೊತ್ತಿನ ಸರ್ಕಾರಕ್ಕೆ ಆಡಳಿತ ನಡೆಸತಕ್ಕಂಥ ಇಲ್ಲ ಎಂದು ಹೇಳಿ ಇದನ್ನು ತಳ್ಳಿಹಾಕುವುದಕ್ಕೆ ಮೊದಲೇ ಈ ಮಿನಿಸ್ಟ್ರಿ ಪಲಾಯನ ಮಂತ್ರ ಹೇಳುವುದು ಒಳ್ಳೆಯದೆಂದು ನನಗೆನಿಸುತ್ತಿದೆ. ಸ್ವಾಮಿ, ನಾವು ಮೊದಲೇನೋ ಮಾಡಬಾರದಾಗಿತ್ತು ; ಆದರೆ ಏನೋ ಇದನ್ನು ಮಾಡಿದ್ದಾಯಿತು. ಅವಕ್ಕಾಗಿಯೇ ನಾವೀಗ ಇದನ್ನೆಲ್ಲಾ ಅನುಭವಿಸುತ್ತಿದ್ದೇವೆ. ಶ್ರೀ ವೀರಣ್ಣಗೌಡರು ಆಗಲೇ ಹೇಳಿರುವಂತೆ ಈ ಆಡಳಿತವನ್ನು ಆದಷ್ಟು ಬೇಗ ತೆಗೆದುಹಾಕತಕ್ಕದ್ದು ಅತ್ಯಗತ್ಯ ಎಂಬುದಾಗಿ ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri Mulka GOVINDA REDDY (Chitaldrug).—Mr. Speaker, Sir, I oppose the Demand under the head 'General Administration' for Rs. 86,29,900. After the inauguration of the Indian Constitution, general elections were held and the period is now coming to a close. Shortly we are going to have general elections. Under the Constitution of India, freedom of expression, and freedom of association have been guaranteed. After hearing the woeful story as narrated by Sriyuts. Venkatappa and Veeranna Gowdh, I shudder to think whether we are working under a democracy or whether we are under the heels of Police raj. After what has been narrated by Sri Nagiah Reddy that he has received a threatening letter, we can well imagine whether we are really under a democratic form of Government or whether we are really functioning in a Fascist State. We can well imagine when that is the treatment meted out to Congressmen themselves, what would be the nature of treatment that would be meted out to the Opposition parties. When we have to face the elections, when we have to oppose the Congress, I am afraid we may not be allowed to have freedom of expression, freedom of holding meetings, freedom of thought, freedom of association or freedom to do anything. If that were to be the case, is it for this purpose that we fought for independence, is it for this purpose that we drove out the Britishers ? If we examine the conditions that were prevailing in those days and the conditions that are now prevailing, I am afraid one would say : woe be to the Congress Government. For the set eight years what they have been doing and what they have done will not bring them any credit. I was telling you that elections are approaching. Every liberty should be provided to the members of the Opposition to express themselves and to fight in those elections. The electoral rolls are now being prepared. What has been done by the municipalities which are torn with party factions, is, that the electoral rolls are not at all prepared in a manner in which they should be prepared. If I narrate my own case, in 1951 my name was not included in the electoral roll and I had to go before the revising authority to get my name enlisted as one of the voters. They have repeated the same thing even now. I had again to go to the revising authority to get my name corrected. When that is the position, I am afraid the Government is not taking any interest in preparing properand fair electoral rolls. I do not know whether it is done at the instance of the Government or whether the overzealous officials think that by doing such a thing they will be gaining the pleasure of the Government. They might be doing such things but under democracy

(SRI MULKA GOVINDA REDDY.)

such things should not be allowed. We expect that the elections would be fair, free and unfettered by those who possess powers or money. Many a time when elections are held, some of the members who are defeated prefer election petitions. These election petitions are not expeditiously disposed of. Many a time the Election Tribunals that are appointed in the States do not function properly and they have not that atmosphere. It is quite possible that the members of the Election Tribunal are being influenced by the members of the Government concerned. We have a standing instance where an election petition is pending for such a long time, for nearly a year or more.

Sri A. G. RAMACHANDRA RAO.—Where ?

Sri Mulka GOVINDA REDDY.—Sri Channabasappa's election petition.

Mr. SPEAKER.—That is *sub judice*.

Sri Mulka GOVINDA REDDY.—I am not going into the merits. I am questioning the propriety, why nearly 13 months have elapsed and no decision has been announced by the Election Tribunal. I therefore suggest that there should be some other procedure for these Election Tribunals.

Sri A. G. RAMACHANDRA RAO.—I may bring it to the notice of the Hon'ble Member that the Tribunal works under the Election Commission and under the Government of India and it is not within the purview of the Government of Mysore.

Sri Mulka GOVINDA REDDY.—That I know. Though for nominal purposes, for constitutional purposes and legal purposes, it is working within the purview of the Election Commission, the officers that are put as members of the Election Tribunal or as Chairman know pretty well that they are the servants of the Government of Mysore.

Sri A. G. RAMACHANDRA RAO.—I submit once again it is beyond the jurisdiction of this House to take notice of that. He is only a lent officer and he has to discharge the functions under the directions of the Commission and not under officers of Government.

Sri Mulka GOVINDA REDDY.—What I would suggest is, members should not be drawn from Mysore when appointments are made to these Election Tribunals. When an election is held in Mysore, members from outside Mysore should be appointed to the Election Tribunal so that any misuse can be avoided.

Sir, we are for all practical purposes in democracy. The Ministers are expected to behave like true representatives of the people. And when they have sworn by the socialist form of society, the responsibility on them is all the more greater. But the way in which our Ministers are going about, the way in which they are extravagantly spending the public money, one gets ahsamed to think that it is under democracy. Sir, if you compare the standard of living of our Ministers before they became Ministers with that after they became Ministers, one would shudder how on earth such a system could prevail. Have they got any conscience in them to spend so recklessly ? It has come to my notice that some of the Ministers are spending a sum of Rs. 400 to Rs. 500 on electric charges alone per month. Many a time the congress members used to say, used to criticise the old administration. (*A Voice*: shocking.) Yes, it is shocking news no doubt. They were making allegations against Sri Siddappa and Sri Imam. I do not hold any brief for them. But this much I can say. They were not making use of any Government car. They were using their own cars and they were getting higher salary. But if you compare all the emoluments of the then Ministers with the emoluments drawn by the present Ministers, you will see that at any rate they draw at least two to three times what the old Ministers were drawing. Our ministers are going on merrily. Sri Imam purchased one car when he was a Minister and he is still using that car. But our ministers change their cars every year. They have no responsibility. If only they were responsible to the Legislature and to the people, if they had only conscience, they would have made some economy. They would not have

spent moneys so lavishly and so extravagantly.

Sir, coming to Government hospitality organization, dignitaries from foreign countries have done us the honour of visiting the State of Mysore. All hospitality extended to such dignitaries I do not grudge. But the manner and the method in which it was done I take strong objection to. Whenever high dignitaries visit the State of Mysore, the order of precedence for invitations should be given to the members of the Legislature in whose hands the destiny of the State lies. Unfortunately and contrary to what has been said in the speech of the Finance Minister, the members of the Legislature are not cared for. They are not even invited. On the other hand, men in possession of power, men of position and of money, men who can hold some sort of influence are invited. That is an affront and insult to the members of the Legislature. If you follow only the teachings and preachings of the Chief Minister, those of Buddha and Gandhi pales into insignificance before him. Practice he will never attempt to nor does he think of putting into practice what he preaches. The other day he was telling us that the members of the Opposition want to have cheap popularity. But the Chief Minister himself wants to have cheap popularity. I do not grudge, let him have it. The way in which he goes about attending schools and trying to teach something,—I do not know what he teaches,-is ridiculous and if it is not cheap popularity what else is it ? He is not meant to teach. He is meant to administer the country in the interests of the people and not for teaching. It is a dereliction of duty with which I charge him, it is his madness. I therefore oppose the Demand.

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಎರಡು ಘಂಟೆಗಳಿಗಿಂತ ಹೆಚ್ಚಾಗಿ ಚರ್ಚೆಯಾಗಿದೆ. ಅನೇಕ ಮಹನೀಯರು ಅನೇಕ ವಿಷಯಗಳನ್ನು ಹೇಳಿದ್ದಾರೆ. ಆದರೆ ಕೆಲವು ಮೂಲ ಭೂತವಾದ ಪ್ರಶ್ನೆಗಳನ್ನು ಕೇಳಿದ್ದಾರೆ. ಶ್ರೀಮಾನ್ ಗೋವಿಂದರೆಡ್ಡಿಯವರು "Are we working a Democracy" ಎಂದೇ ಪ್ರಾರಂಭಮಾಡಿದರು. ಆ ವಿಷಯದಲ್ಲಿ ನಾನೂ ಅವರಷ್ಟೇ ಫ್ರ್ಯಾಂಕ್ ಆಗಿ ಹೇಳಬೇಕೆಂದು ನನಗೆ ಅನ್ನಿಸುತ್ತದೆ. ಡೆಮಾಕ್ರಸಿ ಇರುವುದರಿಂದಲೇ ನಾವೆಲ್ಲಾ ಇಲ್ಲಿ ಸೇರಿರುವುದು. ಇದರ ನಡವಳಿಕೆ ಸರಿಯಾಗಿ ನಡೆಯಬೇಕಾದರೆ ಅದು ಪ್ರಜೆಗಳ ಮೇಲೆ ಇರತಕ್ಕ ಒಂದು ದೊಡ್ಡ ಜವಾಬ್ದಾರಿಯು ಮೇಲೆ ಹೋಗುತ್ತದೆ. ಅವರು ಎಂತಹ ಸದಸ್ಯರನ್ನು ಚುನಾವಣೆಮಾಡಿ ಆ ಸದಸ್ಯರು ಎಂತಹ ಸರ್ಕಾರವನ್ನು ನೇಮಕ ಮಾಡುತ್ತಾರೋ ಅಂತಹ ಸರ್ಕಾರ ಇರುತ್ತದೆ. ಆದ್ದರಿಂದ ಇದರಲ್ಲಿ ದೋಷಾರೋಪಣೆಗಳನ್ನು ಹಂಚಿಕೆ ಮಾಡುವಾಗ್ಗೆ, ನಾವು ಲೋಪಗಳನ್ನು ಕಾಣಬೇಕು, ಅವನ್ನು ಸರಿಪಡಿಸಬೇಕು. ಎಲ್ಲೆಲ್ಲಿ, ಯಾವ ಯಾವ ಕಾಲದಲ್ಲಿ ಸರಿಪಡಿಸಬೇಕೋ ಆ ಕಾಲದಲ್ಲಿ ಸರಿಪಡಿಸಬೇಕು. ಆ ಒಂದು ದೃಷ್ಟಿಕೋಣವನ್ನು ಬಿಟ್ಟು ನಾನು ಹಿಂದೆ ಜವಾಬು ಹೇಳಿದಹಾಗೆ ಭೂತ ಕನ್ನಡಿ ಹಾಕಿಕೊಂಡು ನೋಡುವಹಾಗೆ ನೋಡಿದರೆ ಯಾವ ಉದ್ದೇಶದಿಂದ ಈ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತೇವೆಯೋ ಆ ಉದ್ದೇಶ ಅಷ್ಟು ಸಫಲವಾಗಲಾರದು. ಈಗ ಸಾಮಾನ್ಯವಾಗಿ ಈ ಒಂದು ಸಭೆ ತೆಗೆದುಕೊಳ್ಳೋಣ; ಈ ಸಭೆಯೊಳಗೆ ಈಗ ಚೀಫ್ ಮಿನಿಸ್ಟರು ಇಲ್ಲ. ಇರಬೇಕಾದದ್ದು ಕರ್ತವ್ಯ ಒಪ್ಪಿಕೊಳ್ಳುತ್ತೇನೆ. ಆ ಚೀಫ್ ಮಿನಿಸ್ಟರು ಇರಬೇಕಾದದ್ದು ಎಷ್ಟು ಕರ್ತವ್ಯವೋ Leader of the Opposition. ಇರಬೇಕಾದದ್ದೂ ಅಷ್ಟೇ ಕರ್ತವ್ಯ. ಮೊದಲೇ ಗೊತ್ತಾಗಿದ್ದಂತೆ ಅವರಿಬ್ಬರೂ ಒಂದೇ ಕಾಲದಲ್ಲಿ ಹೋಗಿದ್ದಾರೆ. ಸಾಮಾನ್ಯವಾಗಿ ಎರಡು ಮೂರು ತಿಂಗಳು ಈ ಸಭೆ ನಡೆದರೆ, ಅನೇಕವೇಳೆ ಹಿಂದೆ ನಿರ್ಣಯವಾಗಿದ್ದು ಮುಖ್ಯವಾದ ಕೆಲಸವಾಗಿದ್ದರೆ ಅದಕ್ಕೆ ಹೋಗಬೇಕಾಗುತ್ತದೆ. ಪ್ರೈಮ್‌ಮಿನಿಸ್ಟರ್ ಆದಿಯಾಗಿ ಹಾಗೆ ಹೋಗಿರುವುದನ್ನು ನಾವೆಲ್ಲಾ ನೋಡಿದ್ದೇವೆ. ಅದನ್ನು ಪ್ರಮಾದವಾಗಿ ಪರಿಗಣಿಸಬಾರದು. ಆದ್ದರಿಂದ ಈ ಒಂದು ಭಾವನೆಯನ್ನು ನಾವು ಸರಿಪಡಿಸಿಕೊಂಡು ಮಾತನಾಡುವುದು ಬಹಳ ಸೂಕ್ತ ಎಂದು ನನಗಾದರೂ ಅನಿಸುತ್ತದೆ.

2 P.M.

ಮುಖ್ಯ ಮಂತ್ರಿಗಳು ಒಂದು ಪಾಠ ಪ್ರವಚನ ಮಾಡಿದರೆ dereliction of duty ಆಗುತ್ತದೆ ಎಂದು ಹೇಳಿದರು. ತಮ್ಮ ಕೆಲಸದ ಜೊತೆಗೆ ಪಾಠ ಪ್ರವಚನಗಳನ್ನು ಮಾಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಬೇಕು ಎಂಬ ಉದಾತ್ತ ಧ್ಯೇಯವೇನಿದೆ ಅದು ಇತರರಿಗೆ ಮಾರ್ಗ ದರ್ಶನವಾಗುವುದು. ಇದರಲ್ಲಿ dereliction of duty ಆಗುವುದಿಲ್ಲವೆಂದು ಹೇಳುತ್ತೇನೆ.

ಅದೂ ಅಲ್ಲದೆ ಅವರ ಕ್ಷೇತ್ರ (constituency) ದಲ್ಲಿ ಅನೇಕ ವಿಷಯಗಳು ನಡೆದಿವೆ ಎಂದು ಹೇಳುತ್ತಾರೆ. ಆ ಕ್ಷೇತ್ರದಲ್ಲಿ ಆಗಿರುವ ವಿಷಯಗಳಿಗೆ ಮುಖ್ಯ ಮಂತ್ರಿಗಳ ಮೇಲೆ ಯಾವ ರೀತಿಯ ಜವಾಬ್ದಾರಿಯನ್ನೂ ಹೊರಿಸುವುದು ಸೂಕ್ತವೂ ಅಲ್ಲ, ನ್ಯಾಯವೂ ಅಲ್ಲ. ಅವರು ಒಂದು ಮನವಿ (representation) ಯನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ಪರಿಶೀಲನೆಯಲ್ಲಿದೆ ಎಂದು ಮಾತ್ರ ಹೇಳಲು ಬಯಸುತ್ತೇನೆ.

ಮುಖ್ಯವಾಗಿ ಕಾರುಗಳ ವಿಷಯ ಹೇಳಿದರು. ಇದರ ವಿಚಾರದಲ್ಲಿ ಒಂದು ನಿಯಮ ಮಾಡಿಕೊಂಡಿದ್ದಾರೆ. 50 ಸಹಸ್ರ ಮೈಲಿ ಆಗುವವರೆಗೂ ಆಯಾ ಮಂತ್ರಿಗಳ ಹತ್ತಿರವೇ ಕಾರುಗಳು ಇರಬೇಕು ಎಂದು ಆ ನಿಯಮವಿದೆ. ನನ್ನ ಹತ್ತಿರವಿರುವ ಕಾರು 50 ಕಾರು ಸಹಸ್ರ ಮೈಲಿ ಮೇಲೆ ಓಡಿದೆ. ಪ್ರತಿ ವರ್ಷವೂ ಗಳನ್ನು ತೆಗೆದುಕೊಳ್ಳುತ್ತಾರೆಂಬುದು ವಾಸ್ತವಾಂಶಕ್ಕೆ

(ಶ್ರೀ ಎ. ಜಿ. ರಾಮಚಂದ್ರರಾವ್.)

ದೂರವಾಗಿರುವ ವಿಷಯವಾಗಿದೆ. ಮತ್ತು ಇದೇ ಸಂದರ್ಭದಲ್ಲಿ 400 ರೂಪಾಯಿ, 500 ರೂಪಾಯಿ ಹೀಗೆ ವಿದ್ಯುಚ್ಛಕ್ತಿಗೆ ಕೊಡಬೇಕಾಗಿದೆ ಎಂದು ಹೇಳಿದರು. ನಾನಾದರೂ ಅದು ಉತ್ಪ್ರೇಕ್ಷೆ ಎಂದು ತಿಳಿದು ಕೊಂಡಿದ್ದೇನೆ. ನನ್ನ ಸ್ವಂತಕ್ಕೆ ಆಗುತ್ತಿರುವುದನ್ನು ನೋಡಿದರೆ. . . .

ಶ್ರೀ ಮುಲ್ಕ ಗೋವಿಂದರೆಡ್ಡಿ.—ಮುಖ್ಯ ಮಂತ್ರಿಗಳ ಮನೆಯಲ್ಲಿ ಖರ್ಚುಮಾಡಿದ್ದಾರೆ. 400-500 ರೂಪಾಯಿಗಳ Electric bills ಕೊಟ್ಟಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಪ್ರಾಯಶಃ leak ಆಗಿದ್ದರೂ ಆಗಿರಬಹುದು. ಸಾಮಾನ್ಯವಾಗಿ ಅಷ್ಟು ಆಗುವುದಿಲ್ಲವೆಂದು ನಾವು ತಿಳಿಯಬಹುದು. ಎಲೆಕ್ಷನ್ ಪಟ್ಟಿಗಳ ವಿಷಯದಲ್ಲಿ ಹೇಳಿದ್ದಾರೆ. ಆ ವಿಷಯವನ್ನು ಪರಿಶೀಲನೆ ಮಾಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲವೆಂದು ನನ್ನ ಭಾವನೆ. ಮುನಿಸಿಪಲ್ ಚುನಾವಣೆಗಳ ವಿಷಯವನ್ನು ಹೇಳಿದರು. ಇದರಲ್ಲಿನ ಕೆಲವು ಲೋಪಗಳು ದೇಶಾದ್ಯಂತ ನಮ್ಮ ಗಮನಕ್ಕೆ ಬರುತ್ತವೆ. ಆದರೆ ಅವರು ಹೇಳಿದ ಲೋಪ electoral roll ನಲ್ಲಿ ಹೆಸರು ಇರಲಿಲ್ಲವೆಂಬುದು. ಪಟ್ಟಿಯಲ್ಲಿ ಮತದಾರರ ಹೆಸರು ಇಲ್ಲದೆ ಇದ್ದರೆ ಅದನ್ನು ಸರಿಪಡಿಸಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ. It is the duty of every voter to get his name entered in the list. It is his concern. ಆ ಕೆಲಸ ಮಾಡದೆ ಇದೂ ಒಂದು ಲೋಪವೆಂಬುದಾಗಿಯೂ, 'ಅದರಲ್ಲಿಯೂ ಕೂಡ ಸರ್ಕಾರದವರು ಪ್ರವೇಶ ಮಾಡಬೇಕು, ನನ್ನ ಹೆಸರನ್ನು ಬಿಟ್ಟಿದ್ದಾರೆ' ಎಂದರೆ, ಯಾವ ದೃಷ್ಟಿಕೋನದಿಂದ ಇದನ್ನು ಹೇಳುತ್ತಿದ್ದಾರೆ, ಇದು ಸಾಧ್ಯವಾಗುತ್ತದೆಯೇ ಎಂದು ನೋಡಬೇಕು.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಸರ್ಕಾರದ ಕರ್ತವ್ಯವಲ್ಲವೆಂದು ಹೇಳುತ್ತಾರೆ. ಚುನಾವಣೆಗಳಿಗೆ ಪಟ್ಟಿಯನ್ನು ತಯಾರು ಮಾಡುವುದು ಸರ್ಕಾರದವರ ಕೆಲಸ. ನಮ್ಮಂಥ ಸದಸ್ಯರ ಹೆಸರೇ ಆ ಪಟ್ಟಿಗಳಲ್ಲಿಲ್ಲದ ಮೇಲೆ ಏನು ಹೇಳಬೇಕು?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದವರೂ ಮಂತ್ರಿಮಂಡಳದವರೂ ಭಾಗವಹಿಸಿ ಹೆಸರನ್ನು remove ಮಾಡಿಸಿದರು ಎಂದು ಅಷ್ಟು ದೂರ ಹೋಗುವುದು ಸೂಕ್ತವಲ್ಲವೆಂದು ಹೇಳುತ್ತೇನೆ. Threatening letter ವಿಚಾರ ಬಂತು. ಆ ಕಾಗದವನ್ನು ಪೋಲೀಸು ಇಲಾಖೆಯವರಿಗೆ ಕೊಡದೆ ಹೋದರೆ ಹೇಗೆ ವಿಚಾರ ಮಾಡುವುದು? Threatening letters, ಮತ್ತು anonymous letters ಬೇಕಾದಷ್ಟು ಬರುತ್ತವೆ. ಇಂಥ ಕಾಗದಗಳನ್ನು ಪೋಲೀಸಿನವರಿಗೆ ಕೊಟ್ಟರೆ ಅವರು ವಿಚಾರಿಸುತ್ತಾರೆ.

ಒಬ್ಬ ಸದಸ್ಯರು.—ಪೋಲಿಸು ಇಲಾಖೆಯಲ್ಲಿ ನಂಬಿಕೆಯಿಲ್ಲವಾದುದರಿಂದ ಅವರಿಗೆ ಕಳುಹಿಸುವುದು ಅನಾವಶ್ಯಕವೆಂದು ಹೇಳುತ್ತಾರೆ. ಅದಕ್ಕೆ ಏನು ಹೇಳುತ್ತೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಂಥ ಕಾಗದಗಳನ್ನು ಪೋಲೀಸು ಇಲಾಖೆಯವರಿಗೆ ಕೊಟ್ಟು ಪರೀಕ್ಷೆ ಮಾಡಿನೋಡಿ. ಒಂದು ಕಾಗದ ಬಂತು ಅದನ್ನು ಅವರ ಸ್ನೇಹಿತರಿಗೆ ಕೊಟ್ಟರು. ಪೋಲೀಸಿನವರಿಗೆ ಕೊಡದೆ ಇದ್ದರೆ ಅವರು ವಿಚಾರಮಾಡುವುದು ಹೇಗೆ? ಈ ರೀತಿಯ ಆಪಾದನೆಗಳನ್ನು ಎಷ್ಟು ಬೇಕಾದರೂ ಮಾಡಬಹುದು. ಅದರ ಫಲವೇನು ಎನ್ನುವುದನ್ನು ಯೋಚನೆ ಮಾಡಬಹುದು.

ಮೊಟ್ಟೆದೊಡ್ಡಿ ಕೇಸಿನ ಕಾಂಪೆನ್ಸೇಷನ್ ವಿಚಾರದಲ್ಲಿ ಅಪೀಲು ಹೋಗಬೇಕು ಎಂದು ಆರ್ಡರ್ ಆಗಿದೆ. ಇದುವರೆಗೆ ಅಪೀಲು ಹೋಗಿರಬಹುದು. ಇದು ಪೂರ್ತಿ ವಿಮರ್ಶೆಯಾಗದೆ ಇರುವ ಸಂದರ್ಭದಲ್ಲಿ ಟೀಕೆ ಟಿಪ್ಪಣಿಗಳನ್ನು ಮಾಡುವುದು ಅಷ್ಟು ಸಮಂಜಸವಲ್ಲ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—You must inform the House whether it is in appeal.

Sri A. G. RAMACHANDRA RAO.—Government has sent an order to the Advocate-General to file an appeal. But I do not know whether the appeal as such has been filed.

ಅನಂತರ ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಅದರ ವಿಷಯದಲ್ಲಿ ಸರ್ಕಾರ ಬಹಳ ತೀವ್ರಾಸಕ್ತಿಯಿಂದ ಕೂಡಿದೆ. ಅದು ಮೈಸೂರು ಸರ್ಕಾರಕ್ಕೆ ಮಾತ್ರ ಸಂಬಂಧಪಟ್ಟದ್ದು ಅವರ ಸ್ವಂತ ಜವಾಬ್ದಾರಿಯಿಂದ ಮಾಡತಕ್ಕ ಕೆಲಸವಲ್ಲ. ಕೇಂದ್ರ ಸರ್ಕಾರದ ಅಪ್ಪಣೆ ಮತ್ತು ಸಲಹೆ ಪಡೆದು ಮುಂದುವರಿಯಬೇಕು. ಅದರ ವಿಷಯದಲ್ಲಿ ತೀವ್ರವಾಗಿರತಕ್ಕ ಟೆಲಿಗ್ರಾಂಗಳು ಹೋಗಿವೆ, personal letters ಹೋಗಿವೆ. ಇದಕ್ಕೆ ಎಷ್ಟು ಗಮನ ಕೊಡಬೇಕೋ ಅಷ್ಟನ್ನೂ ಕೊಡದೆ ಇರುವುದಕ್ಕೆ ಕಾರಣ ಕೊಟ್ಟಿಲ್ಲ; ಇದನ್ನು ತೀವ್ರಾಸಕ್ತಿಯಿಂದ ಮಾಡಿಯೇ ತೀರಬೇಕು ಎಂದು inference ಬರುವ ರೀತಿಯಲ್ಲಿ ಮಾತನಾಡಿದರು. ಅದಕ್ಕೆ ಅವಕಾಶವಿಲ್ಲವೆಂದು ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಲ್. ಸಿದ್ದಪ್ಪ.—ಕಾಂಪೆನ್ಸೇಷನ್ ಕೊಡುವುದಕ್ಕೆ ಬಡ್ಜೆಟ್‌ನಲ್ಲಿ provide ಮಾಡಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್.—ಅಲ್ಲಿಂದ ಒಂದು ಜವಾಬು ಬಂದರೆ provide ಮಾಡುವುದು ಸೂಕ್ತ.

Sri N. HUCHMASTHY GOWDA.—A point of information. ಈಗ ಬಿಲ್ ಮಾಡುವುದಕ್ಕೆ ಕೇಂದ್ರದಿಂದ ಅನುಮತಿ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ಡ್ರಾಫ್ಟ್ ಬಿಲ್‌ಮಾಡಿ ಕಳುಹಿಸಿದ್ದೇವೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಮನೆಗೆ ಬೆಂಕಿಬಿದ್ದ ಕೆಲವು incident ಹೇಳಿದರು. ಅದೇರೀತಿಯಾಗಿ ಹರಿಹರದಲ್ಲಿಯೂ ಆದದ್ದು ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆ. ಇದು ನಮ್ಮ ಗಮನಕ್ಕೆ ಬಂದ ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಚನ್ನಪಟ್ಟಣ ತಾಲ್ಲೂಕಿನ ವಿಷಯದಲ್ಲಿ I will make enquiries and see that the necessary relief is afforded.

ಇನ್ನೂ ಕೆಲವು ಅಸ್ಪಷ್ಟವಾದ ವಿಷಯಗಳನ್ನೂ ಹೇಳಿದರು. ಆಮೇಲೆ ದಕ್ಷತೆಯ ವಿಷಯ ಹೇಳಿದರು. ಮುಖ್ಯಮಂತ್ರಿಗಳ ಮೇಲೆ ಅಪಾದನೆ ಮಾಡುವುದು ಸೂಕ್ತವಲ್ಲ. ಅವರಿಗೂ ಈ ವಿಷಯಗಳಿಗೂ ಸಂಬಂಧ ಮಾಡುವುದು ಸರಿಯಲ್ಲ.

Sri K. PATTABHIRAMAN (Kolar).—Just a clarification, Sir. Sri Venkatappa has made definite allegations which have to be met, namely, that the police were sent for and that the police actually moved but they were prevented from

going further and therefore the police did not function in the locality. That is the definite allegation made for which the responsibility must be taken by the Government.

ಶ್ರೀ ಎ. ಜಿ. ರಾಮಚಂದ್ರರಾವ್.—ಅವರ ಭಾಷಣದಿಂದ ಪೋಲೀಸು ಇನ್ಸ್‌ಪೆಕ್ಟರು ಸಹಕಾರ ಕೊಟ್ಟರು ಮತ್ತು ಅವರ ಜನ ಬಂದು interfere ಮಾಡಿದರು ಎಂದು ತಿಳಿಯಿತು. ಇತರರು ಯಾರಾದರೂ ಹೋಗಿ ಅವರಮೇಲೆ ಅಕ್ಷೇಪಣೆ ಮಾಡಿದ್ದರೆ ಅದು ಬೇರೆ ವಿಷಯ. ಈ ವಿಚಾರದಲ್ಲಿ ಒಂದು ಅರ್ಜಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದರಮೇಲೆ ಕಾರ್ಯಕ್ರಮ ನಡೆಯುತ್ತಿದೆ ಎಂದು ತಿಳಿದುಕೊಂಡಿದ್ದೇನೆ. ಇದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಭೆಗಳು ನಡೆಯುವಾಗ ಘರ್ಷಣೆಗಳು ಆಗುತ್ತವೆ ಎಂದು ನಿರೀಕ್ಷೆ ಮಾಡುವುದು ಪೋಲೀಸಿನವರ ಕರ್ತವ್ಯವಲ್ಲವೇ! ರಾಮನಗರಕ್ಕೆ ಕೇವಲ ಎರಡು, ಮೂರು ಮೈಲಿ ದೂರದಲ್ಲಿ ಸಭೆ ನಡೆಯುತ್ತಿರುವಾಗ ತೊಂದರೆಯಾಗುತ್ತದೆ ಎಂದು ನಿರೀಕ್ಷೆ ಮಾಡದೆ ಇದ್ದರೆ ಪೋಲೀಸಿನವರು ಯಾಕೆ ಇರಬೇಕು !

ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸಭೆಗೆ ಅಡ್ಡಿ ಮಾಡಿದ ಸಂದರ್ಭದಲ್ಲಿ ಪೋಲೀಸಿನವರು ಏನು ರಕ್ಷಣೆ ಕೊಟ್ಟರು, ಯಾವ ವಿಧವಾದ ಕಾರ್ಯಕ್ರಮ ತೆಗೆದುಕೊಂಡರು, ಅಲ್ಲಿ ನಡೆದಂಥ ವಿಷಯಗಳಲ್ಲಿ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

Sri K. PATTABHIRAMAN.—I will ask you further. Do you promise an enquiry into the allegations? I am not saying what happened at the meeting. That is a different matter. I am only anxious to see whether the administration against whom a definite allegation is made, namely, that the police did not interfere, did not perform their duty and they were prevented from giving such protection as a citizen of the State was entitled to, deliberately or otherwise—when such allegations are made and the fair name of the administration is assailed, will the Government promise an enquiry and make a categorical statement before the Session closes that, so far as the administration is concerned, its name cannot be tarred?

Sri A. G. RAMACHANDRA RAO.—I have already said; I will get that examined.

Sri D. DEVARAJA URS (Hunsur).—In addition to this, Sri Venkatappa was pleased to state that there was a comppleased to state that there was a complaint to the Home Minister and that he also complained but there was no reply so far. This is also a rather serious matter in my opinion. They should have made known to the concerned members who were affected by this as to what action had been taken in the matter by Government. This point may also be clarified.

Sri A. G. RAMACHANDRA RAO.—The points raised by Hon'ble Members will be included in the examination that Government is going to hold in the matter. ಸ್ವಾಮಿ, ಅನಂತರ ದಕ್ಷತೆ ಮತ್ತು ಪಕ್ಷಪಾತದ ವಿಚಾರದಲ್ಲಿ ಕೆಲವು ಆಪಾದನೆ ಮಾಡಿದರು. ಅದನ್ನು ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಯಾವುದೂ ಹೇಳಲಿಲ್ಲ, ಹೇಳಿದ್ದರೆ ನಮಗೆ ಅನುಕೂಲವಾಗುತ್ತಿತ್ತು, ಆಮೇಲೆ ಹೇಳಿದರೂ ಚಿಂತೆಯಿಲ್ಲ, ಹೇಳಿದರೆ ವಿಚಾರಿಸುತ್ತೇನೆ.

ಅನಂತರ ನಾನ್-ಗೆಜೆಟೆಡ್ ಆಫೀಸರುಗಳ ಸಂಬಳದ ವಿಷಯದ ಮೇಲೆ ಮಾತನಾಡಿದರು. ಮೈಸೂರು ದೊಡ್ಡದಾಗುವುದರಿಂದ ಈ ಸಂದರ್ಭದಲ್ಲಿ ಅದನ್ನು ಪರಿಶೀಲಿಸುವುದು ಸೂಕ್ತವೆಂದು ಶ್ರೀ ಹುಚ್ಚಮಾಸ್ತಿಗೌಡರೂ ಒಪ್ಪಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ ಅವರ ಭಾಷಣದಲ್ಲಿ ಅದನ್ನು ವಿಶದವಾಗಿ ಹೇಳಿದ್ದಾರೆ. ಈ ವಿಷಯದಲ್ಲಿ ಈ ಸಭೆಯ ಗಮನವನ್ನು ಮುಖ್ಯಮಂತ್ರಿಗಳ ಭಾಷಣದ 5 ಮತ್ತು 6ನೆಯ ಪುಟಗಳ ಕಡೆಗೆ ಸೆಳೆದರೆ ಪೂರ್ಣವಾದ ಉತ್ತರ ಸಿಕ್ಕುತ್ತದೆಂದು ನಂಬಿದ್ದೇನೆ.

ಕೆಲವು ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು, ಆಗಿಲ್ಲ ಎಂದು ಹೇಳಿದರು. ಅದನ್ನು ವಿಚಾರ ಮಾಡುತ್ತೇನೆ. ಲ್ಯಾಕ್ ಆಫ್ ಕೋ-ಆರ್ಡಿನೇಷನ್ ಇದೆಯೆಂದು ಹೇಳಿದರು. ಎಷ್ಟು ಕೋ-ಆರ್ಡಿನೇಷನ್ ಬೇಕೋ ಅಷ್ಟಿದೆ; ಆದರೆ ಸಮ್ಮಿಳನವಾಗಬೇಕಾದದ್ದು ಆಗುತ್ತಿಲ್ಲ ಎಂದು ಹೇಳಬಹುದೇ ಹೊರತು ಕೋ ಆರ್ಡಿನೇಷನ್ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಹೊಸ ಕಾರ್ಯಕ್ರಮದಲ್ಲಿ ಸಮಾಜದ ದೃಷ್ಟಿಕೋಣ ಬದಲಾಯಿಸಿ ವೆಲ್‌ಫೇರ್ ಸ್ಟೇಟ್ ಆಗಿದೆ. ಇತರ ಸಂಸ್ಥಾನಗಳಲ್ಲೂ ಇದೇ ರೀತಿಯ ತೊಂದರೆ ಕಂಡು ಬಂದಿದೆ. ಕೋ-ಆರ್ಡಿನೇಷನ್ ಬಯಸುವಷ್ಟಿಲ್ಲವೆಂದು ಹೇಳಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಹಿಂದೆ ಕೋ-ಆರ್ಡಿನೇಷನ್ ಕಮಿಟಿಯೆಂದು ಮಾಡಿದ್ದಿರಿ. ಅದನ್ನು ವಜಾಮಾಡಿದಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ, ಅದು ಜಾರಿಯಲ್ಲಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮುಖ್ಯ ಮಂತ್ರಿಗಳ ಭಾಷಣದ ಏಳನೆಯ ಪುಟದಲ್ಲಿ ಹೇಳಿರುವ ಒಂದು ವಾಕ್ಯವನ್ನು ಓದಿದರೆ ಸ್ಪಷ್ಟವಾಗಿ ಈ ವಿಚಾರ ಗೊತ್ತಾಗುತ್ತದೆ. "ಸರ್ಕಾರದ ಬೇರೆಬೇರೆ ಇಲಾಖೆಗಳು ಬಹುಮಟ್ಟಿಗೆ ಒಂದಕ್ಕೊಂದಕ್ಕೆ ಸಂಬಂಧವಿಲ್ಲದೆ ಕೆಲಸ ನಡೆಸಿಕೊಂಡು ಹೋಗುವ ಪರಿಸ್ಥಿತಿಯೇ ಬೆಳೆಯುತ್ತಾ ಬರುತ್ತಿದೆ." ಎಂದು ಸ್ಪಷ್ಟವಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ಎಷ್ಟಿರಬೇಕೋ ಅಷ್ಟಿಲ್ಲವೆಂದು ಹೇಳಿ ಬೆಳೆಯುತ್ತಾ ಬರುತ್ತಿದೆಯೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೇ ನಾನು ಹೇಳಿದ್ದು, ಆದ್ದರಿಂದ ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು ಸಿಕ್ಕಿತು ಎಂದು ಹೇಳುವಹಾಗಿದೆ. ಇಷ್ಟು ಹೇಳಿ ನಾನು ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—The question is:

"That a sum not exceeding Rs. 86,29,900 be granted to the Government to defray the charges which will come in course of payment during the year ending 31st day of March 1957, in respect of 'General Administration (Except the sub-major heads B and C).'"

The motion was adopted.

Sri K. PATTABHIRAMAN.—Just a word, Sir. These friends who wanted to get rid of the Administration have voted for the Demand.

(Laughter.)

DEMAND No. 30—FAMINE RELIEF.

54. FAMINE RELIEF.

Mr. SPEAKER.—Motion moved:

"That a sum not exceeding Rs. 5,95,000 be granted to the Government to defray the charges which will come in course of payment during the year ending 31st day of March 1957, in respect of 'Famine'."

(No member rose to speak.)

Mr. SPEAKER.—The question is:

"That a sum not exceeding Rs. 5,95,000 be granted to the Government to defray the charges which will come in course of payment during the year ending 31st day of March 1957, in respect of 'Famine'."

The motion was adopted.

Mr. SPEAKER.—Now the House will rise and meet at 2 o'clock tomorrow.

The House adjourned at Fifteen Minutes past Two of the Clock to meet at Two of the Clock on Sunday, 18th March 1956.

WD 2896—GPB—550—18-5-56